# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 24 ಭಾನುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 335 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಭಾನುವಾರ 24 ಮಾರ್ಚ್ 2024

# ಹುತಾತ್ಮರ ದಿನ: ರುದ್ರಭೂಮಿಯಲ್ಲಿ ಸ್ವಚ್ಛತಾ ಕಾರ್ಯ

ಮೈಸೂರು,ಮಾ.23(ಎಂಟಿವೈ)–ಹುತಾತ್ಮರ ದಿನದ ಅಂಗವಾಗಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರಘಾಟ್ ರುದ್ರಭೂಮಿಯಲ್ಲಿ ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವಮೆಂಟ್ ಸದಸ್ಯರು ಸ್ವಚ್ಛತಾ ಅಭಿಯಾನ ನಡೆಸಿ, ಪ್ಲಾಸ್ಟಿಕ್ ಸೇರಿದಂತೆ ಭಾರೀ ಪ್ರಮಾಣದ ತ್ಯಾಜ್ಯವನ್ನು ತೆರವುಗೊಳಿಸಿದರು.

ಮೈಸೂರು ಮಹಾನಗರ ಪಾಲಿಕೆ, ವಾಯು ವಿಹಾರಿಗಳ ಸಹಕಾರದಿಂದ ಎಕ್ಸ್ ಸರ್ವಿಸ್‌ಮೆನ್ ಮೂವ್‌ಮೆಂಟ್, ಸ್ವಚ್ಛತಾ ಅಭಿಯಾನಕ್ಕೂ ಮುನ್ನ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಭಾವಚಿತ್ರ ಹಾಗೂ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಮೈಸೂರಿನ ಯೋಧ ದಿ. ಹೇಮಚಂದ್ರ ಸಮಾಧಿಗೆ ಪುಷ್ಪಾರ್ಚನೆ ಮಾಡಲಾಯಿತು. ಅಭಿಯಾನದಲ್ಲಿ 80ಕ್ಕೂ ಹೆಚ್ಚು ಮಾಜಿ ಸೈನಿಕರು, ಸೈನಿಕ್ ಅಕಾಡೆಮಿ ತರಬೇತಿ ಪಡೆಯುತ್ತಿರುವ 50 ಶಿಬಿರಾರ್ಥಿಗಳು, ನಗರಪಾಲಿಕೆಯ 30 ಪೌರಕಾರ್ಮಿಕರು, ವಾಯು ವಿಹಾರಿಗಳು, ಸಾರ್ವಜನಿಕರು ಸೇರಿದಂತೆ ನೂರಾರು ಮಂದಿ ರುದ್ರಭೂಮಿಯನ್ನು ಸ್ವಚ್ಛಗೊಳಿಸಿದರು.

ಇದೇ ವೇಳೆ ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವಮೆಂಟ್ ಸಂಸ್ಥಾಪಕ ವಿ.ಮಹೇಶ್ ಮಾತನಾಡಿ, ಸ್ವಾತಂತ್ರ್ಯ ಹೋರಾಟ ಹಾಗೂ ಯುದ್ಧಗಳಲ್ಲಿ ಪಾಲ್ಗೊಂಡು ಹುತಾತ್ಮರಾದ ಭಾರತೀಯ ಯೋಧರು ನಮ್ಮ ದೇವರಿದ್ದಂತೆ. ಬ್ರಿಟಿಷರ ವಿರುದ್ಧ, ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಎಲ್ಲಾ ಹೋರಾಟಗಾರರನ್ನು ಸ್ಮರಿಸಬೇಕು. ರುದ್ರಭೂಮಿಯಲ್ಲಿ ಸ್ವಚ್ಛತೆ ಮಾಡುವ ಮೂಲಕ ಹುತಾತ್ಮರಿಗೆ ಗೌರವ ಸಮರ್ಪಿಸಿದ್ದೇವೆ. ರುದ್ರಭೂಮಿ ಶಿವ ವಾಸಿಸುವ ಸ್ಥಳ ಎಂಬ ನಂಬಿಕೆ ನಮ್ಮಲ್ಲಿದೆ. ಆ ಕಾರಣದಿಂದ ಸ್ವಚ್ಛತಾ ಅಭಿಯಾನ ನಡೆಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರಪಾಲಿಕೆಯ ಎಸಿ ಮಂಜುನಾಥ ರೆಡ್ಡಿ, ಹೆಲ್ತ್ ಇನ್ಸ್‌ಪೆಕ್ಟರ್ ಪ್ರೀತಿ, ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವಮೆಂಟ್ ಅಧ್ಯಕ್ಷ ಪ್ರಿನ್ಸ್, ಉಪಾಧ್ಯಕ್ಷ ವಿವೇಕಾನಂದ, ನಿರ್ದೇಶಕರುಗಳಾದ ಕಿಶೋರ್ ಕದಂ, ಸುರೇಶ್, ರಾಧಾಕೃಷ್ಣ, ರಾಮ ನಾರಾಯಣ, ಮಿಥುನ್, ಶಶಿಕಿರಣ್, ಲೋಕೇಶ್, ಕೆಂಪೇಗೌಡ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ರುದ್ರಭೂಮಿಯ ಭದ್ರತಾ ಸಿಬ್ಬಂದಿಗಳಾದ ಅಭಿಲಾಶ್ ಮತ್ತು ಸ್ವಾಮಿ ಅವರನ್ನು ಸನ್ಮಾನಿಸಲಾಯಿತು.




ಹುತಾತ್ಮರ ದಿನದ ಅಂಗವಾಗಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವಮೆಂಟ್ ಸದಸ್ಯರು ಸ್ವಚ್ಛತಾ ಅಭಿಯಾನ ನಡೆಸಿದರು.

## ಲೋಕಸಭಾ ಚುನಾವಣೆ 2024

# ಅಬಕಾರಿ ದೂರು ಸ್ವೀಕರಿಸಲು ಕಂಟ್ರೋಲ್ ರೂಂ ಸ್ಥಾಪನೆ


ಮೈಸೂರು,ಮಾ.23–ಸಾರ್ವತ್ರಿಕ ಲೋಕಸಭಾ ಚುನಾವಣೆಯನ್ನು ಮುಕ್ತ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವ ಸಂಬಂಧ ಅಕ್ರಮ ಮದ್ಯ ತಯಾರಿಕೆ, ಶೇಖರಣೆ, ಸಾಗಣೆ ಮತ್ತು ವಿತರಣೆ ಇನ್ನಿತರೆ ಅಬಕಾರಿ ಅಕ್ರಮದ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಂದ ದೂರು ಅಥವಾ ಮಾಹಿತಿಗಳನ್ನು ಸ್ವೀಕರಿಸಲು ಜಿಲ್ಲೆಯಾದ್ಯಂತ ಕಂಟ್ರೋಲ್ ರೂಂಗಳನ್ನು ಸ್ಥಾಪಿಸಲಾಗಿದೆ ಎಂದು ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಮೈಸೂರು ನಗರ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್ ಕಚೇರಿಯ ಟ್ರೋಲ್ ಫ್ರೀ: 18004255989/ದೂ.ಸಂ:0821–2541863/ಮೊ.ಸಂ:94495–97178, ಮೈಸೂರು ಉಪವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಚೇರಿ ದೂ.ಸಂ: 0821–2524060/ಮೊ.ಸಂ:94495–97182, ಮೈಸೂರು ವಲಯ–1 ಅಬಕಾರಿ ನಿರೀಕ್ಷಕರ ಕಚೇರಿ ದೂ.ಸಂ: 0821–2438269/ಮೊ.ಸಂ:98804–84978, ಮೈಸೂರು ವಲಯ–2 ಅಬಕಾರಿ ನಿರೀಕ್ಷಕರ ಕಚೇರಿ ದೂ.ಸಂ: 0821–2418274/ಮೊ.ಸಂ:94487–61173, ಮೈಸೂರು ವಲಯ–3 ದೂ.ಸಂ:0821–2414035/ಮೊ.ಸಂ: 81234–00739, ಮೈಸೂರು ವಲಯ – 4 ದೂ.ಸಂ:0821–2446670/ಮೊ.ಸಂ:96326–37800ನಲ್ಲಿ ಕಂಟ್ರೋಲ್ ರೂಂಗಳನ್ನು ತೆರೆಯಲಾಗಿದೆ.

ಮೈಸೂರು ನಗರ ಜಿಲ್ಲೆಯ ಎಲ್ಲಾ ವಲಯ ಕಚೇರಿಗಳಲ್ಲಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸಲು ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ ಹಾಗೂ ಚುನಾವಣೆ ಪ್ರಕ್ರಿಯೆ ಮುಗಿಯುವವರೆವಿಗೂ ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ದೂರು ಅಥವಾ ಮಾಹಿತಿಗಳಿದ್ದರೂ ಟೋಲ್ ಫ್ರೀ ದೂರವಾಣಿ ಸಂಖ್ಯೆಗೆ ಅಥವಾ ನಿಯಂತ್ರಣ ಕೊಠಡಿಗಳಿಗೆ ಕರೆ ಮಾಡಬಹುದಾಗಿದೆ ಎಂದು ಮೈಸೂರು ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೀರಿನ ಮಿತ ಬಳಕೆ ಅನಿವಾರ್ಯ

ಮೈಸೂರು, ಮಾ.23(ಎಸ್‌ಬಿಡಿ)–



ನೀರಿನ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು, ಪೋಲು ಮಾಡಿದರೆ ಕೆಲವೇ ದಿನಗಳಲ್ಲಿ ಹನಿ ನೀರಿಗೂ ಹಾಹಾಕಾರ ಉಂಟಾಗುವುದು ನಿಶ್ಚಿತ ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಆತಂಕ ವ್ಯಕ್ತಪಡಿಸಿದ್ದಾರೆ.

ಬರದಿಂದ ನೀರಿನ ಮೂಲಗಳು ಬತ್ತಿ ಹೋಗುತ್ತಿವೆ. ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕುಸಿದಿದೆ. ಈ ಪರಿಸ್ಥಿತಿಯಲ್ಲೂ ತಮಿಳುನಾಡಿಗೆ ನೀರು ಹರಿದು ಹೋಗುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ಜಾಗೃತರಾಗಬೇಕು. ನೀರನ್ನು ಮಿತವಾಗಿ ಬಳಸಬೇಕು. ವಾಹನ ತೊಳೆಯಲು, ಮನೆ ಮುಂದೆ ಸ್ವಚ್ಛಗೊಳಿಸಲು ಯಥೇಚ್ಛವಾಗಿ ನೀರು ಬಳಕೆಗೆ ಬ್ರೇಕ್ ಹಾಕಬೇಕು ಎಂದು ಮನವಿ ಮಾಡಿದ್ದಾರೆ.



ಅದೆಷ್ಟೋ ನೀರು ಸಂಪರ್ಕಗಳಿಗೆ ಟ್ಯಾಪ್‌ಗಳೇ ಇಲ್ಲ. ಸರಬರಾಜು ಸಂದರ್ಭದಲ್ಲಿ ಅಪಾರ ಪ್ರಮಾಣದ ನೀರು ಚರಂಡಿ ಪಾಲಾಗುತ್ತಿದೆ. ಈ ಬಗ್ಗೆ ನಗರಪಾಲಿಕೆ ಅಧಿಕಾರಿಗಳು ಪರಿಶೀಲನೆ ನಡೆಸಿ, ತ್ವರಿತ ಕ್ರಮ ಕೈಗೊಳ್ಳಬೇಕು. ವಾಹನ, ಮನೆ ಮುಂದಿನ ಆವರಣ ಸ್ವಚ್ಛತೆಗೆ ಶೇ.30ರಷ್ಟು ನೀರು ಪೋಲಾಗುತ್ತಿದೆ. ಒಂದೊಂದು ಹನಿಯೂ ತುಂಬಾ ಮುಖ್ಯ. ಈಗಾಗಲೇ ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ. ಎಚ್ಚರವಹಿಸದಿದ್ದರೆ ಮೈಸೂರಿನಲ್ಲೂ ಅದೇ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಜನ–ಜಾನುವಾರು, ಪ್ರಾಣಿ–ಪಕ್ಷಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ. ಎಲ್ಲರೂ ಜಾಗೃತರಾಗಿ ನೀರು ಸಂರಕ್ಷಣೆ ಮಾಡುವುದು ಅನಿವಾರ್ಯವಾಗಿದೆ ಎಂದು ತಿಳಿಸಿದ್ದಾರೆ.

# ಲೋಕ ಸಮರದಲ್ಲಿ ಕುರುಡು ಕಾಂಚಾಣ ಕುಣಿತ; ಮದ್ಯದ ಸದ್ದು ಜೋರಾಗಿದೆ

## ರಾಜ್ಯಾದ್ಯಂತ 9.65 ಕೋಟಿ ನಗದು; 22.86 ಕೋಟಿ ಮದ್ಯ ವಶ

ಮೈಸೂರು, ಮಾ.23(ಎಸ್‌ಬಿಡಿ)– ಲೋಕಸಭಾ ಚುನಾವಣಾ ಕಣದಲ್ಲಿ ಲೋಕಲ್ ಫೈಟ್ ಮೀರಿಸುವಂತೆ ಹಣ, ಮದ್ಯ, ಉಚಿತ ಉಡುಗೊರೆ ಸದ್ದು ಮಾಡುತ್ತಿದೆ. ನೀತಿ ಸಂಹಿತೆ ಜಾರಿಯಾಗಿ ಒಂದು ವಾರದಲ್ಲೇ ರಾಜ್ಯದಲ್ಲಿ 9.65 ಕೋಟಿ ರೂ. ಹಣ ಹಾಗೂ 22.86 ಕೋಟಿ ರೂ. ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ. ಇನ್ನು ಮತದಾರರಿಗೆ ಹಂಚಲು ಸಾಗಿಸುತ್ತಿದ್ದ 15.67 ಲಕ್ಷ ಮೌಲ್ಯದ ವಿವಿಧ ಉಚಿತ ಉಡುಗೊರೆ ಹಾಗೂ 1.64 ಕೋಟಿ ರೂ. ಮೌಲ್ಯದ ಇತರೆ ವಸ್ತುಗಳು, 53.37 ಲಕ್ಷದ ಮಾದಕ ವಸ್ತು, 9 ಲಕ್ಷ ಮೌಲ್ಯದ ವಜ್ರ, 1.27 ಕೋಟಿ ರೂ. ಚಿನ್ನ, 21.47 ಲಕ್ಷದ ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಂಡು, ಈ ಸಂಬಂಧ ಒಟ್ಟು 402 ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ 65,432 ಶಸ್ತ್ರಾಸ್ತ್ರಗಳನ್ನು ಪೊಲೀಸರು ಠೇವಣಿ ಪಡೆದಿದ್ದು, ಅದರಲ್ಲಿ 831 ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆದಿದ್ದು, ವಿವಿಧ ಕಾರಣಗಳಿಂದ 8ರ ಪರವಾನಗಿಯನ್ನು ರದ್ದುಗೊಳಿಸಲಾಗಿದೆ. ಅಬಕಾರಿ ಕಾಯ್ದೆಯಡಿ ಸಾವಿರಾರು ಪ್ರಕರಣ ಗಳನ್ನು ದಾಖಲಿಸಿಕೊಂಡು, 284 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

**ಗುಟ್ಕಾ ಹಂಚಿಕೆ:** ಮತದಾರರ ಸೆಳೆಯಲು ಎಲ್ಲಾ ರೀತಿಯ ವಸ್ತುಗಳನ್ನು ಹಂಚಲು ಮುಂದಾಗಿದ್ದು, ಗುಲ್ಬರ್ಗಾ ಲೋಕಸಭಾ ಕ್ಷೇತ್ರದ ಚಿಗರಹಳ್ಳಿ ಚೆಕ್ ಪೋಸ್ಟ್‌ನಲ್ಲಿ ಸುಮಾರು 33 ಲಕ್ಷ ರೂ. ಮೌಲ್ಯದ 180 ಚೀಲ ಗುಟ್ಕಾ ವಶಪಡಿಸಿಕೊಳ್ಳಲಾಗಿದೆ. ಎಲ್ಲಾ ಕಡೆ ಚೆಕ್‌ಪೋಸ್ಟ್, ಫ್ಲೈಯಿಂಗ್ ಸ್ಕ್ವಾಡ್ ಮೂಲಕ ಹದ್ದಿನ ಕಣ್ಣಿಟ್ಟಿದ್ದರೂ ಚುನಾವಣಾ ಅಕ್ರಮ ಜೋರಾಗಿ ನಡೆದಿದೆ. ಚುನಾವಣಾ ಆಯೋಗ ಮತ್ತಷ್ಟು ಕಠಿಣ ಕ್ರಮ ವಹಿಸದಿದ್ದರೆ ಈ ಬಾರಿ ಕಾಂಚಾಣದ ಸದ್ದು ಜೋರಾಗಲಿದೆ. ಮದ್ಯದ ಹೊಳೆಯೇ ಹರಿಯಬಹುದೆಂಬ ಆತಂಕ ಸೃಷ್ಟಿಯಾಗಿದೆ.

# ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ ಸಹಿ ಸಂಗ್ರಹ

ಮೈಸೂರು, ಮಾ.23(ಎಸ್‌ಬಿಡಿ)– ಕಾವೇರಿ ನದಿ ನೀರು ವಿಚಾರವಾಗಿ ಕರ್ನಾಟಕಕ್ಕೆ ಅನ್ಯಾಯವಾಗದಂತೆ ಶಾಶ್ವತ ಪರಿಹಾರ ಕ್ರಮಕ್ಕೆ ಆಗ್ರಹಿಸಿ, ಮೈಸೂರಿನಲ್ಲಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಸಹಿ ಸಂಗ್ರಹಿಸಿತು.



ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರಕ್ಕೆ ಒತ್ತಾಯಿಸಲು ಕಾವೇರಿ ಕ್ರಿಯಾ ಸಮಿತಿ ಸಹಿ ಸಂಗ್ರಹಿಸಿತು.

ರಾಜ್ಯದಲ್ಲಿ ಬರವಿದ್ದರೂ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ದೊಡ್ಡ ಗಡಿಯಾರ ಸಮೀಪ ಧರಣಿ ನಡೆಸಿ, ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಒತ್ತಾಯಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಂದ ಸಹಿ ಸಂಗ್ರಹಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್(ಜೆಪಿ) ಮಾತನಾಡಿ, ರಾಜ್ಯದಲ್ಲಿ ಕುಡಿಯುವ ನೀರಿಗೂ ಸಂಕಷ್ಟ ಎದುರಾಗಿರುವ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ, ನೆರೆ ರಾಜ್ಯ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಖಂಡನೀಯ. ಈ ಬಗ್ಗೆ ಮೌನ ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಈ ವಿಚಾರವಾಗಿ ಇತ್ತೀಚೆಗೆ ಸುಳ್ಳು ಹೇಳಲಾರಂಭಿಸಿದ್ದಾರೆ. ಕಾವೇರಿ ನದಿ ನೀರು ವಿಚಾರವಾಗಿ ರಾಜ್ಯಕ್ಕೆ ನ್ಯಾಯ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ಸತ್ಯಕ್ಕೆ ದೂರವಾದ ಹೇಳಿಕೆ ನೀಡಿದ್ದಾರೆ. ಕೇವಲ ಹೇಳಿಕೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಮೇಕೆದಾಟು ಯೋಜನೆ ಸಂಬಂಧ ಸಾಂವಿಧಾನಿಕವಾಗಿ ಕಾನೂನು ಹೋರಾಟವನ್ನು ಸಮರ್ಪಕವಾಗಿ ನಡೆಸಬೇಕು ಎಂದರು. ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ, ಕರ್ನಾಟಕದ ಮೇಕೆದಾಟು ಯೋಜನೆಗೆ ವಿರೋಧ ವ್ಯಕ್ತಪಡಿಸಿರುವುದು, ಅಲ್ಲಿನ ರಾಜಕಾರಣಿಗಳಲ್ಲಿರುವ ರಾಜಕೀಯ ಇಚ್ಛಾಶಕ್ತಿಗೆ ಸಾಕ್ಷಿಯಾಗಿದೆ. ಹಾಗೆಯೇ ಕರ್ನಾಟಕದ ಎಲ್ಲಾ ಪಕ್ಷದ ರಾಜಕಾರಣಿಗಳೂ ರಾಜ್ಯದ ಹಿತದೃಷ್ಟಿಯಿಂದ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಹೇಳಿದರು.

ಸಮಿತಿಯ ಹನುಮಂತೇಗೌಡ, ನಾಗರಾಜು, ಆಟೋ ಮಾದೇಶ, ಮಂಜುಳಾ, ನೇಹಾ, ಮೂಗೂರು ನಂಜುಂಡಸ್ವಾಮಿ, ತೇಜಸ್ ಲೋಕೇಶ್‌ಗೌಡ, ಕಾರು ಚಾಲಕರ ಸಂಘದ ಅಶೋಕ್, ಮಂಜುಳಾ, ಮಾದೇಶ್‌ಗೌಡ, ಅಭಿ, ಕೃಷ್ಣ, ಮಂಜುನಾಥ್, ವಿಜಯಲಕ್ಷ್ಮಿ, ಕೃಷ್ಣೇಗೌಡ, ಸೋಮಶೇಖರ್, ಜಗದೀಶ್, ಲೋಕೇಶ್, ಕೃಷ್ಣಮೂರ್ತಿ, ವನಿತಾ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಬಿಜೆಪಿಗೆ ರಾಜೀವ್ ರಾಜೀನಾಮೆ

ಮೈಸೂರು, ಮಾ.23(ಎಸ್‌ಪಿಎನ್)–



ಮುಡಾ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಹಿರಿಯ ಮುಖಂಡ ಹೆಚ್.ವಿ. ರಾಜೀವ್ ಅವರು, ರಾಜಕೀಯ ಸ್ಥಿತ್ಯಂತರ ಕಾರಣದಿಂದಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ನಾನು ಹಲವು ವರ್ಷಗಳಿಂದ ಭಾರತೀಯ ಜನತಾ ಪಾರ್ಟಿಯ ಸದಸ್ಯನಾಗಿ ವಿವಿಧ ಹುದ್ದೆಗಳಲ್ಲಿ ಜವಾಬ್ದಾರಿ ವಹಿಸಿಕೊಂಡು ಕಾರ್ಯ ನಿರ್ವಹಿಸಿದ್ದೇನೆ. ಇದೀಗ ರಾಜಕೀಯ ಸ್ಥಿತ್ಯಂತರದಿಂದಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ರಾಜೀನಾಮೆ ಪತ್ರವನ್ನು ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷರ ಪರವಾಗಿ ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಹೇಶ್ ಸ್ವೀಕರಿಸಿ, ಅಂಗೀಕರಿಸಿದ್ದಾರೆ.

# ಕೆಪಿಸಿಸಿ ಕಾರ್ಯಾಧ್ಯಕ್ಷರ ಬದಲಾವಣೆ: ಪ್ರಚಾರ ಸಮಿತಿ ಅಧ್ಯಕ್ಷರಾಗಿ ಸೊರಕೆ ನೇಮಕ



ತನ್ವೀರ್ ಸೇಠ್ | ವಿನಯ್ ಕುಲಕರ್ಣಿ | ಚಂದ್ರಶೇಖರ್ | ವಿನಯ್ ಕುಮಾರ್ ಸೊರಕೆ | ಹನುಮಂತಯ್ಯ | ರಿಜ್ವಾನ್ ಅರ್ಷದ್ | ಮಂಜುನಾಥ್ ಭಂಡಾರಿ

ಬೆಂಗಳೂರು, ಮಾ.23– ಲೋಕಸಭೆ ಚುನಾವಣೆಯಲ್ಲಿ ಪಕ್ಷ ಸಂಘಟನೆಗೆ ಚುರುಕು ನೀಡಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ)ಗೆ ಮೇಜರ್ ಸರ್ಜರಿ ಮಾಡಲಾಗಿದ್ದು, ನಾಲ್ವರು ಕಾರ್ಯಾಧ್ಯಕ್ಷರನ್ನು ಬದಲಾವಣೆ ಮಾಡಿ, ಹೊಸದಾಗಿ ಐವರು ಕಾರ್ಯಾಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಸದ್ಯ ಇರೋ ನಾಲ್ವರು ಕಾರ್ಯಾಧ್ಯಕ್ಷರನ್ನು ಬದಲಾವಣೆ ಮಾಡಲಾಗಿದೆ. ನೂತನ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಧಾರವಾಡ ಶಾಸಕ ವಿನಯ್ ಕುಲಕರ್ಣಿ, ತನ್ವೀರ್ ಸೇಠ್, ಜಿ.ಸಿ.ಚಂದ್ರಶೇಖರ್, ಮಂಜುನಾಥ್ ಭಂಡಾರಿ ಹಾಗೂ ವಸಂತ್ ಕುಮಾರ್ ಅವರನ್ನು ನೇಮಕ ಮಾಡಿ ಎಐಸಿಸಿ ಶನಿವಾರ ಆದೇಶ ಹೊರಡಿಸಿದೆ.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಅವರನ್ನು ಹಾಗೂ ಸಹ ಅಧ್ಯಕ್ಷರಾಗಿ ಎಲ್.ಹನುಮಂತಯ್ಯ ಅವರನ್ನು ನೇಮಕ ಮಾಡಲಾಗಿದೆ. ಇನ್ನು ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷರಾಗಿ ರಿಜ್ವಾನ್ ಅರ್ಷದ್ ಅವರನ್ನು ನೇಮಕ ಮಾಡಲಾಗಿದೆ.

# ಡಿಕೆಶಿ 40 ಶಾಸಕರ ಜತೆ ಬಿಜೆಪಿಗೆ ಬರಲು ಕಾದಿದ್ದಾರೆ!

ಬೆಂಗಳೂರು, ಮಾ.23– ಕಾಂಗ್ರೆಸ್‌ನ 40 ಶಾಸಕರೊಂದಿಗೆ ಬಿಜೆಪಿಗೆ ಬರಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಯುತ್ತಿದ್ದಾರೆ ಎಂದು ಬಿಜೆಪಿ ಶಾಸಕ ಮುನಿರತ್ನ ಹೇಳಿದ್ದಾರೆ.

ಮುನಿರತ್ನ ಅವರು ಬಿಜೆಪಿಯವರನ್ನು ಕಾಂಗ್ರೆಸ್‌ಗೆ ಕಳುಹಿಸುತ್ತಿದ್ದಾರೆ ಎಂಬ ಡಿಕೆಶಿ ಹೇಳಿಕೆಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನಲ್ಲಿ ನಾಲ್ವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆ ಇದೆ. ಅಲ್ಲಿ ಇರುವುದಕ್ಕಿಂತ ಬಿಜೆಪಿ ಸೇರುವುದು ಒಳ್ಳೆಯದು ಎಂದು ಶಿವಕುಮಾರ್ ನಿರ್ಧರಿಸಿದ್ದಾರೆ. 40 ಶಾಸಕರ ಜತೆ ಬಿಜೆಪಿ ಸೇರಲು ಅವರು ಬಾಗಿಲು ಕಾಯುತ್ತಿದ್ದಾರೆ. ನಾವು ಬಾಗಿಲು ತೆರೆಯುತ್ತಿಲ್ಲ. ಬಾಗಿಲು ತೆರೆದರೆ ತಕ್ಷಣ ಪಕ್ಷ ಸೇರಲು ಸಿದ್ಧರಾಗಿದ್ದಾರೆ. ಸದ್ಯಕ್ಕೆ ಅವರು ಅಲ್ಲಿಯೇ ಇರಲಿ ಎಂದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಭಾರೀ ಪ್ರಮಾಣದ



ಚುನಾವಣಾ ಅಕ್ರಮಗಳನ್ನು ಎಸಗುತ್ತಿದ್ದಾರೆ. ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆಯೊಬ್ಬರ ಮೇಲೆ ಕಾಂಗ್ರೆಸ್ ಮುಖಂಡರು ಹಲ್ಲೆ ನಡೆಸಿದ್ದಾರೆ. ತಕ್ಷಣವೇ ಕ್ಷೇತ್ರಕ್ಕೆ ಅರೆಸೇನಾಪಡೆ ನಿಯೋಜಿಸುವಂತೆ ಮುಖ್ಯ ಚುನಾವಣಾಧಿಕಾರಿಯವರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಜೈಲಿನಲ್ಲಿದ್ದ ರೌಡಿಗಳನ್ನು ಜಾಮೀನು ಕೊಡಿಸಿ, ಹೊರಗೆ ಕರೆತಂದು ಜನರನ್ನು ಬೆದರಿಸುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಬಿಜೆಪಿ ಮುಖಂಡರಿಗೆ ಬೆದರಿಕೆ ಇದೆ. ಕನಕಪುರದಲ್ಲಿ ಪ್ರಕರಣ ದಾಖಲು ಮಾಡಿಸಿ, ಜನರನ್ನು ಬೆದರಿಸುತ್ತಿದ್ದ ಡಿಕೆ ಸಹೋದರರು ಇಲ್ಲಿಯೂ ಅದನ್ನೇ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

# ಇನ್ನಿಲ್ಲ



### ಸಿ.ವಿ.ಎನ್.ರಾಜಲಕ್ಷ್ಮಿ

ಮೈಸೂರು, ಮಾ. 23– ಮೈಸೂರಿನ ಕೆ.ಆರ್.ಮೊಹಲ್ಲಾದ ಹೊಸಕೇರಿ ನಿವಾಸಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಸಿ.ಪಿ.ವಿ.ನರ ಸಿಂಹನ್ ಅವರ ಪತ್ನಿ ಸಿ.ವಿ.ಎನ್.ರಾಜಲಕ್ಷ್ಮಿ (86) ಶನಿವಾರ ಬೆಳಗ್ಗೆ ನಿಧನ ರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ, 17 ಮಂದಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಮತ್ತು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಹಿರಿಯ ವಕೀಲ ನಾಗರಾಜ ಸ್ವಾಮಿ



ಮೈಸೂರು, ಮಾ.23– ಮೈಸೂರಿನ ಕುವೆಂಪುನಗರ ನಿವಾಸಿ, ಹಿರಿಯ ವಕೀಲ ನಾಗರಾಜ ಸ್ವಾಮಿ(72) ಹೃದಯಾಘಾತದಿಂದ ಶುಕ್ರವಾರ ರಾತ್ರಿ ನಿಧನರಾದರು. ಅವರು ಪತ್ನಿ ಮಂಗಳ, ಪುತ್ರ ಮಹದೇವ ಪ್ರಸಾದ್, ಸೊಸೆ, ಮೊಮ್ಮಗ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹುಟ್ಟೂರು ಹುಣಸೂರು ತಾಲೂಕಿನ ಸೋಮನಹಳ್ಳಿಯಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದ ನಾಗರಾಜಸ್ವಾಮಿ ಅವರು, ನ್ಯಾಯವಾದಿಯಾಗಿ 40 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದರಲ್ಲದೆ ಸಿವಿಲ್ ದಾವೆಗಳಲ್ಲಿ ಅನುಭವಿ ಎನಿಸಿಕೊಂಡಿದ್ದರು.



### ಚಂದ್ರಶೇಖರ ಭೈರಿ

ಮೈಸೂರು, ಮಾ.23–ಮೈಸೂರಿನ ಸಾತಗಳ್ಳಿಯ ಭಾರತ್‌ನಗರ ನಿವಾಸಿ, ಮೈಸೂರು ಜಿಲ್ಲಾ ಮಡಿವಾಳ ಸಂಘದ ಮಾಜಿ ಅಧ್ಯಕ್ಷ ಚಂದ್ರಶೇಖರ ಭೈರಿ(62) ಅವರು ಶನಿವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಸಲಾಯಿತು.

### ಎಂ.ಎಲ್.ದೇವರಾಜು



ಮೈಸೂರು, ಮಾ.23– ಮೂಲತಃ ಮಳವಳ್ಳಿ ತಾಲೂಕಿನ ಮಾರಗೌಡನಹಳ್ಳಿ ಲೇ.ಲಿಂಗೇಗೌಡರ ಪುತ್ರ, ಮೈಸೂರು ಕುವೆಂಪುನಗರ ಜೆ.ಬ್ಲಾಕ್ ಸರ್ವಜ್ಞ ರಸ್ತೆ ನಿವಾಸಿ ಹಾಗೂ ನಿವೃತ್ತ ಪ್ರಾಂಶುಪಾಲ ಎಂ.ಎಲ್.ದೇವರಾಜು(69) ಶನಿವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 11ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**24.3.2024 ಭಾನುವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024**
**ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,**
**ತಿಥಿ: ಚತುರ್ದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ**

■ **ಸ್ವರಲೋಕ ಸಾಂಸ್ಕೃತಿಕ ಕಲಾ ವೇದಿಕೆ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಕರೋಕೆ ಗಾಯನ ಸ್ಪರ್ಧೆ, ಉದ್ಘಾಟನೆ : ಚಲನಚಿತ್ರ ನಟಿ ರೇಖಾದಾಸ್, ಉಪಸ್ಥಿತರು : ಗಾಯಕಿ ಸುನೀತಾ, ಸನ್ಮಾನಿತರು : ಡಾ. ರೇಖಾ ಅರುಣ್ (ವೈದ್ಯಕೀಯ), ನಳಿನಿ ತಿಮ್ಮಯ್ಯ (ಸಾಮಾಜಿಕ ಕಾರ್ಯಕರ್ತೆ), ಇನ್ಸ್‌ಪೆಕ್ಟರ್ಸ್ ಮಮತ ಮತ್ತು ಧನಲಕ್ಷ್ಮಿ (ಪೊಲೀಸ್), ಕೆ.ಕೆ.ಯಶೋಧ (ನರ್ಸಿಂಗ್), ಮೇರಿ ವಸಂತ್ (ರಂಗಭೂಮಿ), ಸಹಾಯಕ ಪ್ರಾಧ್ಯಾಪಕರಾದ ಪ್ರಿಯಾಂಕ ಶೆಣೈ (ಶಿಕ್ಷಣ), ಸ್ಥಳ: ಪುರಭವನ, ಬೆಳಗ್ಗೆ 9ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಬಡಗನಾಡು ಬಳಗ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ದೇಸಿ ಆಟಗಳು ಮತ್ತು ಸ್ಪರ್ಧೆ, ಸ್ಥಳ: ಬಳಗ ಆವರಣ, ವಾಸು ಲೇಔಟ್, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ವೃತ್ತಿ ಕೇಂದ್ರ :** ಕೆಎಎಸ್ ಹುದ್ದೆ ಆಕಾಂಕ್ಷಿಗಳಿಗೆ ಉಚಿತ ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮುಖ್ಯ ಅತಿಥಿಗಳು : ಮೈಸೂರು ನಗರ ಪಾಲಿಕೆ ಆಯುಕ್ತ ಡಾ. ಎನ್.ಎನ್. ಮಧು, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಹಿಂದುಳಿದ ವರ್ಗಗಳ ಇಲಾಖೆ ಜಿಲ್ಲಾಧಿಕಾರಿ ಕೆ.ಜಿ.ಎಸ್. ರಾಘವೇಂದ್ರ, ಪಿಎಂಇ ಬೋರ್ಡ್ ನಿರ್ದೇಶಕ ಪ್ರೊ. ಎನ್. ನಾಗರಾಜ್, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಡಿ. ಆನಂದ್, ಯುವರಾಜ ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ

■ **ಇಂಡಿಯನ್ ಹೆರಿಟೇಜ್ ಸಿಟಿಸ್ ನೆಟ್‌ವರ್ಕ್ ಫೌಂಡೇಷನ್ :** ಪ್ರಕೃತಿಯ ಆಕರ್ಷಣೆ – ಸುನಿಲ್ ರಾಜು ಅವರು ಕುಕ್ಕರಹಳ್ಳಿಕೆರೆಯಲ್ಲಿ ಸೆರೆ ಹಿಡಿದಿರುವ ಛಾಯಾಚಿತ್ರಗಳ ಪ್ರದರ್ಶನ, ಸ್ಥಳ: ಹೆರಿಟೇಜ್ ಹೌಸ್, ಸರಸ್ವತಿಪುರಂ, ಬೆಳಗ್ಗೆ 10.30 ರಿಂದ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ಕೃಷ್ಣ ಜನಮನ ಅವರ ಕಾದಂಬರಿ ಚಾವಡಿ ಪುಸ್ತಕ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಪ್ರೊ. ಎಂ.ಎನ್. ತಳವಾರ್, ಪುಸ್ತಕ ಬಿಡುಗಡೆ : ಪ್ರೊ. ಮಹದೇವ, ಅತಿಥಿಗಳು: ಸಂಸ್ಕೃತಿ ಬುಕ್ ಏಜೆನ್ಸೀಸ್ ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ಸ್ಥಳ : ಶ್ರೀರಂಗ ವೇದಿಕೆ, ರಂಗಾಯಣ, ಬೆಳಗ್ಗೆ 10.30ಕ್ಕೆ

■ **ಭಾರತೀಯ ಜನತಾ ಪಕ್ಷ :** ಎಸ್‌ಟಿ ಸಮುದಾಯ ಸಮಾವೇಶ, ಉಪಸ್ಥಿತರು : ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಶಾಸಕ ಎಸ್.ಎ. ರಾಮದಾಸ್, ಸ್ಥಳ: ನೇರಂಬಳ್ಳಿ ಸುಬ್ಬರಾವ್ ಕಲ್ಯಾಣ ಮಂಟಪ, ಲಕ್ಷ್ಮೀಪುರಂ, ಬೆಳಗ್ಗೆ 11ಕ್ಕೆ

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ–ನೂತನ ಸಂಗೀತ ಮಾಲಿಕೆ, ಬೆಳಗ್ಗೆ 10.30 ರಿಂದ ವಿದುಷಿ ವಿನುತಾ ಪ್ರಕಾಶ್ ಅವರಿಂದ ಗಾಯನ, ಕುಮಾರಿ ಪ್ರೇರಣ–ವಯೋಲಿನ್, ಚಿ. ಶುಭಾಂಗ್–ಮೃದಂಗ, ಮಧ್ಯಾಹ್ನ 12ರಿಂದ ಕಲಿಕೆಯಲ್ಲಿ ಗೀತೆಗಳ ಪ್ರಾಮುಖ್ಯತೆ ಕುರಿತು ಪ್ರಾತ್ಯಕ್ಷಿಕೆ, ನಡೆಸಿಕೊಡುವವರು : ವಿದುಷಿ ಮಾಲಿನಿ ರಾಮಸುಬ್ರಹ್ಮಣ್ಯ, ಸ್ಥಳ: ರಾಸವೃಂದ, ಚಾಮರಾಜಪುರಂ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ :** ಬಿ.ವಿ. ಬಾಲಸುಬ್ರಹ್ಮಣ್ಯಂ ಹಾಗೂ ಗುಂಡ್ಲುಪೇಟೆ ಜಿ.ಎನ್. ನಂಜುಂಡಯ್ಯ ದತ್ತಿ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಕೆ. ಪೋತರಾಜು, ಗುಂಡ್ಲುಪೇಟೆ ಜಿ.ಎನ್. ನಂಜುಂಡಯ್ಯ ದತ್ತಿ ಉಪನ್ಯಾಸ : ಸಾಹಿತಿ ಶ್ರೀಮತಿ ತಳುಕಿನ ಲಕ್ಷ್ಮೀ ಮಧು, ಬಿ.ವಿ. ಬಾಲಸುಬ್ರಹ್ಮಣ್ಯಂ ದತ್ತಿ ಉಪನ್ಯಾಸ : ಸಾಹಿತಿ ಶ್ರೀಮತಿ ಸುಮತಿ ಸುಬ್ರಹ್ಮಣ್ಯ, ಮುಖ್ಯ ಅತಿಥಿಗಳು : ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ರಾಜಶೇಖರ ಕದಂಬ, ಕಾರ್ಯದರ್ಶಿ ಕೃಷ್ಣಮೂರ್ತಿ, ಸ್ಥಳ: ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ವಿದ್ಯಾರ್ಥಿ ನಿಲಯ, ವಿಜಯನಗರ 3ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಥಿಂಕರ್ಸ್ ಫೋರಂ, ಮೈಸೂರು :** ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲ ಸೀತಾರಾಮನ್ ಅವರೊಂದಿಗೆ ಅನೌಪಚಾರಿಕ ಸಂವಾದ, ಸ್ಥಳ: ಕರಾಮುವಿವಿ ಘಟಿಕೋತ್ಸವ ಸಭಾಂಗಣ, ಸಂಜೆ 4ಕ್ಕೆ

■ **ಜೆಎಸ್‌ಎಸ್ ಕಾನೂನು ಕಾಲೇಜು, ಸುರಾನ ಮತ್ತು ಸುರಾನ ಅಂತರರಾಷ್ಟ್ರೀಯ ಅಟಾರ್ನಿ :** 21ನೇ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಲೋಕಾಯುಕ್ತ ನ್ಯಾಯಾಧೀಶ ಬಿ.ಎಸ್. ಪಾಟೀಲ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಉಪಸ್ಥಿತರು : ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್.ಸುರೇಶ್, ಹಿರಿಯ ವಕೀಲ ಜಿ. ಶಿವದಾಸ್, ಪ್ರೀತಮ್ ಸುರಾನ, ಜೆಎಸ್‌ಎಸ್ ಕಾನೂನು ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ನಟರಾಜು, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಜೆಎಸ್‌ಎಸ್ ಕಾನೂನು ಕಾಲೇಜು, ಸರಸ್ವತಿಪುರಂ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ ಗೋರ್‌ಮಾಟಿ ನಾಟಕ ಪ್ರದರ್ಶನ, ರಂಗರೂಪ : ಶಿರಗಾನಹಳ್ಳಿ ಶಾಂತನಾಯಕ್, ನಿರ್ದೇಶನ : ಸಿ. ಬಸವಲಿಂಗಯ್ಯ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ – ಡಾ. ಜಯಾ ರಾಜಶೇಖರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು– ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಕೆ.ಎಲ್. ಪ್ರಸನ್ನಾಕ್ಷಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು – ಅಕ್ಷತಾ ಅದ್ದೋಣಿ, 9.40 ನಮ್ಮ ಆರೋಗ್ಯ–ಆಹಾರವೇ ಆರೋಗ್ಯ ಕುರಿತು ಆಯುಷ್ ಅಧಿಕಾರಿ ಡಾ.ಬಿ.ಎಸ್. ಸೀತಾಲಕ್ಷ್ಮಿ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ವಿ.ವಿ.ಎಸ್.ಬಿ.ಎಂ.ಶ್ರೀ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ 'ರಜೆಯ ಮಜಾ' ಈ ಕುರಿತು ಮಕ್ಕಳ ಅಭಿಪ್ರಾಯ ಸಂಗ್ರಹ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ – ವೃಂದಗಾನ, 12.45 ಜನಪದ ಸಂಗೀತ–ಬನ್ನೂರು ಬೇವಿನ ಹಳ್ಳಿಯ ನಂಜಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ರಶ್ಮಿ ವಿ.ರಾವ್, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಕಾಲೇಜು ರಂಗ', 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಸೀತಾ ಪರಿತ್ಯಾಗ, ಪ್ರಸ್ತುತಿ– ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾ ಪೋಷಿತ ಯಕ್ಷಗಾನ ಮಂಡಳಿಯ ಕಲಾವಿದರು, 6.50 ಕೃಷಿರಂಗ–ತೋರಣ ಹೂರಣ, ಪ್ರಸ್ತುತಿ– ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ– ಆರೋಗ್ಯ ಬುತ್ತಿಯ ಆಲೂರು ಮೂರ್ತಿ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಲಕ್ಷ್ಮಿ ರಾಜಗೋಪಾಲನ್–ಹಾಡುಗಾರಿಕೆ

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 24 ಭಾನುವಾರ 2024

ಸಂಪುಟ: 44 | ಸಂಚಿಕೆ: 335 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಹಾಸನ, ಮಂಡ್ಯ, ಕೋಲಾರ
# ಜೆಡಿಎಸ್ ಪಾಲು
### ಉಳಿದ 25 ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳು ಸ್ಪರ್ಧೆ
### ದೆಹಲಿಯಲ್ಲಿ ಬಿಜೆಪಿ ವರಿಷ್ಠರೊಂದಿಗೆ ದೇವೇಗೌಡರ ಮಾತುಕತೆಯೊಂದಿಗೆ ಮೈತ್ರಿಗೆ ಅಂತಿಮ ಮುದ್ರೆ



ಬೆಂಗಳೂರು, ಮಾ.23(ಕೆಎಂಶಿ)–ಜೆಡಿಎಸ್–ಬಿಜೆಪಿ ನಡುವಿನ ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮವಾಗಿದ್ದು, ವಿವಾದಿತ ಕೋಲಾರ ಲೋಕಸಭಾ ಕ್ಷೇತ್ರ ಸೇರಿದಂತೆ ಹಾಸನ ಮತ್ತು ಮಂಡ್ಯ ಕ್ಷೇತ್ರಗಳು ಜೆಡಿಎಸ್ ಪಾಲಾಗಿವೆ. ಉಳಿದ 25 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಕಣಕ್ಕಿಳಿಯಲಿದ್ದಾರೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ದೆಹಲಿಯಲ್ಲಿದ್ದು ಬಿಜೆಪಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಿದ ನಂತರ ಸೀಟು ಹಂಚಿಕೆ ಪೂರ್ಣಗೊಂಡಿತು.

ಕುಮಾರಸ್ವಾಮಿ ಅವರು, ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದರಿಂದ ದೇವೇಗೌಡರೇ ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಉಭಯ ನಾಯಕರ ಜೊತೆ ಮಾತುಕತೆ ನಡೆಸಿದರು. ಈಗಾಗಲೇ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಬಿಜೆಪಿ, ಇನ್ನು ತನ್ನ ಪಾಲಿನ ಐದು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಯಾವುದೇ ಕ್ಷಣದಲ್ಲಿ ಪ್ರಕಟಿಸಲಿದೆ.

ದೆಹಲಿಯಲ್ಲಿ ಮಾತುಕತೆ ಮುಗಿಯುತ್ತಿದ್ದಂತೆ ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ವಹಿಸಿಕೊಂಡಿರುವ ರಾಧಾ ಮೋಹನ್ ದಾಸ್ ಅಗರವಾಲ್ ಎನ್‌ಡಿಎ ಮೈತ್ರಿಕೂಟದ ಕ್ಷೇತ್ರ ಹಂಚಿಕೆಯನ್ನು ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ಅರಮನೆ ಆವರಣದಲ್ಲಿ ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಯ ಕಾರ್ಯಾಗಾರದಲ್ಲಿ ಪಾಲ್ಗೊಂಡು ● 9ನೇ ಪುಟಕ್ಕೆ

## ಇಂದು ಆಸ್ಪತ್ರೆಯಿಂದ ಕುಮಾರಸ್ವಾಮಿ ಬಿಡುಗಡೆ



ಬೆಂಗಳೂರು, ಮಾ.23(ಕೆಎಂಶಿ)–ಚೆನ್ನೈನಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಆಸ್ಪತ್ರೆಯಿಂದ ಭಾನುವಾರ ಡಿಸ್‌ಚಾರ್ಜ್ ಆಗಲಿದ್ದಾರೆ.

ಮಾರ್ಚ್ 21ರಂದು ಖ್ಯಾತ ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ವಿದೇಶಿ ವೈದ್ಯರ ತಂಡವು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿತ್ತು.

ಎರಡು ದಿನಗಳ ಕಾಲ ತೀವ್ರ ನಿಗಾ ಘಟಕದಲ್ಲಿದ್ದ ಕುಮಾರಸ್ವಾಮಿ ಅವರು ವಾರ್ಡ್‌ಗೆ ಶಿಫ್ಟ್ ಆಗಿದ್ದಾರೆ. ಒಂದು ದಿನದ ಮಟ್ಟಿಗೆ ವಿಶ್ರಾಂತಿ ಪಡೆದು ಭಾನುವಾರ ಮನೆಗೆ ಹಿಂದಿರುಗಲಿದ್ದಾರೆ. ಕುಮಾರಸ್ವಾಮಿ ಅವರಿಗೆ ಮೂರನೇ ಬಾರಿಗೆ ಹೃದಯ ಕವಾಟಗಳನ್ನು ಬದಲಾವಣೆ ಮಾಡಲಾಗಿದೆ. ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಿದ್ದಲ್ಲಿ ಕುಮಾರಸ್ವಾಮಿ ಅವರು ಲೋಕಸಭಾ ಚುನಾವಣೆಯಿಂದ ದೂರ ಉಳಿದು ಮೂರು ತಿಂಗಳ ಕಾಲ ವಿಶ್ರಾಂತಿ ಪಡೆಯಬೇಕಿತ್ತು.

ಅತ್ಯಾಧುನಿಕ ತಂತ್ರಜ್ಞಾನ ಬಳಸಿ, ಮೂಳೆ ಮತ್ತು ಮಾಂಸಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ರಕ್ತನಾಳದ ಮೂಲಕವೇ ಎರಡು ಕವಾಟಗಳನ್ನು ಬದಲಾಯಿಸಿರುವುದರಿಂದ ಕುಮಾರಸ್ವಾಮಿ ಅವರಿಗೆ ನಾಲ್ಕೈದು ದಿನಗಳಿಗಿಂತ ● 9ನೇ ಪುಟಕ್ಕೆ

## ಕೇಂದ್ರದಿಂದ ಬಾರದ ಬರ ಪರಿಹಾರ; ಸುಪ್ರೀಂಕೋರ್ಟ್ ಮೊರೆ ಹೋದ ರಾಜ್ಯ ಸರ್ಕಾರ



● ತಕ್ಷಣ ರಾಜ್ಯಕ್ಕೆ ಎನ್‌ಡಿಆರ್‌ಎಫ್ ನಿಧಿ ಬಿಡುಗಡೆಗೆ ನಿರ್ದೇಶನ ನೀಡುವಂತೆ ಮನವಿ ● ಸಂವಿಧಾನದ ಪರಿಚ್ಛೇದ 32ರಡಿ ಹಕ್ಕು ಚಲಾವಣೆ ● ಪತ್ರಿಕಾಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ವಿವರಣೆ



ಬೆಂಗಳೂರು, ಮಾ.23(ಕೆಎಂಶಿ)–ಬರ ಪರಿಹಾರ ನಿರ್ವಹಣೆಗೆ ಕೇಂದ್ರದ ಅನುದಾನ ದೊರಕಿಸುವಂತೆ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಿದೆ.

ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ತಿರುಗಿಬಿದ್ದಿರುವ ರಾಜ್ಯ ಸರ್ಕಾರ ಇದೀಗ ನ್ಯಾಯಾಲಯದ ಮೂಲಕ ಅನುದಾನ ಪಡೆಯಲು ಮುಂದಾಗಿದೆ. ಗೃಹ ಕಚೇರಿ ಕೃಷ್ಣಾದಲ್ಲಿಂದು ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯಕ್ಕೆ ಎನ್‌ಡಿಆರ್‌ಎಫ್ ನಿಧಿಯನ್ನು ತಕ್ಷಣ ಬಿಡುಗಡೆಗೊಳಿಸಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿದ್ದೇವೆ ಎಂದರು. ಕೇಂದ್ರದಿಂದ ನಮ್ಮ ಪಾಲಿನ ಪರಿಹಾರ ಬರುತ್ತದೆ ಎಂದು ಕಾದು–ಕಾದು ಸಾಕಾಗಿ ನ್ಯಾಯಾಲಯದ ಮೊರೆ ಹೋಗಬೇಕಾಯಿತು. ಸಂವಿಧಾನ ಪರಿಚ್ಛೇದ 32ರ ಅಡಿಯಲ್ಲಿ ನಾವು ನಮ್ಮ ಕಾನೂನುಬದ್ಧ ಹಕ್ಕನ್ನು ಚಲಾಯಿಸಿದ್ದೇವೆ ಎಂದು ಸಮರ್ಥಿಸಿಕೊಂಡರು.

ನಮ್ಮ ಪಾಲನ್ನು ಇಂದು ಕೊಡುತ್ತಾರೆ, ನಾಳೆ ಕೊಡುತ್ತಾರೆ, ಇವತ್ತು ಬರುತ್ತೆ, ನಾಳೆ ಬರುತ್ತೆ ಎಂದು ಐದು ತಿಂಗಳಿನಿಂದ ಕಾದು, ನಮಗೆ ಬೇರೆ ದಾರಿ ಕಾಣದೆ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದೇವೆ ಎಂದರು.

ಬರ ಹಾಗೂ ತುರ್ತು ಸಂದರ್ಭಗಳಲ್ಲಿ ಜನರಿಗೆ ತುರ್ತಾಗಿ ಸ್ಪಂದಿಸಬೇಕು ಎನ್ನುವ ಉದ್ದೇಶದಿಂದಲೇ ವಿಪತ್ತು ನಿರ್ವಹಣಾ ಕಾನೂನು ಮಾಡಲಾಗಿದೆ. ಆದರೆ, ಇದುವರೆಗೂ ಕೇಂದ್ರ ಕಾನೂನುಬದ್ಧವಾಗಿ ನಮಗೆ ಬರಬೇಕಾದ ಹಣದಲ್ಲಿ ಒಂದೇ ಒಂದು ಪೈಸೆಯನ್ನೂ ಕೊಟ್ಟಿಲ್ಲ ಎಂದರು.

ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದೇವೆ. ರಾಜ್ಯದಲ್ಲಿ 240 ತಾಲೂಕುಗಳ ಪೈಕಿ 223 ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಿದ್ದೇವೆ. ನಾಲ್ಕು ಬಾರಿ ಮೌಲ್ಯಮಾಪನ ಮಾಡಿದ್ದೇವೆ. 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ನಷ್ಟ ಆಗಿದೆ. 3 ಬಾರಿ ಸತತವಾಗಿ ಕೇಂದ್ರಕ್ಕೆ ಮನವಿಪತ್ರ ಬರೆದೆವು. ಇದುವರೆಗೂ ಕೇಂದ್ರ ಸರ್ಕಾರ ರಾಜ್ಯದ ಪಾಲಿನಲ್ಲಿ ನಯಾಪೈಸೆಯನ್ನೂ ಕೊಟ್ಟಿಲ್ಲ ಎಂದರು. ನಿಯಮಾವಳಿ ಪ್ರಕಾರ ● 9ನೇ ಪುಟಕ್ಕೆ

## ಸುಮಲತಾ ಭವಿಷ್ಯ ಉತ್ತಮವಾಗಿರಲಿದೆ
### ದೇವೇಗೌಡರು, ಕುಮಾರಸ್ವಾಮಿ ಸ್ಟಾರ್ ಪ್ರಚಾರಕರು



ಬೆಂಗಳೂರು, ಮಾ.23–ಮಂಡ್ಯ, ಹಾಸನ, ಕೋಲಾರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ತೀರ್ಮಾನ ಆಗಿದೆ. ಆದರೆ ಸುಮಲತಾ ಅವರ ಪಾತ್ರ ಬಹಳ ದೊಡ್ಡದಿದೆ. ಅವರ ರಾಜಕೀಯ ಭವಿಷ್ಯವು ಸಹ ಬಹಳ ಉತ್ತಮವಾಗಿರಲಿದೆ ಎಂದು ಲೋಕಸಭಾ ಚುನಾವಣಾ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್‌ವಾಲ್ ತಿಳಿಸಿದ್ದಾರೆ.

**ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಗೌಡ್ರು, ಹೆಚ್‌ಡಿಕೆ:** ಚುನಾವಣೆ ಪ್ರಚಾರ ಕಾರ್ಯ ಜೆಡಿಎಸ್ ಹಾಗೂ ಬಿಜೆಪಿ ನಾಯಕರು ಒಟ್ಟಾಗಿ ಮಾಡುತ್ತೇವೆ. ದೇವೇಗೌಡರು ಹಾಗೂ ಕುಮಾರಸ್ವಾಮಿ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿದ್ದಾರೆ. ಕೋಲಾರದ ಸಂಸದರು ನಮ್ಮ ಕಾರ್ಯಕರ್ತ, ಅತ್ಯಂತ ಸಮರ್ಪಣಾ ಭಾವದ ವ್ಯಕ್ತಿ. ಅವರ ರಾಜಕೀಯ ಭವಿಷ್ಯದ ಬಗ್ಗೆಯೂ ಯೋಚನೆ ಮಾಡುತ್ತೇವೆ. ನಾನು ಯಾವುದೇ ಒಳಜಗಳದ ಬಗ್ಗೆ ಚಿಂತೆ ಮಾಡಲ್ಲ, ದೊಡ್ಡ ಪಕ್ಷ ಕೋಟ್ಯಾಂತರ ಕಾರ್ಯಕರ್ತರು ಇದ್ದಾರೆ. ಅಸಮಾಧಾನಿತರು ಇದ್ದೇ ಇರ್ತಾರೆ, ಇದ್ಯಾವುದನ್ನೂ ನೋಡಲ್ಲ ಎಂದು ಖಡಕ್ಕಾಗಿ ಹೇಳಿದ್ದಾರೆ. ಡಿ.ವಿ.ಸದಾನಂದಗೌಡರ ಶುದ್ಧೀಕರಣ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಶುದ್ಧೀಕರಣ ● 9ನೇ ಪುಟಕ್ಕೆ

## ಲೋಕಸಭೆಗೆ ಹೆಚ್ಚಿನ ಸ್ಥಾನ ಗೆಲ್ಲದಿದ್ದಲ್ಲಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾಗಬಹುದು
### ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಬಹಿರಂಗ ಹೇಳಿಕೆ



ತುಮಕೂರು, ಮಾ.23– ಕರ್ನಾಟಕದಲ್ಲಿ ಕಾಂಗ್ರೆಸ್ ಹೆಚ್ಚಿನ ಲೋಕಸಭಾ ಕ್ಷೇತ್ರಗಳನ್ನು ಗೆಲ್ಲದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಸಂಗ ಬರಬಹುದು ಎಂದು ಕಾಂಗ್ರೆಸ್‌ನ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಹೇಳಿದ್ದಾರೆ.

ತಿಪಟೂರಿನಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಇಂದು ನಮ್ಮ ಸರ್ಕಾರ ಇದೆ. ರಾಜ್ಯದಲ್ಲಿ ನಾವು ಹೆಚ್ಚಿನ ಲೋಕಸಭಾ ಕ್ಷೇತ್ರಗಳನ್ನು ಗೆಲ್ಲದಿದ್ದರೆ ನೈತಿಕ ಹೊಣೆ ಹೊತ್ತು ಸಿದ್ದರಾಮಣ್ಣ ರಾಜೀನಾಮೆ ಕೊಡಬೇಕಾಗಬಹುದು. ಆ ಒಂದು ಕಾರಣಕ್ಕೆ ಅತ್ಯಂತ ಪ್ರಾಮಾಣಿಕರಾಗಿ ಬಡವರ ಪರ, ಶೋಷಿತರ ಪರ ಕೆಲಸ ಮಾಡುವಂತಹ ಸಿದ್ದರಾಮಯ್ಯ ಅವರನ್ನು ಸಿಎಂ ಆಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನ ಮಾಡೋಣ ಎಂದರು.

**ಯಾವ ರೀತಿ ಹೇಳಿದ್ದಾರೋ ಗೊತ್ತಿಲ್ಲ:** ಈ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಎಸ್.ಆರ್.ಶ್ರೀನಿವಾಸ್ ಯಾವ ಸಂದರ್ಭದಲ್ಲಿ, ಆ ರೀತಿ ಹೇಳಿದ್ದಾರೋ ಗೊತ್ತಿಲ್ಲ. ಅವರು ಹೇಳಿದ ಸನ್ನಿವೇಶವನ್ನು ತಿಳಿದುಕೊಂಡು ಮಾತನಾಡುತ್ತೇನೆ ಎಂದರು.

## ವಾರಣಾಸಿಯಲ್ಲಿ ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್‌ನ ಅಜಯ್ ರೈ ಸ್ಪರ್ಧೆ

ನವದೆಹಲಿ, ಮಾ. 23– ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ವಾರಣಾಸಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಜಯ್ ರೈ ಅವರನ್ನು ಕಣಕ್ಕಿಳಿಸಲಾಗುತ್ತಿದೆ. ಇಂದು ಪ್ರಕಟವಾದ ಕಾಂಗ್ರೆಸ್‌ನ ನಾಲ್ಕನೇ ಪಟ್ಟಿಯಲ್ಲಿ 12 ರಾಜ್ಯಗಳ 46 ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ● 9ನೇ ಪುಟಕ್ಕೆ

## ನಾಪೋಕ್ಲು ಬಳಿ ಕಾಡಾನೆ ದಾಳಿ: ಕಾಫಿ ಬೆಳೆಗಾರ ಸಾವು

● ಒಡೆಯನಿಲ್ಲದೆ ಒಂಟಿಯಾಗಿ ಪ್ರೀತಿ ನಾಯಿ ಮನೆಗೆ ಬಂದಾಗ ದುರಂತ ಬಯಲು ● ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ



ಮಡಿಕೇರಿ, ಮಾ.23–ಕಾಡಾನೆ ದಾಳಿಗೆ ಬೆಳೆಗಾರರೊಬ್ಬರು ಬಲಿಯಾದ ಘಟನೆ ನಾಪೋಕ್ಲು ಬಳಿಯ ಕಕ್ಕಬ್ಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಲಡಿ ಗ್ರಾಮದಲ್ಲಿ ಶನಿವಾರ ಮುಂಜಾನೆ ಸಂಭವಿಸಿದ್ದು, ಜೊತೆಯಲ್ಲಿದ್ದ ಪ್ರೀತಿಯ ನಾಯಿ ಒಂಟಿಯಾಗಿ ಮನೆಗೆ ಮರಳಿದಾಗ ವಿಷಯ ಬೆಳಕಿಗೆ ಬಂದಿದೆ. ಕಕ್ಕಬ್ಬೆ ನಾಲಡಿ ಗ್ರಾಮದ ನಿವಾಸಿ ಕಂಬೆಯಂಡ ರಾಜ ದೇವಯ್ಯ (59) ಕಾಡಾನೆ ದಾಳಿಗೆ ಬಲಿಯಾದ ದುರ್ದೈವಿ.

ಶನಿವಾರ ಮುಂಜಾನೆ ನಾಲಡಿ ಗ್ರಾಮದ ತಮ್ಮ ಮನೆಯ ಸಮೀಪವಿರುವ ಕಾಫಿ ತೋಟಕ್ಕೆ ಸಾಕುನಾಯಿಯೊಂದಿಗೆ ತೆರಳಿದ್ದರು. ಆದರೆ ಸ್ವಲ್ಪ ಸಮಯದಲ್ಲಿ ನಾಯಿ ಮಾತ್ರ ಮನೆಗೆ ಮರಳಿತು. ಅನುಮಾನಗೊಂಡ ರಾಜದೇವಯ್ಯ ಅವರ ಪತ್ನಿ, ಪತಿಗೆ ಕರೆ ಮಾಡಿದ್ದಾರೆ. ಕರೆ ಸ್ವೀಕರಿಸದ ಹಿನ್ನೆಲೆಯಲ್ಲಿ ಪತ್ನಿ ತೋಟಕ್ಕೆ ತೆರಳಿದ್ದಾರೆ. ● 8ನೇ ಪುಟಕ್ಕೆ

## ನಕಲಿ ದಾಖಲೆ ಸೃಷ್ಟಿಸಿ ಆದಿ ಕರ್ನಾಟಕ ಅಭಿವೃದ್ಧಿ ಸಂಘಕ್ಕೆ ಸೇರಿದ ಕೋಟ್ಯಾಂತರ ಮೌಲ್ಯದ ಆಸ್ತಿ ಮಾರಾಟ ಆರೋಪ:
# ಸಂಘದ ಅಧ್ಯಕ್ಷ ಸೇರಿ 13 ಮಂದಿ ವಿರುದ್ಧ ಕೇಸ್

ಚಾಮರಾಜನಗರ, ಮಾ. 23– ಚಾಮರಾಜನಗರ ಪಟ್ಟಣದ ಹೃದಯ ಭಾಗದಲ್ಲಿರುವ ಆದಿ ಕರ್ನಾಟಕ ಅಭಿವೃದ್ಧಿ ಸಂಘಕ್ಕೆ ಸೇರಿದ ಕೋಟ್ಯಾಂತರ ರೂ. ಮೌಲ್ಯದ ಆಸ್ತಿಯನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುವ ಆರೋಪದ ಮೇರೆಗೆ ಸಂಘದ ಅಧ್ಯಕ್ಷರು/ಕಾರ್ಯದರ್ಶಿ ಸೇರಿದಂತೆ 13 ಮಂದಿ ವಿರುದ್ಧ ಚಾಮರಾಜನಗರ ಟೌನ್ ಪೊಲೀಸ್ ಠಾಣೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ. ಮಲ್ಲಿಕಾರ್ಜುನ್ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರು ನಿವಾಸಿ ಲಕ್ಷ್ಮೀನಾರಾಯಣಪ್ಪ, ಚಾಮರಾಜನಗರ ತಾಲೂಕು ಕುದೇರು ಗ್ರಾಮದ ಕೆ.ಬಿ. ಹರೀಶ್, ಶಂಕರಮಠದ ಸಿ.ಎಸ್. ಗೋವಿಂದ ರಾಜು, ಅರಕಲಗೂಡಿನ ಎಸ್.ಕೃಷ್ಣಮೂರ್ತಿ, ಹೆಚ್.ಕೆ. ಶರ್ಮಾ, ವಾಸುದೇವ, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಚಾಮರಾಜನಗರ ಭ್ರಮರಾಂಭ ಬಡಾವಣೆಯ ನಿವಾಸಿ ಅಶ್ವಥನಾರಾಯಣ, ಚಾಮರಾಜನಗರ ಹೌಸಿಂಗ್ ಬೋರ್ಡ್ ಕಾಲೋನಿಯ ಬಿ. ಮಹೇಶ್ ಕುಮಾರ್, ಕೆಹೆಚ್‌ಬಿ ಕಾಲೋನಿಯ ನಟರಾಜು ಎಂಬುವರ ಪತ್ನಿ ಡಿ. ಡೈಸಿ, ಅಂಬೇಡ್ಕರ್ ಬಡಾವಣೆಯ ದಿಲೀಪ್‌ಕುಮಾರ್, ಶ್ರೀನಿಧಿಕುಮಾರ್, ಶಿವರಾಜು ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಅಧ್ಯಕ್ಷ/ಕಾರ್ಯದರ್ಶಿ ಆರೋಪಿಗಳಾಗಿದ್ದಾರೆ.

### ಚಾಮರಾಜನಗರ ಹೃದಯ ಭಾಗದಲ್ಲಿರುವ ಆಸ್ತಿ

**ವಿವರ:** ಚಾಮರಾಜನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ವೆ ನಂ. 295ರಲ್ಲಿ 1.22 ಎಕರೆ ಭೂಮಿಯನ್ನು 1952–53ರಲ್ಲಿ ಆದಿ ಕರ್ನಾಟಕ ಅಭಿವೃದ್ಧಿ ಸಂಘಕ್ಕಾಗಿ ಸರ್ಕಾರ ಭೂಸ್ವಾಧೀನಪಡಿಸಿಕೊಂಡಿತ್ತು. ಪಹಣಿಯಲ್ಲಿ ಎಕೆ ಜನರಲ್ ಹಾಸ್ಟೆಲ್ ಎಂದು ಉಲ್ಲೇಖವಿದೆ. ಈ ಭೂಮಿಯ ಒಂದು ಭಾಗದಲ್ಲಿ 1968ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಆದಿ ಕರ್ನಾಟಕ ಸಮುದಾಯದ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ಅನ್ನು ನಿರ್ಮಿಸಲಾಗಿತ್ತು. ಇದೇ ಜಾಗದಲ್ಲಿ ತಾಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಕಚೇರಿಯೂ ಇದೆ. ಈ ಮಧ್ಯೆ ಹಾಸ್ಟೆಲ್‌ನ ಭೂಮಿಯನ್ನು ● 9ನೇ ಪುಟಕ್ಕೆ

> “ಎಫ್‌ಐಆರ್‌ನಲ್ಲಿ ಆರೋಪಿಗಳಾಗಿರುವ 13 ಮಂದಿಯೂ ಚಾಮರಾಜನಗರದಲ್ಲೇ ವಾಸವಿದ್ದಾರೆ. ಅವರನ್ನು ಕೂಡಲೇ ಪೊಲೀಸರು ಬಂಧಿಸಬೇಕು. ಇಲ್ಲದಿದ್ದರೆ ಸಮುದಾಯದ 10 ಸಾವಿರ ಮಂದಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಸಬೇಕಾಗುತ್ತದೆ. ಸಂಘದ ಅಧ್ಯಕ್ಷ ನಂಜುಂಡಸ್ವಾಮಿ ಸಮುದಾಯದ ಜನರ ಕ್ಷಮೆ ಯಾಚಿಸಿ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.
> –ಅಯ್ಯನಪುರ ಶಿವಕುಮಾರ್, ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಸದಸ್ಯ.



## ಚುನಾವಣಾ ನೀತಿ ಸಂಹಿತೆ ಜಾರಿ; ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಿನ್ನೆಲೆ
## ಮೈಸೂರು ಸುತ್ತಮುತ್ತಲ ಪ್ರವಾಸಿ ತಾಣಗಳಿಗೆ ಭೇಟಿ ನೀಡುವವರ ಸಂಖ್ಯೆ
# ಗಣನೀಯ ಇಳಿಮುಖ



> “ಚಾಮುಂಡಿಬೆಟ್ಟ, ಅರಮನೆ, ಮೃಗಾಲಯ, ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗನಾಥ ದೇವಸ್ಥಾನ, ದರಿಯಾ ದೌಲತ್, ಟಿಪ್ಪು ಸುಲ್ತಾನ್, ನಿಮಿಷಾಂಬ ದೇವಸ್ಥಾನ, ತೊಣ್ಣೂರು ಕೆರೆ, ಮೇಲುಕೋಟೆ, ಶ್ರೀ ನಂಜುಂಡೇಶ್ವರ ದೇವಾಲಯ, ತಲಕಾಡು, ಸೋಮನಾಥಪುರ, ಮಡಿಕೇರಿ, ಹಾರಂಗಿ ಜಲಾಶಯ, ಕಾವೇರಿ ನಿಸರ್ಗಧಾಮ ಪ್ರವಾಸಿ ತಾಣಗಳಲ್ಲೂ ಜನರಿಲ್ಲದೇ ಭಣಗುಡುತ್ತಿದೆ.




ಮೈಸೂರು,ಮಾ.23(ಆರ್‌ಕೆ)–5, 8, 9ನೇ ತರಗತಿ ಮತ್ತು ಎಸ್‌ಎಸ್‌ಎಲ್‌ಸಿ ಪಬ್ಲಿಕ್ ಪರೀಕ್ಷೆ ಹಾಗೂ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ, ಮೈಸೂರು ನಗರ, ಸುತ್ತಮುತ್ತಲಿನ ಪ್ರವಾಸಿ ಕೇಂದ್ರಗಳಿಗೆ ಭೇಟಿ ನೀಡುತ್ತಿರುವವರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ.

ಚುನಾವಣಾ ವೇಳಾಪಟ್ಟಿ ಪ್ರಕಟವಾಗಿ ನೀತಿ ಸಂಹಿತೆಯನ್ನು ಜಾರಿಗೊಳಿಸಲು ರಾಜ್ಯಾದ್ಯಂತ ಎಲ್ಲಾ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳು, ಜಿಲ್ಲಾ ಮತ್ತು ರಾಜ್ಯ ಗಡಿಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ವಾಹನಗಳ ತಡೆದು ತೀವ್ರ ತಪಾಸಣೆ ಮಾಡುತ್ತಿರುವುದು, ಬ್ಯಾಂಕ್ ವ್ಯವಹಾರಗಳು, ಹಣ ಡ್ರಾ, ಜಮೆ ಮಾಡುವ ಪ್ರಕ್ರಿಯೆ ಮೇಲೆ ನಿಗಾ ಇರಿಸಿರುವುದರಿಂದ ಆ ಕಿರಿಕಿರಿಯನ್ನು ನಿಭಾಯಿಸುವ ಧೈರ್ಯ ಮಾಡದ ಪ್ರವಾಸಿಗರು ತಮ್ಮ ಪ್ರವಾಸ ಯೋಜನೆಯನ್ನೇ ಕೈಬಿಟ್ಟಂತಿದೆ. ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ರಾಜ್ಯಗಳಿಂದ ಕರ್ನಾಟಕದ ಪ್ರವಾಸಿ ಕೇಂದ್ರಗಳಿಗೆ ಬರುತ್ತಿದ್ದ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ.

ಅದೇ ರೀತಿ ಈಗಾಗಲೇ ಹೈಕೋರ್ಟ್ 5, 8, 9ನೇ ತರಗತಿ ಪಬ್ಲಿಕ್ ಪರೀಕ್ಷೆ ನಡೆಸಲು ಅನುಮತಿ ನೀಡಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿಯೂ ಪ್ರಕಟವಾಗಿರುವುದರಿಂದ ಪೋಷಕರು ತಮ್ಮ ಪ್ರವಾಸ ಕಾರ್ಯಕ್ರಮಗಳನ್ನು ಮುಂದೂಡಿದ್ದಾರೆ.

ಜೊತೆಗೆ ಬಹುತೇಕ ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಲೋಕಸಭಾ ಚುನಾವಣಾ ಕರ್ತವ್ಯಕ್ಕೆ ನಿಯೋಜನೆ ಮಾಡಿರುವ ಕಾರಣ ಅವರು ರಜಾ ಪಡೆಯುವಂತಿಲ್ಲ ಹಾಗೂ ಚುನಾವಣಾಧಿಕಾರಿ ಅನುಮತಿ ಇಲ್ಲದೆ ಕೇಂದ್ರ ಸ್ಥಾನದಿಂದ ಹೊರಗೆ ಹೋಗಲು ಸಾಧ್ಯವಾಗದಿರುವುದರಿಂದ ಅವರು ಈ ಸಂದರ್ಭದಲ್ಲಿ ಪ್ರವಾಸ ಕೈಗೊಳ್ಳುವ ಧೈರ್ಯ ಮಾಡುವುದಿಲ್ಲ. ಉಳಿದಂತೆ ಬೇಸಿಗೆಯ ಬಿಸಿಲಿನ ಪ್ರಖರತೆ ಹೆಚ್ಚಾಗಿರುವುದರಿಂದ ಮಕ್ಕಳು, ವಯಸ್ಸಾದ ತಂದೆ ತಾಯಿಯರೊಂದಿಗೆ ಬೇರೆ ರಾಜ್ಯಗಳಿಗೆ ವಾರಗಟ್ಟಲೇ ಪ್ರವಾಸಕ್ಕೆ ತೆರಳಲು ಹಿಂಜರಿಯುವುದರಿಂದಾಗಿ ಮೈಸೂರು ನಗರ ಹಾಗೂ ಸುತ್ತಮುತ್ತಲ ಪ್ರವಾಸಿ ತಾಣಗಳು ● 9ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಶಿಕ್ಷಕರು : (ಪರೀಕ್ಷೆ ಹಾಲ್‌ನಲ್ಲಿ ಗಂಭೀರವಾಗಿ ಕುಳಿತ ವಿದ್ಯಾರ್ಥಿಗಳನ್ನು ಕುರಿತು) "ಯಾವುದಾದರೂ ಪ್ರಶ್ನೆಗಳು ಕಠಿಣವಾಗಿವೆಯೇ?

ವಿದ್ಯಾರ್ಥಿಗಳು : ಖಂಡಿತಾ ಇಲ್ಲ. ಎಲ್ಲಾ ಪ್ರಶ್ನೆಗಳು ತೀರಾ ಸರಳವಾಗಿವೆ. ಆದರೆ ಉತ್ತರಗಳು ಮಾತ್ರ ಕಠಿಣ ಸಾರ್!.

ಮೈಸೂರು ಮಿತ್ರ

ಭಾನುವಾರ, 24 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ. –ಕನ್‌ಫ್ಯೂಶಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಷ್ಠೆಯಿದ್ದವನಿಗೆ ನಷ್ಟವಿಲ್ಲ

## ನಿಮ್ಮ ಪತ್ರಗಳು

### ನೀತಿ ಸಂಹಿತೆ ಸಾಮಾನ್ಯರಿಗೆ ತೊಂದರೆಯಾಗದಿರಲಿ

ಮಾನ್ಯರೆ,

ಲೋಕಸಭಾ ಚುನಾವಣಾ ಹಿನ್ನಲೆಯಲ್ಲಿ ದೇಶದಾದ್ಯಂತ ನೀತಿ ಸಂಹಿತೆ ಜಾರಿಯಲ್ಲಿದೆ. ಇದರ ಹೆಸರಿನಲ್ಲಿ ಜನ ಸಾಮಾನ್ಯರಿಗೆ ತೊಂದರೆಯಾಗಬಾರದು. ಮನೆ ನಿರ್ಮಾಣ, ಮದುವೆ, ಗೃಹ ಪ್ರವೇಶ, ವ್ಯಾಪಾರ ವ್ಯವಹಾರ ಇತರೆ ಕೆಲಸಗಳಿಗೆ ಹಣ ಬೇಕೆ ಬೇಕು. ಇದನ್ನು ಕೊಂಡೊಯ್ಯುವಾಗ ಸೀಜ್ ಮಾಡಿದರೆ ಅವರ ಗತಿ ಏನು. ಕೇವಲ ಮೂವತ್ತು ನಲವತ್ತು ಸಾವಿರ ರೂಪಾಯಿಗಳನ್ನು ಸೀಜ್ ಮಾಡಿದರೆ ಹೇಗೆ? ಮೂರು ತಿಂಗಳ ಕಾಲ ವ್ಯವಹಾರ ಮಾಡುವುದಾದರೂ ಹೇಗೆ? ಚುನಾವಣಾ ಅಕ್ರಮ ತಡೆಯಲು ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಕಾನೂನಿನ ಪ್ರಕಾರ ಚುನಾವಣಾ ಆಯೋಗ ತನ್ನ ಕರ್ತವ್ಯ ನಿರ್ವಹಿಸಬೇಕು, ನಿರ್ವಹಿಸಲಿ. ಅಕ್ರಮ ತಡೆಗಟ್ಟಲಿ. ಆದರೆ ಇದರ ನೆಪದಲ್ಲಿ ಸಾಮಾನ್ಯರಿಗೆ ತೊಂದರೆ ನೀಡಬಾರದು. ಎಲ್ಲದಕ್ಕೂ ದಾಖಲೆ ಇಟ್ಟುಕೊಂಡು ಓಡಾಡಲು ಸಾಧ್ಯವಿಲ್ಲ. ಚುನಾವಣಾಧಿಕಾರಿಗಳು ಸಮಸ್ಯೆ ಅರಿತು ಕಾರ್ಯ ನಿರ್ವಹಿಸಿದರೆ ಸಾರ್ವಜನಿಕರಿಗೂ ಅನುಕೂಲವಾಗುತ್ತದೆ.

**–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.**

### ಮತ್ತೆ ಮತ್ತೆ ಮೋಸ ಹೋಗಬೇಡಿ

ಮಾನ್ಯರೆ,

'ಮೈಸೂರು ಮಿತ್ರ' ಸೇರಿದಂತೆ ಇತರ ಮಾಧ್ಯಮಗಳಲ್ಲಿ ಪ್ರತೀ ದಿನ ಆನ್‌ಲೈನ್‌ನಲ್ಲಿ ವಂಚನೆಗೊಳಗಾದವರ ಬಗ್ಗೆ ವರದಿಗಳು ಬರುತ್ತಲೇ ಇರುತ್ತವೆ. ಅಲ್ಲಿ–ಇಲ್ಲಿ ಟೋಪಿ ಹಾಕಿಸಿಕೊಂಡವರ ಬಗ್ಗೆ ಕೇಳಿರುತ್ತಾರೆ. ಆದರೂ ಮೋಸ ಹೋಗುವವರ ಸಂಖ್ಯೆ ಕಡಿಮೆ ಆಗಿಲ್ಲ. ಮೋಸ ಹೋಗುವವರಲ್ಲಿ ಒಳ್ಳೆಯ ಕೆಲಸದಲ್ಲಿರುವವರು, ಸುಶಿಕ್ಷಿತರೂ ಇದ್ದಾರೆ ಎನ್ನುವುದು ಅತ್ಯಂತ ಬೇಸರದ ವಿಷಯ. ಹಣ ಬೇಗ ದ್ವಿಗುಣವಾಗುತ್ತದೆ, ಕೆಲಸ ಕೊಡಿಸುತ್ತೇವೆ, ಇಷ್ಟು ಹಣ ಕಳಿಸಿ, ಲಿಂಕ್ ಒತ್ತಿ ಕೆವೈಸಿ ಅಪ್ ಡೇಟ್ ಮಾಡಿ, ಓಟಿಪಿ ಶೇರ್ ಮಾಡಲು ಕರೆ... ಇವೇ ಮೊದಲಾದ ತಂತ್ರಗಳನ್ನು ಬಳಸಿ ಅಮಾಯಕರನ್ನು ಯಾಮಾರಿಸುತ್ತಿದ್ದಾರೆ ಸೈಬರ್ ಖದೀಮರು. ಜನರ ದುರಾಸೆ, ಅಮಾಯಕತೆಯನ್ನೇ ಬಂಡವಾಳ ಮಾಡಿಕೊಂಡು ವಂಚಿಸುತ್ತಿದ್ದಾರೆ. ಸಾರ್ವಜನಿಕರು ಇಂತಹ ವಂಚಕರ ಮೋಸದ ಬಲೆಗೆ ಬೀಳದೆ ಬಹಳ ಎಚ್ಚರಿಕೆ ವಹಿಸಬೇಕು. **–ರಾಘವೇಂದ್ರ ಜೋಯಿಸ್, ಮೈಸೂರು**

### ಪ್ರಜಾಪ್ರಭುತ್ವದ ಅರ್ಥ ವ್ಯರ್ಥವಾಗುತ್ತಿದೆ!

ಮಾನ್ಯರೇ,

ಈಗಾಗಲೇ ಲೋಕಸಭಾ ಚುನಾವಣೆಗೆ ದಿನಾಂಕಗಳು ನಿಗದಿಯಾಗಿದೆ. ಈ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ತನ್ನ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ಭರಾಟೆಯು ಜೋರಾಗಿ ನಡೆಯುತ್ತಿದೆ. ಅದರಲ್ಲೂ ನಮ್ಮ ಕರ್ನಾಟಕವನ್ನು ನೋಡುವುದಾದರೆ 28 ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ಕ್ಷೇತ್ರಗಳಿಗೂ ಅಭ್ಯರ್ಥಿಗಳ ಆಯ್ಕೆಯ ಕಸರತ್ತು ಬಲು ಬಿರುಸಾಗಿ ನಡೆಯುತ್ತಿದೆ. ರಾಷ್ಟ್ರೀಯ ಪಕ್ಷಗಳು ಹಾಗೂ ಪ್ರಾದೇಶಿಕ ಪಕ್ಷಗಳು ಈ ಚುನಾವಣೆಯಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಎಲ್ಲಾ ಪಕ್ಷದವರು ಸಚಿವರ, ಶಾಸಕರ, ಮಂತ್ರಿಗಳ ಮಕ್ಕಳಿಗೆ, ಅಳಿಯಂದಿರಿಗೆ, ಸೊಸೆಯಂದಿರಿಗೆ ತಪ್ಪಿದರೆ ತಮ್ಮ ರಕ್ತ ಸಂಬಂಧಿಗಳಿಗೆ (ಕೆಲವರನ್ನು ಹೊರತುಪಡಿಸಿ) ಟಿಕೆಟ್ ಕೊಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಪ್ರಜಾಪ್ರಭುತ್ವದ ಘೋಷವಾಕ್ಯವನ್ನೇ ಬದಲಿಸಲು ಹೊರಟಂತಿದೆ ನಮ್ಮ ರಾಜಕೀಯ ಪಕ್ಷಗಳ ನಾಯಕರು. ನಿಜಕ್ಕೂ ಇದು ಖಂಡನೀಯ. ತಳಮಟ್ಟದಲ್ಲಿ ದುಡಿಯುವಂತಹ ಕಾರ್ಯಕರ್ತರಿಗೆ ಈ ನಡವಳಿಕೆ ಅನ್ಯಾಯ ಮಾಡಿದಂತಾಗಿದೆ. ವೇದಿಕೆಯ ಮೇಲೆ ನಿಂತು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವಂತಹ ರಾಜಕೀಯ ನಾಯಕರು ಈ ವಿಚಾರದಲ್ಲಿ ಹಳಿ ತಪ್ಪಿದಂತಾಗಿದೆ. ಈ ಹಂತದಲ್ಲಿ ಪ್ರಜಾಪ್ರಭುತ್ವದ ಪ್ರಭುಗಳಾದ ಪ್ರಜೆಗಳಾದ ನಾವು ನಮ್ಮ ಮತದಾನದ ಹಕ್ಕನ್ನು ಚಲಾಯಿಸುವಾಗ ಬಹಳ ಸೂಕ್ಷ್ಮವಾಗಿ ಇವುಗಳನ್ನೆಲ್ಲ ಗಮನಿಸಿ ಪ್ರಜಾಪ್ರಭುತ್ವದ ಗೆಲುವಿಗಾಗಿ ಪಣ ತೊಡಬೇಕಾಗಿದೆ ನಮ್ಮ ಮತ ಪ್ರಜಾಪ್ರಭುತ್ವದ ಏಳಿಗೆಗಾಗಿಯೇ ಹೊರತು ರಾಜಕೀಯ ನಾಯಕರುಗಳ ಕುಟುಂಬಗಳ ಕಲ್ಯಾಣಕ್ಕಾಗಿಯಲ್ಲ ಎಂಬುದನ್ನು ಸಾಬೀತು ಪಡಿಸಬೇಕಾಗಿದೆ.

**–ಎಂ. ಕಿರಣ್ ಕುಮಾರ್, ಶಿಕ್ಷಕರು, ಸಂತ ಜೋಸೆಫರ ಪ್ರೌಢ ಶಾಲೆ, ಮೈಸೂರು.**

### ರಂಗಾಯಣದಲ್ಲಿ ಕಾವಾ ವಿಲೀನ ಸೂಕ್ತ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ಹೃದಯಭಾಗದಲ್ಲಿರುವ ರಂಗಾಯಣವು ಹೆಮ್ಮೆಯ ಕಲಾಕೇಂದ್ರ. ಅಭಿನಯ ಕಲೆಯನ್ನು ಕಲಿಸಿ, ಪ್ರಯೋಗಾತ್ಮಕ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ಸಮಾಜವನ್ನು ಜಾಗೃತಗೊಳಿಸುವುದು ಇದರ ಉದ್ದೇಶ. ಬಿ.ವಿ.ಕಾರಂತರ ಕನಸು ನನಸಾಗಿದ್ದರ ಫಲವಿದು.

1989ರಲ್ಲಿ ಸ್ಥಾಪಿತವಾದ ರಂಗಾಯಣವು ಇಲ್ಲಿಯವರೆಗೆ ಹಲವು ಶ್ರೇಷ್ಠ ಕಲಾವಿದರನ್ನು ಸೃಷ್ಟಿಸಿದೆ. ಕೆಲವರು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದಾರೆ. ರಂಗಾಯಣವು ನಡೆಸಿಕೊಂಡು ಬರುತ್ತಿರುವ ಚಟುವಟಿಕೆಗಳು ಶ್ಲಾಘನೀಯ. ಆದರೂ ಸಾಕಷ್ಟು ಸಂಖ್ಯೆಯಲ್ಲಿ ಕಲಾಸಕ್ತರು ಭಾಗವಹಿಸದಿರುವುದು ಕಲಾವಿದರ ಪ್ರೋತ್ಸಾಹಕ್ಕೆ ಹಿನ್ನಡೆಯಾಗುತ್ತಿದೆ. ಸರ್ಕಾರಿ ಅಧಿಕಾರಿಗಳು ಶಿಸ್ತುಬದ್ಧವಾಗಿ ರಂಗಾಯಣವನ್ನು ನಡೆಸಿಕೊಂಡು ಹೋಗುವಾಗ ರಾಜಕೀಯ ಪ್ರೇರಿತ ನಿರ್ದೇಶಕರು ಬೇಕೆ? ಎಂಬ ಪ್ರಶ್ನೆಯು ಹಲವರಿಗೆ ಅನಿಸದೆ ಇರದು!. ನಾನು ಮತ್ತು ಗೆಳೆಯರು ನಿಯಮಿತವಾಗಿ ಅಲ್ಲಿಗೆ ಭೇಟಿ ಕೊಡುತ್ತಿರುತ್ತೇವೆ ಹಾಗೂ ಹಲವು ನಾಟಕಗಳನ್ನು ನೋಡಿರುವುದರಿಂದ ಇರುವ ಸಮಸ್ಯೆಗಳನ್ನು ಬಲ್ಲೆವು.

ರಂಗಾಯಣದಲ್ಲಿ ತೊಡಗಿಸಿಕೊಂಡಿರುವ ಕಲಾವಿದರು ಅದ್ಭುತ ನಟನಾ ಚತುರರು. ಇವರಿಗೆ ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರವು ನೀಡಬೇಕಾಗಿದೆ. ಅಭಿನಯ ಕಲಿಯುವ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡುವುದಲ್ಲದೆ ಉಚಿತ ಆಹಾರ ಮತ್ತು ವಸತಿ ಸೌಲಭ್ಯ ಒದಗಿಸಿಕೊಡಬೇಕು.

ಅಭಿನಯ ಶಿಕ್ಷಣ ನೀಡುತ್ತಿರುವುದರಿಂದ ನಿರ್ದೇಶಕರ ಬದಲಾಗಿ ಚಾಮರಾಜೇಂದ್ರ ಸರಕಾರಿ ದೃಶ್ಯ ಕಲಾ ಕಾಲೇಜನ್ನು ಇದರೊಟ್ಟಿಗೆ ವಿಲೀನಗೊಳಿಸಿ ವಿಷಯದಲ್ಲಿ ನುರಿತ ಪ್ರಾಂಶುಪಾಲರನ್ನು ನೇಮಿಸುವುದು ಸೂಕ್ತ.

ರಂಗಾಯಣದ ಆವರಣದಲ್ಲಿ ಇರುವ ಹೊಟೇಲ್ ಶುಚಿರುಚಿ ಇಲ್ಲದೆ ತೀರಾ ಕಳಪೆಯಾಗಿ ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ. ಜನಾಕರ್ಷಣೆಯ ಸ್ಥಳದಲ್ಲಿ ಇರುವುದರಿಂದ ಸುಸಜ್ಜಿತವಾದ ಹೋಟೆಲ್ ಅನ್ನು ಈ ಕ್ಷೇತ್ರದಲ್ಲಿ ಬ್ರಾಂಡ್ ಆಗಿರುವ ಸಂಸ್ಥೆಯ ಸಹಭಾಗಿತ್ವದಲ್ಲಿ ನಡೆಸಿದರೆ ಪ್ರವಾಸಿಗರನ್ನೂ ಹಾಗೂ ನಗರವಾಸಿಗಳನ್ನು ಇತ್ತ ಸೆಳೆದು ಹೆಚ್ಚಿನ ಸಂಖ್ಯೆಯಲ್ಲಿ ರಂಗಾಯಣದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

ರಂಗಾಯಣಕ್ಕೆ ಬಂದು ಹೋಗಲು ಸಿಟಿ ಬಸ್ಸಿನ ಸೌಲಭ್ಯ ಇಲ್ಲದೆ ತೊಂದರೆ ಆಗುತ್ತಿರುವುದನ್ನು ತಪ್ಪಿಸಬೇಕು. ಒಟ್ಟಿನಲ್ಲಿ ರಂಗಾಯಣವನ್ನು ಹೆಚ್ಚಿನ ಜನರಿಗೆ ಮುಟ್ಟಿಸುವಲ್ಲಿ ವಿಫಲ ಆಗಿರುವುದು ಸ್ಪಷ್ಟ.


**–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.**

# ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ, ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

## 13. 'ಮೀಸೆ' ವಿ. ಎನ್. ನರಸಿಂಹಯ್ಯಂಗಾರ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ವಿ.ಎನ್.ನರಸಿಂಹಯ್ಯಂಗಾರ್ ಅವರ ಹೆಸರು ಇಂದು ಬಹಳಷ್ಟು ಜನರಿಗೆ ತಿಳಿಯದು. ಆದರೆ 150 ವರ್ಷಗಳ ಹಿಂದೆ ಇವರ ಹೆಸರು ಹೆಚ್ಚಿನ ಪ್ರಚಾರ ಪಡೆದಿತ್ತು. ಬಹಳಷ್ಟು ಜನಕ್ಕೆ ತಿಳಿದಿತ್ತು. ಮೈಸೂರಿನ ಆಡಳಿತ ವ್ಯವಸ್ಥೆಯಲ್ಲಿ ಇವರ ಹೆಸರನ್ನು ಹೇಳಿದರೆ ಜನ ಬೆಚ್ಚಿ ಬಿದ್ದು ಬೆದರುತ್ತಿದ್ದರು. ಅಂತಹ ವ್ಯಕ್ತಿತ್ವ ಅವರದು.

ಅವರ ಅಡ್ಡ ಹೆಸರು 'ಮೀಸೆ' ನರಸಿಂಹಯ್ಯಂಗಾರ್. ಅವರಿಗೆ ಈ ಅಡ್ಡ ಹೆಸರು ಬರಲು ಕಾರಣವಿತ್ತು. ತಮ್ಮ **'ನೆನಪಿನ ಚಿತ್ರಗಳು'** ಕೃತಿಯಲ್ಲಿ ಪ್ರಸಿದ್ಧರಾದ ಡಿ.ವಿ. ಗುಂಡಪ್ಪನವರು ಇದರ ಬಗ್ಗೆ ವಿಶದೀಕರಿಸುತ್ತಾರೆ. ಅಂದಿನವರೆಗೆ ಶ್ರೀವೈಷ್ಣವ ಬ್ರಾಹ್ಮಣರಲ್ಲಿ ಮೀಸೆ ಬೆಳೆಸುವ ಅಭ್ಯಾಸ ಇರಲಿಲ್ಲ. ಅಂದರೆ ನರಸಿಂಹಯ್ಯಂಗಾರ್ ಈ ಪದ್ಧತಿಯನ್ನು ಮೊದಲು ಮಾಡಿದರು. ಅವರ ಮೀಸೆಯನ್ನು ಕಂಡು ಜನ ಅವರಿಗೆ ಬೆದರುತ್ತಿದ್ದರು. ಅವರನ್ನು 'ಮೀಸೆ' ನರಸಿಂಹಯ್ಯಂಗಾರ್ ಎಂದೇ ಗುರುತಿಸುತ್ತಿದ್ದರು. ಇದು ಅವರ ಮೀಸೆಯ ಹಿನ್ನೆಲೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಮದುವೆಯಲ್ಲಿ ತೆಗೆದ ಭಾವಚಿತ್ರದಲ್ಲಿ ಇಬ್ಬರು ಶ್ರೀವೈಷ್ಣವರು ನಿಂತಿದ್ದು, ನರಸಿಂಹಯ್ಯಂಗಾರರನ್ನು ಅವರ ಮೀಸೆಯಿಂದ ಸುಲಭವಾಗಿ ಗುರುತಿಸಬಹುದು. ಇದರಿಂದಾಗಿ ಅವರಿಗೆ 'ಮೀಸೆ' ಅನ್ವರ್ಥ ನಾಮವಾಗಿದ್ದರಲ್ಲಿ ಆಶ್ಚರ್ಯವಿಲ್ಲ.

ನರಸಿಂಹಯ್ಯಂಗಾರರು ಸರ್ಕಾರಿ ಕೆಲಸಕ್ಕೆ ಸೇರಿದಾಗ ಇನ್ನೂ ಚಿಕ್ಕ ವಯಸ್ಸು. ಆದರೆ ತಮ್ಮ ವಿದ್ವತ್ತು, ಬುದ್ಧಿವಂತಿಕೆ ಹಾಗೂ ಸಾಮರ್ಥ್ಯದಿಂದ ಅಧಿಕಾರದಲ್ಲಿ ಬೆಳೆದು ಜಿಲ್ಲಾಧಿಕಾರಿಯೂ ಆದರು. ಅಂದು ಜಿಲ್ಲಾಧಿಕಾರಿ ಹುದ್ದೆ ಪ್ರತಿಷ್ಠೆಯದು. ಅದರ ನಂತರ ದಿವಾನರ ಹುದ್ದೆ. ನರಸಿಂಹಯ್ಯಂಗಾರ್ ಕೆಲ ಕಾಲ ಅರಮನೆಯ ಕಂಟ್ರೋಲರ್ ಆಗಿದ್ದು, ನಿವೃತ್ತಿ ಪಡೆದರು.

ಇವರು ಕೆಲ ಕಾಲ ಸೆನ್ಸಸ್ ಕಮೀಷನರ್ ಆಗಿದ್ದರು. ಆಗ ಹಿಂದುಳಿದ ಪಂಗಡದ ಒಂದು ವರ್ಗದವರು ಬ್ರಾಹ್ಮಣ ವರ್ಗಕ್ಕೆ ಸೇರಿಸುವಂತೆ ಸರ್ಕಾರಕ್ಕೆ ಅರ್ಜಿ ಬರೆದರಂತೆ. ಆ ಅರ್ಜಿಯನ್ನು ಸರ್ಕಾರ ಸೆನ್ಸಸ್ ಕಮೀಷನರ್ ಅವರಿಗೆ ಕಳುಹಿಸಿತು. ನರಸಿಂಹಯ್ಯಂಗಾರರು ಕಚೇರಿಯ ನೋಟಿಸ್ ಬೋರ್ಡಿನಲ್ಲಿ ಒಂದು ಪ್ರಕಟಣೆಯನ್ನು ಹಾಕಿದರು. ಸೆನ್ಸಸ್ ವಿಷಯದಲ್ಲಿ ಅಹವಾಲು ಹೇಳಿಕೊಳ್ಳಬೇಕೆಂದಿರುವವರು ಇಂತಹ ದಿನ ಕಚೇರಿಗೆ ಬಂದು ಕಮೀಷನರ್ ಅವರನ್ನು ಭೇಟಿ ಮಾಡಬಹುದು ಎಂದು ತಿಳಿಸಲಾಗಿತ್ತು. ಆ ಪ್ರಕಟಣೆಯನ್ನು ಕಂಡು ಕೆಲವರು ಅಂತಹ ದಿನ ಕಮೀಷನರ್ ಅವರ ಕಚೇರಿಗೆ ಬಂದರು. ಅವರಲ್ಲಿ ಅರ್ಜಿ ಹಾಕಿಕೊಂಡಿದ್ದವರೂ ಸೇರಿದ್ದರು. ನಿರ್ದಿಷ್ಟ ಹೊತ್ತಿಗೆ ಸರಿಯಾಗಿ ಕಚೇರಿಯ ಜವಾನ ಬಾಗಿಲಲ್ಲಿ ನಿಂತು **"ಬ್ರಾಹ್ಮಣರು ಸೆನ್ಸಸ್ ಕಮೀಷನರ್ ಅವರನ್ನು ಭೇಟಿ ಮಾಡಲು ಬರಬಹುದು"** ಎಂದು ಮೂರು ಸಾರಿ ಕೂಗಿದ. ಕಮೀಷನರ್ ಅವರನ್ನು ನೋಡಲು ಯಾರೂ ಹೋಗಲಿಲ್ಲ. ಅದರ ನಂತರ ಜವಾನ ಮತ್ತೆ **"ಇತರರು ಕಮೀಷನರ್ ಅವರನ್ನು ನೋಡಬೇಕಾದಲ್ಲಿ ಬರಬಹುದು"** ಎಂದು ಕೂಗಿದ. ಆಗ ಕೆಲವರು ಒಳಗೆ ಹೋದರು. ಅವರೊಂದಿಗಿದ್ದ ಅರ್ಜಿದಾರರು **"ಬ್ರಾಹ್ಮಣ ವರ್ಗದಲ್ಲಿ"** ಎನ್ನುತ್ತಿದ್ದಂತೆ ನರಸಿಂಹಯ್ಯಂಗಾರ್ **"ಆ ವಿಚಾರ ಆಗಲೇ ಮುಗಿಯಿತು. ಬ್ರಾಹ್ಮಣರಾಗಿದ್ದವರು ಆಗಲೇ ಒಳಕ್ಕೆ ಬರಬೇಕಾಗಿತ್ತು,"** ಎಂದು ಮುಕ್ತಾಯ ಮಾಡಿದರಂತೆ. ಇದು ಆಡಳಿತ ನಿರ್ವಹಣೆಯಲ್ಲಿ ಅವರು ತೋರುತ್ತಿದ್ದ ಚಾಕಚಕ್ಯತೆ.

ಅವರು ಅರಮನೆಯ ಕಂಟ್ರೋಲರ್ ಆಗಿದ್ದಾಗ ಒಂದು ಪ್ರಸಂಗ ನಡೆಯಿತು. ಅರಮನೆಯಲ್ಲಿ ಕೆಲಸದಲ್ಲಿದ್ದ ಒಬ್ಬಾತ ಮೃತಪಟ್ಟಿದ್ದ. ಅವನ ಪತ್ನಿ ನರಸಿಂಹಯ್ಯಂ ಗಾರ್ ಬಳಿ ಬಂದು ತನ್ನ ಜೀವನೋಪಾಯಕ್ಕಾಗಿ ತನ್ನ ಪತಿಯ ಕೆಲಸವನ್ನು ತನಗೆ ಕೊಡಬೇಕೆಂದು ಕೇಳಿದಳು. ಅವಳ ಕೋರಿಕೆ–ಕಷ್ಟಗಳನ್ನು ಕೇಳಿದ ನರಸಿಂಹಯ್ಯಂಗಾರ್, "ನೀನು ಇನ್ನೂ ಚಿಕ್ಕ ವಯಸ್ಸಿನವಳು. ನೀನು ಬೇರೊಂದು ಮದುವೆಯನ್ನು ಏಕೆ ಮಾಡಿಕೊಳ್ಳಬಾರದು," ಎಂದು ಕೇಳಿದರಂತೆ. ಅದಕ್ಕೆ ಆಕೆ, "ನಾನು ಬಡವಿ. ನನ್ನನ್ನು ಯಾರು ಮದುವೆ ಒಪ್ಪಿಕೊಳ್ಳುತ್ತಾರೆ. ನೀವೇ ದೊಡ್ಡ ಮನಸ್ಸು ಮಾಡಬೇಕು" ಎಂದಳಂತೆ. "ಇದು ನಿಜವೋ ಸುಳ್ಳೋ ನಾನು ಹೇಳಲಾರೆ. ಕಥೆ ಎಂದೇ ಇಟ್ಟುಕೊಂಡರೂ ಅದು ನರಸಿಂಹಯ್ಯಂಗಾರರ ಯಾವುದೋ ಪ್ರವೃತ್ತಿಯ ಸೂಚಕವೆಂದು ಇಷ್ಟವಿರುವವರು ಭಾವಿಸಬಹುದು. ಸ್ವಭಾವದ್ಯೋತಕವಾದ ಕಥೆ ಅದು," ಎನ್ನುತ್ತಾರೆ ಡಿ.ವಿ.ಜಿ ಅವರು, ಸೂಚ್ಯವಾಗಿ.

ಸಂಸ್ಕೃತದಲ್ಲಿ ಪ್ರಾವೀಣ್ಯತೆ ಮತ್ತು ಪ್ರತಿಭಾವಂತ ಲೇಖಕರೂ ಆದ ನರಸಿಂಹಯ್ಯಂಗಾರ್ ದೇಶದ ಎಲ್ಲ ಕಡೆಗಳಲ್ಲಿ, ಇಂಗ್ಲೆಂಡಿನಲ್ಲಿ ಸ್ನೇಹಿತರನ್ನು ಹೊಂದಿದ್ದರು. ಅವರೊಂದಿಗೆ ಸಾಹಿತ್ಯ, ಇತಿಹಾಸ ಮತ್ತು ಸಾಮಾಜಿಕ ವಿಚಾರಗಳ ಬಗ್ಗೆ ಹೆಚ್ಚಿನ ಪತ್ರ ವ್ಯವಹಾರ ನಡೆಸುತ್ತಿದ್ದರು. ಅಂದಿನ ಹಲವಾರು ಖ್ಯಾತ ಬುದ್ಧಿಜೀವಿಗಳೊಂದಿಗೆ ಸ್ನೇಹ ಹೊಂದಿದ್ದರು. ಇದರಿಂದಾದ ಜ್ಞಾನದ ಲಾಭವನ್ನು ಹೆಚ್ಚಿನ ಮಟ್ಟದಲ್ಲಿ ಪ್ರಯೋಜನಕ್ಕೆ ಪಡೆದುಕೊಂಡರು. ಇದು ಅವರ ವಿಷಯಾಸಕ್ತಿಗಳಿಗೆ ದ್ಯೋತಕವಾಗಿತ್ತು. ಅಂದಿಗೆ ವಿದೇಶೀ ಪ್ರಯಾಣಕ್ಕೆ ವಿರೋಧವಿತ್ತು. ಆದರೆ ನರಸಿಂಹಯ್ಯಂಗಾರ್ ಅದರ ಪರವಾಗಿದ್ದರು. ಅವರ ಸ್ನೇಹಿತರೊಂದಿಗೆ ಅವರು ಮಾಡಿದ ಅಗಾಧ ಪ್ರಮಾಣದ ಪತ್ರ ವ್ಯವಹಾರ, ಬರವಣಿಗೆ, ಆಡಳಿತ ನಿರ್ವಹಣೆಯಷ್ಟೇ ಅವರಿಗೆ ತೃಪ್ತಿ ನೀಡಲಿಲ್ಲ. ಸ್ವತಃ ತಾವೇ ಕಂಡು ತಮ್ಮ ಪ್ರಪಂಚ ಜ್ಞಾನವನ್ನು ವಿಸ್ತರಿಸಿಕೊಳ್ಳುವ ಸಲುವಾಗಿ ಉತ್ತರ ಭಾರತದ ಹಲವಾರು ಜಾಗಗಳಿಗೆ ಪ್ರವಾಸ ಕೈಗೊಂಡರು. ಹಾಗೆ ಪ್ರವಾಸ ಮಾಡಿದ ಮೊದಲ ಮೈಸೂರಿಗರಾದರು. 1872ರಲ್ಲಿ ರೈಲಿನಲ್ಲಿ ವಾರಣಾಸಿಗೆ ಪ್ರವಾಸ ಮಾಡಿದರು. ತಮ್ಮ ದಿನಚರಿಯಲ್ಲಿ ಪ್ರತಿಯೊಂದು ಅಂಶವನ್ನೂ ದಾಖಲಿಸಿ ಉಪಯುಕ್ತವಾದ ದಾಖಲೆಯಾಗಿಸಿದರು. ಭಾರತದ ಬಹುತೇಕ ಭಾಗದ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ವಿವರವಾಗಿ ಬರೆದಿಟ್ಟರು. ಅದರಲ್ಲಿ ಭಾರತೀಯ ರೈಲ್ವೆಯ ಇತಿಹಾಸದ ಭಾಗವೂ ಸೇರಿತ್ತು.

150 ವರ್ಷಗಳ ನಂತರವೂ ಅದೊಂದು ವಿಶಿಷ್ಟವಾದ ದಾಖಲೆಯಾಗಿದ್ದು, ಅಂದಿನ ಭಾರತದ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಮೂಲ ದಾಖಲೆಯಾಗಿದೆ. ಪ್ರವಾಸಿ ಬರಹವನ್ನು ಹೇಗೆ ಬರೆಯಬೇಕು ಎಂಬುದಕ್ಕೆ ಮಾದರಿಯಾಗಿ ಪ್ರಶಂಸೆ ಪಡೆದಿದೆ.

ನರಸಿಂಹಯ್ಯಂಗಾರರು ಇಂಗ್ಲಿಷ್ ಭಾಷೆಯ ಮೇಲೆ ಸಮರ್ಥ ಹತೋಟಿ ಹೊಂದಿದ್ದರು. 1908ರಲ್ಲಿ ದಿವಾನ್ ವಿ.ಪಿ.ಮಾಧವರಾಯರು ಸ್ಥಾಪಿಸಿದ್ದ ಮೈಸೂರು ಶಾಸನಸಭೆಗೆ (ಲೆಜಿಸ್ಲೇಟಿವ್ ಕೌನ್ಸಿಲ್) ನರಸಿಂಹಯ್ಯಂಗಾರ್ ಅವರನ್ನು ಸರ್ಕಾರ ಒಬ್ಬ ಸದಸ್ಯರನ್ನಾಗಿ ಮಾಡಿತ್ತು. ಆ ಸಭೆಯ ಮೊಟ್ಟಮೊದಲ ಅಧಿವೇಶನದಲ್ಲಿ ವೃತ್ತ ಪತ್ರಿಕೆಗಳ ನಿರ್ಬಂಧದ ಮಸೂದೆಯನ್ನು ತರಲಾಯಿತು. ಆ ಮಸೂದೆಯನ್ನು ಅನುಮೋದಿಸಿ, ಪತ್ರಕರ್ತರನ್ನು ತೀವ್ರವಾಗಿ ಟೀಕಿಸಿ ನರಸಿಂಹಯ್ಯಂಗಾರ್ ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ಅವರ ಭಾಷಣ ಪ್ರಜೆಗಳ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿತ್ತು. ಭಾಷಣವಾದರೋ ಅನೇಕ ದೊಡ್ಡ ದೊಡ್ಡ ಪದಗಳನ್ನು ಕೂಡಿ ಪ್ರೌಢಿಮೆಯಿಂದ ಕೂಡಿತ್ತು. ಅವರ ಇಂಗ್ಲಿಷ್ ಭಾಷೆಯ ಮೇಲಿನ ಹತೋಟಿ ವಿಜೃಂಭಿಸಿದರೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದ್ದ ಅವರ ಭಾಷಣವನ್ನು ಬಹಳ ಮಂದಿ ಖಂಡಿಸಿದರು.

ಅವರು ಪತ್ರಿಕೆಗಳಿಗೆ ಬರೆದ ಲೇಖನಗಳೂ ಅತ್ಯುತ್ತಮದ್ದಾಗಿದ್ದವು. ಇಂಗ್ಲಿಷ್ ಭಾಷೆಯಲ್ಲಿ ಚಿತ್ರಗಳ ಸಮೇತ ತಮ್ಮ ಅನುಭವ, ಪ್ರವಾಸವನ್ನು ವಿವರಿಸಿ ಬರೆಯುತ್ತಿದ್ದ ಲೇಖನಗಳು ಓದುಗರನ್ನು ಮೆಚ್ಚಿಸುತ್ತಿದ್ದವು. ಎಸ್.ಎನ್.ರಾಮಸ್ವಾಮಿ ಅಯ್ಯಂಗಾರ್ ಎಂಬುವರು ಬೆಂಗಳೂರಿನಲ್ಲಿ ಪ್ರಕಟಿಸುತ್ತಿದ್ದ ಪ್ರಸಿದ್ಧ "ಮೈಸೂರು ಟೈಮ್ಸ್" ಪತ್ರಿಕೆಯಲ್ಲಿ ಬರುತ್ತಿದ್ದ ಆ ಲೇಖನಗಳಲ್ಲಿನ ಸ್ವಾರಸ್ಯವಾದ ಪದ–ಪುಂಜಗಳನ್ನು ಮುಂಬಯಿ, ಕೊಲ್ಕತ್ತಾ ನಗರಗಳಲ್ಲಿನ ಪತ್ರಿಕೆಗಳು ಪ್ರಕಟಿಸುತ್ತಿದ್ದವು. ಇದು ಅವರ ಭಾಷಾ ಪ್ರೌಢಿಮೆಗೆ ನಿದರ್ಶನವಾಗಿತ್ತು.

# ಮೈಸೂರಲ್ಲಿ ಶೀಘ್ರದಲ್ಲೇ ಎನ್‌ಡಿಎ ಬೃಹತ್ ಸಮಾವೇಶ

## ಪ್ರಧಾನಮಂತ್ರಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸಮಾಗಮ



- ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಶಕ್ತಿ ಪ್ರದರ್ಶನ
- ಒಗ್ಗಟ್ಟಿನ ಸಂದೇಶ ಸಾರಲು ಕಾರ್ಯತಂತ್ರ
- ಹಳೇ ಮೈಸೂರು ಭಾಗದಲ್ಲಿ ಭಾರೀ ಜನರ ಸೇರಿಸುವ ಸಾಹಸ
- ಸಾಂಪ್ರದಾಯಿಕ ಮತಗಳನ್ನು ಗಟ್ಟಿಗೊಳಿಸಲು ಯೋಜನೆ



ಮೈಸೂರು,ಮಾ.23(ಬಿಎಲ್‌ಯು)–ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯನ್ನು ಮತ್ತಷ್ಟು ಗಟ್ಟಿಗೊಳಿಸಿ, ಮತದಾರರ ಸೆಳೆಯಲು ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮೈಸೂರಲ್ಲಿ ಒಂದೇ ವೇದಿಕೆಯಲ್ಲಿ ಸಮಾಗಮಗೊಳ್ಳಲಿದ್ದಾರೆ. ಈ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ಹೊಸ ಹವಾ ಸೃಷ್ಟಿಸಲಿದ್ದಾರೆ.

ಮೈಸೂರು–ಕೊಡಗು ಸೇರಿದಂತೆ ಹಳೇ ಮೈಸೂರು ಭಾಗದ ಲೋಕಸಭಾ ಕ್ಷೇತ್ರಗಳ ಚುನಾವಣೆ ಏಪ್ರಿಲ್ 26ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ ಕೆಲವೇ ದಿನಗಳಲ್ಲಿ ಮೈಸೂರಿನಲ್ಲಿ ಬೃಹತ್ ಸಮಾವೇಶ ನಡೆಸಲು ಬಿಜೆಪಿ ಮತ್ತು ಜೆಡಿಎಸ್ ತೀರ್ಮಾನಿಸಿವೆ.

ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳ ಒಳಗೊಂಡಂತೆ ಮೈಸೂರಿನಲ್ಲಿ ಬೃಹತ್ ಸಮಾವೇಶ ನಡೆಸಲಾಗುತ್ತಿದೆ. ನರೇಂದ್ರ ಮೋದಿ ಹಾಗೂ ಹೆಚ್.ಡಿ. ದೇವೇಗೌಡರು ಸಮಾವೇಶದಲ್ಲಿ ಸಮಾಗಮಗೊಳ್ಳಲಿದ್ದಾರೆ. ಈ ಮೂಲಕ ಎರಡು ಪಕ್ಷದ ಸಾಂಪ್ರದಾಯಿಕ ಮತಗಳನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲು ಕಾರ್ಯತಂತ್ರ ರೂಪಿಸಲಾಗುತ್ತಿದೆ.

ನರೇಂದ್ರ ಮೋದಿ ಮತ್ತು ದೇವೇಗೌಡರು ಒಂದೇ ವೇದಿಕೆಯ ಮೂಲಕ ಒಗ್ಗಟ್ಟು ಪ್ರದರ್ಶಿಸಲು ಉಭಯ ಪಕ್ಷಗಳು ತೀರ್ಮಾನಿಸಿವೆ. ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್ ಹೆಚ್ಚು ಪ್ರಾಬಲ್ಯ ಹೊಂದಿರುವ ಹಿನ್ನೆಲೆಯಲ್ಲಿ ಹೆಚ್.ಡಿ.ದೇವೇಗೌಡರ ಜೊತೆ ವೇದಿಕೆ ಹಂಚಿಕೊಳ್ಳಲು ನರೇಂದ್ರ ಮೋದಿ ಕೂಡ ಸಮ್ಮತಿಸಿದ್ದಾರೆ ಎಂದು ಹೇಳಲಾಗಿದೆ.

ನರೇಂದ್ರ ಮೋದಿ ಅವರು ಎಲ್ಲೆಲ್ಲಾ ಪ್ರಚಾರ ಕೈಗೊಂಡರೆ ಮೈತ್ರಿ ಅಭ್ಯರ್ಥಿಗಳಿಗೆ ಲಾಭವಾಗಲಿದೆ ಎಂಬ ಪಟ್ಟಿ ಈಗಾಗಲೇ ಸಿದ್ಧಗೊಂಡಿದೆ. ಈ ಮೂಲಕ ಹಳೇ ಮೈಸೂರು ಭಾಗದಲ್ಲಿ ದೇವೇಗೌಡರ ಜೊತೆ ವೇದಿಕೆ ಹಂಚಿಕೊಳ್ಳಲು ಮೋದಿ ಕೂಡ ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗಿದೆ.

ಬಿಜೆಪಿ ಮತ್ತು ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ 6 ಸ್ಥಾನಗಳಲ್ಲಿ ಜೆಡಿಎಸ್ ಸ್ಪರ್ಧೆಗೆ ಪ್ರಸ್ತಾಪ ಮುಂದಿಟ್ಟಿದ್ದರು. ಈ ಸಂಬಂಧ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಜೊತೆ ಹಲವು ಸುತ್ತಿನ ಮಾತುಕತೆ ನಡೆದಿತ್ತು.

ಆದರೆ ಇತ್ತೀಚಿಗೆ ಎರಡು ಕ್ಷೇತ್ರಗಳನ್ನು ಬಿಜೆಪಿ ಬಿಟ್ಟು ಕೊಡಲು ಮುಂದಾಗಿದೆ. ಜೆಡಿಎಸ್ ಪ್ರಾಬಲ್ಯ ಹೊಂದಿರುವ ಎರಡು ಕ್ಷೇತ್ರ ಪಡೆಯಲು ನಾವು ಇಷ್ಟು ಸರ್ಕಸ್ ಮಾಡಬೇಕಿತ್ತೆ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದ್ದರು. ತರುವಾಯ ಮಂಡ್ಯ, ಹಾಸನ ಹಾಗೂ ಕೋಲಾರ ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧೆ ಮಾಡಲಿದೆ ಎಂದು ತಿಳಿಸಿದ್ದರು.

ಆದರೆ ಸೀಟು ಹಂಚಿಕೆ ಒಪ್ಪಂದ ಸೂತ್ರ ಏರ್ಪಡದ ಕಾರಣ ಜೆಡಿಎಸ್ ಯಾವುದೆಲ್ಲಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಲಿದೆ ಎಂಬ ತೀರ್ಮಾನ ಇನ್ನೂ ಆಗಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದ್ದರು. ಕುಮಾರಸ್ವಾಮಿ ಬೇಸರದ ಮಾತುಗಳು ಗಮನಕ್ಕೆ ಬಂದ ತಕ್ಷಣ ಜೆ.ಪಿ.ನಡ್ಡಾ ಹಾಗೂ ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ರಾಧಾ ಮೋಹನ್ ದಾಸ್ ಕುಮಾರಸ್ವಾಮಿ ಅವರನ್ನು ಫೋನ್ ಮೂಲಕ ಸಂಪರ್ಕಿಸಿ ಸಮಾಧಾನಪಡಿಸಿದ್ದಾರೆ ಎನ್ನಲಾಗಿದೆ. ಈಗ ಎರಡು ಪಕ್ಷಗಳ ನಡುವೆ ಇದ್ದ ಭಿನ್ನಾಭಿಪ್ರಾಯ ನಿವಾರಣೆ ಆದಂತಾಗಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಇಂದು ಮೈಸೂರಿಗೆ ಸಿದ್ದರಾಮಯ್ಯ



**ಕಾಂಗ್ರೆಸ್ ಗೆಲುವಿಗೆ ರಣತಂತ್ರ**

ಮೈಸೂರು, ಮಾ.23(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಕಾರ್ಯತಂತ್ರ ರೂಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಮಾರ್ಚ್ 24) ಮೈಸೂರಿಗೆ ಆಗಮಿಸಲಿದ್ದಾರೆ. ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ನಾಳೆ ಬೆಳಗ್ಗೆ 11.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಸಿದ್ದರಾಮಯ್ಯ ಆಗಮಿಸುವರು. ತರುವಾಯ ನಗರದ ಫಾರ್ಚ್ಯೂನ್ ಜೆ.ಪಿ.ಪ್ಯಾಲೇಸ್‌ನಲ್ಲಿ ಶಾಸಕರು, ಮಾಜಿ ಶಾಸಕರು ಹಾಗೂ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರ ಸಭೆ ನಡೆಸಲಿದ್ದಾರೆ. ಮೈಸೂರು–ಕೊಡಗು ಜಿಲ್ಲೆಯ ಶಾಸಕರು, ಮಾಜಿ ಶಾಸಕರು ಹಾಗೂ ಬ್ಲಾಕ್ ಅಧ್ಯಕ್ಷರಿಗೆ ಮಾತ್ರ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಕಾರ್ಯತಂತ್ರ ರೂಪಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ ಅಭಿಪ್ರಾಯ ಆಲಿಸಲಿದ್ದಾರೆ. ತರುವಾಯ ಕಾಂಗ್ರೆಸ್ ಗೆಲುವಿಗೆ ನಾಯಕರಿಗೆ ಕೆಲವು ಟಿಪ್ಸ್ ನೀಡಲಿದ್ದಾರೆ. ಈ ಮೂಲಕ ಮೈಸೂರು–ಕೊಡಗು ಲೋಕಸಭಾ ಚುನಾವಣಾ ಕಣ ಮತ್ತಷ್ಟು ರಂಗೇರಲಿದೆ. ಕಾಂಗ್ರೆಸ್ ಮುಖಂಡರ ಸಭೆ ನಂತರ ಮೈಸೂರಿನಲ್ಲೇ ವಾಸ್ತವ್ಯ ಹೂಡುವ ಸಿದ್ದರಾಮಯ್ಯ ಅವರ ಮಾರನೇ ದಿನದ ಕಾರ್ಯಕ್ರಮ ಇನ್ನು ನಿಗದಿಯಾಗಿಲ್ಲ.

# ಏ.11ರಿಂದ ರಜಾ–ಮಜಾ ಬೇಸಿಗೆ ಶಿಬಿರ

ಮೈಸೂರು, ಮಾ.23– ಮೈಸೂರಿನ ನಟನಾ ರಂಗ ಶಾಲೆ ವತಿಯಿಂದ ಏ.11ರಿಂದ 5ರವರೆಗೆ ರಜಾ–ಮಜಾ ಬೇಸಿಗೆ ಶಿಬಿರವನ್ನು ದಟ್ಟಗಳ್ಳಿಯಲ್ಲಿರುವ ಸುಪ್ರೀಮ್ ಪಬ್ಲಿಕ್ ಶಾಲೆ ಆವರಣದಲ್ಲಿ ಆಯೋಜಿಸಲಾಗಿದೆ. ಶಿಬಿರದಲ್ಲಿ ಸತತ 25 ದಿನಗಳ ಕಾಲ ನಾಟಕ ಕಲೆಯನ್ನು ಕೇಂದ್ರವಾಗಿರಿಸಿಕೊಂಡು ಕರ್ನಾಟಕದ ದೇಸಿ ಜಾನಪದ ಕಲಾ ಪ್ರಕಾರಗಳು, ಹಾಡುಗಾರಿಕೆ, ಕರಕುಶಲ ಕಲೆ, ಸಂವಹನ ಕೌಶಲ್ಯ, ಅಭಿನಯ, ಸಾಧಕರೊಂದಿಗೆ ಸಂವಾದ, ಕಂಪನಿ ಮತ್ತು ಆಧುನಿಕ ನಾಟಕಗಳ ಕುರಿತು ಮಕ್ಕಳಿಗೆ ಸಂಪೂರ್ಣ ಮನೋರಂಜನೆಯೊಂದಿಗೆ ವಿಶಿಷ್ಟ ಪ್ರಾತ್ಯಕ್ಷಿಕೆಗಳ ಮೂಲಕ ರಂಗಭೂಮಿಯಲ್ಲಿ ಪ್ರಖ್ಯಾತರಾದ ಸಾಧಕರಿಂದ ಮಕ್ಕಳನ್ನು ತರಬೇತಿಗೊಳಿಸಲಿದ್ದಾರೆ. ಮಾ.31ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ನಟನಾ ರಂಗಶಾಲೆಯಲ್ಲಿ ಅರ್ಜಿ ವಿತರಣೆ ಮತ್ತು ಪ್ರವೇಶ ಪ್ರಕ್ರಿಯೆ ನಡೆಯಲಿದೆ. ಕಡ್ಡಾಯವಾಗಿ 8 ವರ್ಷದಿಂದ 14 ವರ್ಷದ ಮಕ್ಕಳಿಗೆ ಮಾತ್ರ ಪ್ರವೇಶವಿದ್ದು, ಮಾ.31ರಂದು ಪ್ರವೇಶಾತಿಗೆ ಬರುವಾಗ ಪೋಷಕರು ಮಗುವಿನ ಭಾವಚಿತ್ರದೊಂದಿಗೆ ಜನನ ಪ್ರಮಾಣ ಪತ್ರ ಅಥವಾ ಆಧಾರ್ ಕಾರ್ಡ್‌ನ ಪ್ರತಿ ತರತಕ್ಕದ್ದು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಮಾಹಿತಿಗೆ ಮೊ. 9480468327, 9845595505 ಸಂಪರ್ಕಿಸಬಹುದು.

# ದಲಿತ ಸಂಘರ್ಷ ಸಮಿತಿ ನೂತನ ಪದಾಧಿಕಾರಿಗಳು

ಮೈಸೂರು, ಮಾ.23–ದಲಿತ ಸಂಘರ್ಷ ಸಮಿತಿ, ಮೈಸೂರು ಜಿಲ್ಲಾ ಸಮಿತಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಬಿ.ರಾಜಶೇಖರ್ (ಮೈಸೂರು ನಗರ ಸಂಚಾಲಕ), ಉಮೇಶ್, ಪ್ರಶಾಂತ್, ಹೆಚ್.ಡಿ. ಗುರಪ್ಪ (ಉಪ ಸಂಚಾಲಕರು), ರವಿ, ವಿಜಯ್‌ಕುಮಾರ್ (ಮಾಧ್ಯಮ ಸಂಚಾಲಕರು), ಲಕ್ಷ್ಮಣ (ಸಹ ಸಂಚಾಲಕ), ಹೆಚ್.ಎಂ.ಅಂಕಯ್ಯ, ಸಿದ್ದರಾಜು, ಸಂತೋಷ್ ಮ್ಯಾಥ್ಯೂ (ಸಂಚಾಲಕರು, ಮೈಸೂರು ನಗರ ಸಲಹಾ ಸಮಿತಿ) ಅವರನ್ನು ಆಯ್ಕೆ ಮಾಡಲಾಯಿತು.

# ಮೈಸೂರಲ್ಲಿ ಕಾಂಗ್ರೆಸ್ ನಾಯಕರ ಒಗ್ಗಟ್ಟು ಪ್ರದರ್ಶನ

## ●ಪಂಚ ಗ್ಯಾರಂಟಿಗಳೇ ನಮಗೆ ಶ್ರೀರಕ್ಷೆ ●ಬಿಜೆಪಿ–ಜೆಡಿಎಸ್ ಮೈತ್ರಿ ಒಡಕೇ ನಮಗೆ ಲಾಭ



ಮೈಸೂರಿನ ಹೆರಿಟೇಜ್ ಹೋಟೆಲ್‌ನಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಕಾಂಗ್ರೆಸ್ ನಾಯಕರು ಒಗ್ಗಟ್ಟು ಪ್ರದರ್ಶಿಸಿದರು.

ಮೈಸೂರು, ಮಾ.23(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಒಗ್ಗಟ್ಟು ಪ್ರದರ್ಶಿಸಿದೆ. ಮೈಸೂರಿನಲ್ಲಿ ಇಂದು ನಡೆದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕರು ತಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಗೆಲ್ಲಿಸಲು ಪಣ ತೊಟ್ಟರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಲ್ಲಿ 14 ಆಕಾಂಕ್ಷಿಗಳಿದ್ದರು. ಇವರಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್, ಶುಶ್ರುತ್‌ಗೌಡ್ ಹಾಗೂ ಲಕ್ಷ್ಮಣ ನಡುವೆ ಪ್ರಬಲ ಪೈಪೋಟಿ ಇತ್ತು. ಅಂತಿಮವಾಗಿ ಹೈಕಮಾಂಡ್ ಲಕ್ಷ್ಮಣರನ್ನು ಆಯ್ಕೆ ಮಾಡಿತ್ತು. ಇದರಿಂದ ಟಿಕೆಟ್ ವಂಚಿತರಲ್ಲಿ ಅಸಮಾಧಾನವಿದೆ ಎಂಬ ಮಾತುಗಳ ಹಿನ್ನೆಲೆಯಲ್ಲಿ ಮೈಸೂರಿನ ಹೆರಿಟೇಜ್ ಹೋಟೆಲ್‌ನಲ್ಲಿ ಇಂದು ನಡೆದ ಮಾಧ್ಯಮ ಸಂವಾದದಲ್ಲಿ ಟಿಕೆಟ್ ಆಕಾಂಕ್ಷಿಗಳು, ಹಾಲಿ ಶಾಸಕರು, ಮಾಜಿ ಶಾಸಕರು ಸೇರಿದಂತೆ ಹಲವು ನಾಯಕರು ಒಗ್ಗಟ್ಟು ಪ್ರದರ್ಶಿಸಿದರು.

ಈ ವೇಳೆ ಮಾತನಾಡಿದ ಲಕ್ಷ್ಮಣ, ಮುಖ್ಯಮಂತ್ರಿ ಸಿದ್ದರಾಮಯ್ಯರು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನಮಗೆ ಶ್ರೀರಕ್ಷೆ ಇದನ್ನು ಜನರಿಗೆ ಮನವರಿಕೆ ಮಾಡಿಕೊಟ್ಟು ಮತಯಾಚಿಸುತ್ತೇವೆ ಎಂದರು.

ಕಾಂಗ್ರೆಸ್ ಪ್ರತಿಯೊಬ್ಬ ನಾಯಕ ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಚಾರಕ್ಕೆ ಹೋಗುತ್ತೇನೆ. ಅದರಲ್ಲೂ ನರಸಿಂಹರಾಜ ಕ್ಷೇತ್ರಕ್ಕೆ ಹೋಗುವಾಗ ಶಾಸಕ ತನ್ವೀರ್ ಸೇಠ್ ಅವರಿಗೆ ತಿಳಿಸಿ, ಅವರ ಅನುಮತಿ ಪಡೆದೆ ಹೋಗುತ್ತೇನೆ. ನಾನು ಗೆದ್ದ ನಂತರ ಕೂಡ ಇದನ್ನು ಪಾಲಿಸುತ್ತೇನೆ ಎಂದು ತಿಳಿಸಿದರು.

**ನಮ್ಮ ಅಭ್ಯರ್ಥಿ ಸಾಮಾನ್ಯ ವ್ಯಕ್ತಿ:** ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ತನ್ವೀರ್ ಸೇಠ್, ಈಗಾಗಲೇ ಲೋಕಸಭಾ ಚುನಾವಣೆಯ ಕಾವು ರಂಗೇರಿದ್ದು, ಬಿಜೆಪಿ ಅಭ್ಯರ್ಥಿ ಬಗ್ಗೆ ವೈಯಕ್ತಿಕವಾಗಿ ನಾವು ಮಾತನಾಡುವುದಿಲ್ಲ. ಆದರೆ ನಮ್ಮ ಅಭ್ಯರ್ಥಿ ಸಾಮಾನ್ಯ ವ್ಯಕ್ತಿಯಾಗಿದ್ದು, ಇದನ್ನು ಪರಿಗಣಿಸಿ ಜನರು ಕಾಂಗ್ರೆಸ್ ಬೆಂಬಲಿಸುವ ವಿಶ್ವಾಸವಿದೆ ಎಂದು ಹೇಳಿದರು.

ಜಾತಿ, ಮತ, ಧರ್ಮದ ಆಧಾರದ ಮೇಲೆ ಮತ ಕೇಳದೆ ವಿವೇಕವಂತಿಕೆ ರಾಜಕಾರಣ ಮಾಡಬೇಕು. ನಾವಂತೂ ಯಾವುದೇ ಜಾತಿ, ಧರ್ಮದ ಹೆಸರಿನಿಂದ ಭಾವನಾತ್ಮಕ ವಿಚಾರ ಮುಂದಿಟ್ಟು ಚುನಾವಣೆ ಎದುರಿಸುವುದಿಲ್ಲ ಎಂದು ತನ್ವೀರ್ ಸೇಠ್ ಸ್ಪಷ್ಟಪಡಿಸಿದರು.

ಪ್ರತಿಯೊಬ್ಬ ಪ್ರಜೆಗೂ ಪಂಚ ಗ್ಯಾರಂಟಿ ಯೋಜನೆ ತಲುಪಿರುವುದೇ ನಮಗೆ ಶ್ರೀರಕ್ಷೆಯಾಗಿದೆ. ಮೈಸೂರು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತೇವೆ. ಸಿದ್ದರಾಮಯ್ಯ ಅವರಿಗೆ ಮೈಸೂರು ತವರು ಕ್ಷೇತ್ರವಾಗಿರುವ ಕಾರಣ ಇಲ್ಲಿನ ಫಲಿತಾಂಶ ಅವರಿಗೆ ಪ್ರತಿಷ್ಠೆಯಾಗಿದೆ ಎಂದು ಭಾವಿಸುವುದಿಲ್ಲ ಎಂದರು.

**ಪ್ರತಾಪ್ ಸಿಂಹಗೆ ಟಿಕೆಟ್ ತಪ್ಪಿದ್ದು ಬೇಸರ:** ಪ್ರತಾಪ್ ಸಿಂಹಗೆ ಟಿಕೆಟ್ ಸಿಗದಿರುವುದು ನಮಗೂ ಬೇಸರವಾಗಿದೆ. ಆದರೆ ಆ ಬೇಸರದಿಂದ ಉಂಟಾಗಿರುವ ರಾಜಕೀಯ ಬೆಳವಣಿಗೆಗಳಿಂದ ನಮಗೆ ಲಾಭವಾಗುತ್ತದೆ ಎಂದು ಭಾವಿಸುವುದಿಲ್ಲ. ರಾಜಕಾರಣದಲ್ಲಿ ಲಾಭ, ನಷ್ಟದ ಲೆಕ್ಕಾಚಾರ ಕಷ್ಟ ಎಂದು ತಿಳಿಸಿದರು.

ಆದರೆ ತತ್ವ, ಸಿದ್ಧಾಂತಕ್ಕೆ ವಿರುದ್ಧವಾಗಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿಯಾಗಿರುವ ಕಾರಣ ಅಲ್ಲಿನ ಭಿನ್ನಾಭಿಪ್ರಾಯ, ಒಳಜಗಳ, ಕಿತ್ತಾಟ ಕಾಂಗ್ರೆಸ್‌ಗೆ ಸಹಜವಾಗಿಯೇ ಲಾಭವಾಗುತ್ತದೆ ಎಂದು ತನ್ವೀರ್ ಸೇಠ್ ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆಲ್ಲದಿದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಗುತ್ತದೆ ಎಂಬ ಶಾಸಕ ಗುಬ್ಬಿ ಶ್ರೀನಿವಾಸ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ತನ್ವೀರ್ ಸೇಠ್, ಅವರು ಯಾವ ಧಾಟಿಯಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ತಿಳಿಸಿದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್ ಇನ್ನಿತರರು ಮಾಧ್ಯಮ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಮಾದಪ್ಪನಿಗೆ 700 ಕೆ.ಜಿ. ಬೆಳ್ಳಿ ಅರ್ಪಿಸಿದ ಸಿದ್ದರಾಮಯ್ಯ

ತಮಗೆ ಉಡುಗೊರೆಯಾಗಿ ಬಂದ ಬೆಳ್ಳಿ ಗದೆ, ಕತ್ತಿ ಸೇರಿದಂತೆ 700 ಕೆ.ಜಿ. ಬೆಳ್ಳಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಲೈ ಮಹದೇಶ್ವರ ಬೆಟ್ಟದ ಮಹದೇಶ್ವರನ ಸನ್ನಿಧಾನಕ್ಕೆ ನೀಡಿದ್ದಾರೆ. ಆದರೆ ಬಿಜೆಪಿಯವರಂತೆ ಎಲ್ಲೂ ಪ್ರಚಾರ ಮಾಡಿಲ್ಲ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಮ್ಮ ಮನೆ ದೇವರು ಮಹದೇಶ್ವರ, ಸಿದ್ದರಾಮಯ್ಯ ಮನೆ ದೇವರು ಸಿದ್ದರಾಮೇಶ್ವರ. ನಮಗೂ ಶ್ರೀರಾಮನ ಬಗ್ಗೆ ಭಕ್ತಿ ಇದೆ. ಆದರೆ ಬಿಜೆಪಿಯವರ ರೀತಿ ನಾವು ನಕಲಿ ರಾಮ ಭಕ್ತರಲ್ಲ ಎಂದು ಟೀಕಿಸಿದರು. ಧರ್ಮ ಎಂದರೇನು, ಜಾತಿ ಎಂದರೇನು ಎಂಬುದನ್ನು ನಾವು ಬಿಜೆಪಿ ಅವರಿಂದ ಕಲಿಯುವ ಅಗತ್ಯವಿಲ್ಲ. ನಾವು ಜನರ ಹಿತ ಕಾಯುವವರು. ಸರ್ವ ಜನಾಂಗದ ತೋಟ ಕರ್ನಾಟಕ ಎಂಬ ಪರಿಕಲ್ಪನೆಯಲ್ಲಿ ಕೆಲಸ ಮಾಡುವರು ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

### ಸಿದ್ದರಾಮಯ್ಯ ಹೆಸರೇಳಿ ಮತ ಯಾಚಿಸುತ್ತೇವೆ

ಬಿಜೆಪಿಯವರು ಪ್ರಧಾನಿ ಮೋದಿ ಹೆಸರೇಳಿ ಮತ ಕೇಳಿದರೆ, ನಾವು ಸಿದ್ದರಾಮಯ್ಯ ಹೆಸರೇಳಿ ಮತ ಕೇಳುತ್ತೇವೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು. ಬಿಜೆಪಿ ದುರಾಡಳಿತದ ಬಗ್ಗೆ ಜನರಿಗೆ ತಿಳಿಸಿ, ಪಂಚ ಗ್ಯಾರಂಟಿಯಿಂದ ಏನು ಪ್ರಯೋಜನವಾಗಿದೆ ಎಂದು ಜನರಿಗೆ ಮನದಟ್ಟು ಮಾಡಿಕೊಡುತ್ತೇವೆ. ಜೊತೆಗೆ ಸಿದ್ದರಾಮಯ್ಯ ಮೈಸೂರಿಗೆ ನೀಡಿರುವ ಕೊಡುಗೆಗಳನ್ನು ಕೂಡ ತಿಳಿಸಿ ಮತಯಾಚಿಸುತ್ತೇವೆ ಎಂದರು. ಕಾಂಗ್ರೆಸ್‌ನಲ್ಲಿ ಒಕ್ಕಲಿಗರಿಗೆ ಅನ್ಯಾಯ ಮಾಡಲಾಗಿದೆ ಎಂಬ ಆರೋಪವಿತ್ತು. ನಾನು ಶಾಸಕನಾಗಿರುವುದು, ಲಕ್ಷ್ಮಣ ಗೆ ಟಿಕೆಟ್ ನೀಡಿರುವುದು ಒಕ್ಕಲಿಗ ಸಮುದಾಯಕ್ಕೆ ಕಾಂಗ್ರೆಸ್‌ನಲ್ಲಿ ಸಿಕ್ಕಿರುವ ಪ್ರಾಧಾನ್ಯತೆಯನ್ನು ತೋರಿಸುತ್ತದೆ. ಈ ಮೂಲಕ ಕಾಂಗ್ರೆಸ್ ಎಲ್ಲಾ ಜಾತಿ, ಧರ್ಮಗಳನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತಿದೆ. ಆದರೆ ಈ ವಿಚಾರದಲ್ಲಿ ಬಿಜೆಪಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದೆ ಎಂದು ಆರೋಪಿಸಿದರು. ಮೈಸೂರಿನಲ್ಲಿ ಮಾರ್ಚ್ 27ರಂದು ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯುವ ಸಮಾವೇಶದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ತೊರೆದು ಬಹಳಷ್ಟು ನಾಯಕರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದರು.

# ಆರೋಗ್ಯ ಪೂರ್ಣ ಬದುಕಿಗೆ 'ಲಾಫ್ಟರ್ ಯೋಗ' ಸಹಕಾರಿ




ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಎಂಜಿನಿಯರ್‌ಗಳ ಸಂಸ್ಥೆ ಆವರಣದಲ್ಲಿ 'ಲಾಫ್ಟರ್ ಯೋಗ' ಕುರಿತು ಯೋಗಶಿಕ್ಷಕಿ ರಂಗಲಕ್ಷ್ಮಿ ಶ್ರೀನಿವಾಸ್ ಪ್ರಾಯೋಗಿಕ ಅಭ್ಯಾಸದ ಮೂಲಕ ತಿಳಿಸಿಕೊಟ್ಟರು.

ಮೈಸೂರು, ಮಾ.23(ಎಸ್‌ಪಿಎನ್)– ವಯಸ್ಸಾದವರು 'ಲಾಫ್ಟರ್ ಯೋಗ' ಅಭ್ಯಾಸ ಮಾಡುವುದರಿಂದ ಸಾಕಷ್ಟು ಪ್ರಯೋಜನಗಳಿವೆ ಎಂದು ಯೋಗ ಶಿಕ್ಷಕರಾದ ರಂಗಲಕ್ಷ್ಮಿ ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್ಸ್ಟ್ಯೂಟೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ 'ಲಾಫ್ಟರ್ ಯೋಗ' ಕುರಿತಾದ 'ಯೋಗ ಫಾರ್ ಹೆಲ್ತ್, ಹ್ಯಾಪಿನೆಸ್ ಅಂಡ್ ಪೀಸ್' ವಿಶೇಷ ಉಪನ್ಯಾಸ ಮತ್ತು ಪ್ರಾಯೋಗಿಕ ಅಭ್ಯಾಸದ ಮೂಲಕ ತಿಳಿಸಿಕೊಟ್ಟರು.

ಯೋಗದಲ್ಲಿ ಹಲವು ಆಸನಗಳಿವೆ. ಅದರಲ್ಲಿ ಲಾಫ್ಟರ್ ಯೋಗವೂ ಒಂದು. ಈ ಯೋಗವನ್ನು ವಯಸ್ಸಾದವರು ಹೆಚ್ಚಾಗಿ ಗುಂಪುಗೂಡಿ ಅಭ್ಯಾಸ ಮಾಡುತ್ತಾರೆ. ನಗುವ ಯೋಗದಿಂದ ಮಾನಸಿಕ ದೃಢತೆ, ಚಲನೆ, ಉಸಿರಾಟದ ಸಮಸ್ಯೆ ನಿವಾರಣೆ ಸೇರಿದಂತೆ ಇತರೆ ಆರೋಗ್ಯ ಸಮಸ್ಯೆಗಳಿಗೆ ಲಘು ಆಸನವಾಗಿದೆ ಎಂದರು.

ಲಾಫ್ಟರ್ ಯೋಗವು 1995ರಲ್ಲಿ ಮುಂಬೈನ ಡಾ.ಮದನ್ ಕಟಾರಿಯಾ ನೇತೃತ್ವದಲ್ಲಿ ಪ್ರಸಿದ್ಧಿ ಪಡೆದಿದೆ. ವಯಸ್ಸಾದವರು ಹಲವು ರೀತಿಯ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಈ ಯೋಗ ಅಭ್ಯಾಸದಿಂದ ಕೊಂಚ ರಿಲೀಫ್ ಸಿಗಲಿದೆ ಎಂದರು. ನಂತರ ಸಭಾಂಗಣದ ಹೊರಭಾಗದಲ್ಲಿ ಲಾಫ್ಟರ್ ಯೋಗದ ವಿವಿಧ ಭಂಗಿಗಳ ಆಸನಗಳನ್ನು ಪ್ರಾಯೋಗಿಕವಾಗಿ ಸಭಿಕರಿಗೆ ರಂಗಲಕ್ಷ್ಮಿ ಶ್ರೀನಿವಾಸ್ ಪರಿಚಯಿಸಿದರು. ಈ ವೇಳೆ ಕಾರ್ಯಕ್ರಮದ ಸಂಚಾಲಕಿ ಕೆ.ಎ.ಅನಿತ ವೆಂಕಟೇಶ್, ಕಾರ್ಯದರ್ಶಿ ಡಾ.ಎಸ್.ಎ.ಮೋಹನ ಕೃಷ್ಣ ಉಪಸ್ಥಿತರಿದ್ದರು.

# ಮೈಸೂರು ವಿಶ್ವ ವಿದ್ಯಾನಿಲಯ: ವಿದ್ಯಾರ್ಥಿನಿಲಯದ ಊಟದಲ್ಲಿ ಹಲ್ಲಿ

## ಕುವೆಂಪು ಪ್ರತಿಮೆ ಮುಂದೆ ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು, ಮಾ.23(ಜಿಎ)– ಮೈಸೂರು ವಿಶ್ವವಿದ್ಯಾನಿಲಯದ ಗೌತಮ ವಿದ್ಯಾರ್ಥಿ ನಿಲಯದ ಊಟದಲ್ಲಿ ಹಲ್ಲಿ ಬಿದ್ದಿರುವುದನ್ನು ಖಂಡಿಸಿ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಪ್ರತಿಮೆ ಮುಂಭಾಗ ಶನಿವಾರ ಪ್ರತಿಭಟನೆ ನಡೆಸಿದರು.

ಸುಮಾರು 111 ವಿದ್ಯಾರ್ಥಿಗಳು ಊಟ ಸೇವಿಸಿದ್ದಾರೆ. ಶುಚಿತ್ವ ಇಲ್ಲದ ಕಾರಣ ಈ ರೀತಿಯ ಸಮಸ್ಯೆಗಳಾಗುತ್ತಿವೆ. ಮೇಲಾಧಿಕಾರಿಗಳಿಗೆ ಇಲ್ಲಿನ ಪರಿಸ್ಥಿತಿ ಕುರಿತು ಅನೇಕ ಬಾರಿ ಮನದಟ್ಟು ಮಾಡಿದ್ದೇವೆ. ಈಚೆಗೆ ಇಡೀ ರಾತ್ರಿ ಪ್ರತಿಭಟನೆಯನ್ನೂ ನಡೆಸಿದ್ದೇವೆ. ಮನೆಯನ್ನು ಬಿಟ್ಟು ಶಿಕ್ಷಣಕ್ಕಾಗಿ ಇಲ್ಲಿ ಬಂದಿದ್ದು, ಆಹಾರಕ್ಕಾಗಿ ಪರದಾಡಬೇಕಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಕ್ಕಿ ಸರಬರಾಜಿಗೆ ಟೆಂಡರ್ ನೀಡಿದ್ದು, ಅವರು ಗುಣಮಟ್ಟದ ಅಕ್ಕಿ ಪೂರೈಸುತ್ತಿಲ್ಲ. ಇದರಿಂದಾಗಿ ಊಟವೂ ಚೆನ್ನಾಗಿರುವುದಿಲ್ಲ. ಅದನ್ನು ಸೇವಿಸಲೂ ಕಷ್ಟವಾಗುತ್ತದೆ. ಅನೇಕ ವರ್ಷದಿಂದ ಈ ಸಮಸ್ಯೆ ಇದ್ದರೂ ಸಂಬಂಧಪಟ್ಟವರು ಸ್ಪಂದಿಸುತ್ತಿಲ್ಲ ಎಂದು ದೂರಿದರು. ಸ್ಥಳಕ್ಕಾಗಮಿಸಿದ ಸಿಂಡಿಕೇಟ್ ಸದಸ್ಯ ನಾಗರಾಜ್ ಮಾತನಾಡಿ, 'ಕುಲಪತಿ, ಕುಲಸಚಿವರು ಕಾರ್ಯನಿಮಿತ್ತ ಹೊರಗಡೆ ಇದ್ದಾರೆ. ಸೋಮವಾರ ಈ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದ ಸಚಿನ್, ಗಿರೀಶ್, ನವೀನ್ ಕೋಳೂರು, ಭರತ್, ರೋಹಿತ್ ಇನ್ನಿತರ ವಿದ್ಯಾರ್ಥಿಗಳು ಪಾಲ್ಗೊಂಡಿದರು.



# ಏ.26ರಂದು ನಡೆಯುವ ಉತ್ಸವಗಳ ಮುಂದೂಡಿಕೆ

ಮೈಸೂರು,ಮಾ.23–ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಮತದಾನವನ್ನು ಸುಸೂತ್ರವಾಗಿ ನಡೆಸಲು ಹಾಗೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಏ.26ರಂದು ಜಿಲ್ಲೆಯಲ್ಲಿ ನಡೆಯುವ ಎಲ್ಲಾ ರೀತಿಯ ಜಾತ್ರೆ, ಸಂತೆ, ಉತ್ಸವಗಳನ್ನು ಮುಂದೂಡಲು ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾದಂಡಾಧಿಕಾರಿ ಡಾ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಿನಕಲ್‌ನ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಬೀಳ್ಕೊಡುಗೆ ಮತ್ತು ಸರಸ್ವತಿ ಮಾತಾ ಪೂಜಾ ಕಾರ್ಯಕ್ರಮ ನಡೆಯಿತು. ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್‌ನ ಅಧ್ಯಕ್ಷ ಹೆಚ್.ಸಿ.ರಾಜು, ಕಾಂಗ್ರೆಸ್ ಮುಖಂಡ ಹಿನಕಲ್ ಪ್ರಕಾಶ್, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಗಣೇಶ್, ಎಸ್‌ಡಿಎಂಸಿ ಅಧ್ಯಕ್ಷ ಸಿದ್ದಾಚಾರಿ, ಸದಸ್ಯರಾದ ಶಿವಪ್ರಸಾದ್, ಲಕ್ಷೀ, ಮುಖ್ಯ ಶಿಕ್ಷಕಿ ಪ್ರಮೀಳ, ಸಹ ಶಿಕ್ಷಕರಾದ ಸುಜಯ, ನೇತ್ರಾವತಿ, ಕುಮಾರಿ, ಹೇಮಾ, ವೆನಿಲ, ಜನಾರ್ಧನ, ರಾಘವೇಂದ್ರ, ಮಂಜುನಾಥ, ರುಕ್ಮಿಣಿ ಉಪಸ್ಥಿತರಿದ್ದರು.



# ವೃತ್ತಿ ಬದುಕಿನಲ್ಲಿ ಯಶಸ್ವಿಯಾಗಬೇಕಾದರೆ ವಿವಿಧ ಭಾಷೆಯ ಸಂವಹನ ಕೌಶಲ ಅವಶ್ಯ

## ವ್ಯವಹಾರಿಕ ತಜ್ಞ ಸುರೇಶ್ ನಾರಾಯಣ ಅಭಿಮತ



ವಿದ್ವತ್–2024ರ ಸ್ಪರ್ಧೆಯಲ್ಲಿ ಹುಬ್ಬಳ್ಳಿ ಕೆಎಲ್‌ಇ ಕಾಲೇಜು ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನ ವಿದ್ಯಾರ್ಥಿಗಳು 'ಸಮಗ್ರ ಪ್ರಶಸ್ತಿ' ಪಡೆದಿರುವ ದೃಶ್ಯ. ಮತ್ತೊಂದು ಚಿತ್ರದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

> ವಿದ್ಯಾರ್ಥಿಗಳು ಯಾವುದೇ ಭಾಷೆಯನ್ನು ಕಲಿತು ಅದರಲ್ಲಿ ಪರಿಣಿತಿ ಹೊಂದಬೇಕಾದರೆ, ಆ ಭಾಷೆಯಲ್ಲಿ ಬೇರೆಯವರೊಂದಿಗೆ ನಿರಂತರ ಸಂವಹನ ಮಾಡಬೇಕು. ಆಗ ಮಾತ್ರ ಆ ಭಾಷೆ ಮೇಲೆ ಹಿಡಿತ ಸಾಧಿಸಬಹುದು.
> -ಪಿ.ವಿಶ್ವನಾಥ್, ಗೌರವ ಕಾರ್ಯದರ್ಶಿ, ವಿದ್ಯಾವರ್ಧಕ ವಿದ್ಯಾಸಂಸ್ಥೆ

ಮೈಸೂರು, ಮಾ.23(ಎಸ್‌ಪಿಎನ್)– ಪದವಿಯ ನಂತರ ವಿದ್ಯಾರ್ಥಿಗಳು ವ್ಯವಹಾರಿಕ ಮತ್ತು ವೃತ್ತಿ ಬದುಕಿನಲ್ಲಿ ಯಶಸ್ವಿಯಾಗಿ ಮುಂದುವರೆಯಬೇಕಾದರೆ, ವಿವಿಧ ಭಾಷೆಯ ಸಂವಹನ ಕೌಶಲ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮೈಸೂರಿನ ಸೈಯಂಟ್ ಡಿಎಲ್‌ಎಂ ಲಿಮಿಟೆಡ್‌ನ ಫೈನಾನ್ಷಿಯಲ್ ಪ್ಲಾನಿಂಗ್ ಅಂಡ್ ಅನಾಲಿಸಿಸ್ ವಿಭಾಗದ ಜನರಲ್ ಮ್ಯಾನೇಜರ್ ಸುರೇಶ್ ನಾರಾಯಣ ಅಭಿಪ್ರಾಯಪಟ್ಟರು.

ಮೈಸೂರು ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಆಯೋಜಿಸಿದ್ದ ವಿದ್ವತ್–2024ರ ಸಮಾರೋಪದಲ್ಲಿ ಅಂತರ ವಿಶ್ವವಿದ್ಯಾನಿಲಯ ರಾಜ್ಯಮಟ್ಟದ ಕ್ರಿಯಾಶ್ರೀಲತೆ, ಕೌಶಲ್ಯ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಜೀವನದ ಅಮೂಲ್ಯವಾದ ಘಟ್ಟಗಳನ್ನು ನಿರ್ಧರಿಸುವಾಗ ಎಡವಟ್ಟು ಮಾಡಿಕೊಳ್ಳುತ್ತಾರೆ. ಇಂತಹ ನಿರ್ಧಾರದಿಂದ ವಿದ್ಯಾರ್ಥಿಗಳು ಜೀವನ ಪೂರ್ತಿ ಕೊರಗಬೇಕಾಗುತ್ತದೆ. ಹಾಗಾಗಿ ಪದವಿಯ ನಂತರ ಜೀವನ ರೂಪಿಸಿಕೊಳ್ಳಲು ಕಾಲೇಜಿನ ದಿನಗಳಲ್ಲೇ ವೃತ್ತಿ ಜೀವನದಲ್ಲಿ ತೊಡಗಿಸಿಕೊಳ್ಳುವ ಕಡೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಹುಬ್ಬಳ್ಳಿ ಕೆಎಲ್‌ಇ ಕಾಲೇಜು ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನ ವಿದ್ಯಾರ್ಥಿಗಳು 'ಸಮಗ್ರ ಪ್ರಶಸ್ತಿ' ಹಾಗೂ 15 ಸಾವಿರ ನಗದು ಬಹುಮಾನವನ್ನು ಪಡೆದರೆ, ಮಂಗಳೂರಿನ ಸೇಂಟ್ ಆಗ್ನೇಸ್ ಕಾಲೇಜು ವಿದ್ಯಾರ್ಥಿಗಳು ಎರಡನೇ ಸ್ಥಾನ ಪಡೆದು ರನ್ನರ್ ಅಪ್ ಪ್ರಮಾಣ ಪತ್ರ ಪಡೆದರು. ವಿದ್ವತ್ –2024ರ ಪ್ರಧಾನ ಸ್ಪರ್ಧೆಗೆ ರಾಜ್ಯದ ವಿವಿಧ ಜಿಲ್ಲೆಯ 20 ಕಾಲೇಜುಗಳಿಂದ 56 ತಂಡಗಳು ಹಾಗೂ ಅನುಸಾಂಘಿಕ ಸ್ಪರ್ಧೆಗಳಿಗೆ 20 ಕಾಲೇಜಿನಿಂದ 120 ತಂಡಗಳು ಭಾಗವಹಿಸಿ, ವಿದ್ಯಾರ್ಥಿಗಳು ಪ್ರಮಾಣ ಪತ್ರ ಪಡೆದರು.

ಈ ವೇಳೆ ವಿದ್ಯಾವರ್ಧಕ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ವಿದ್ವತ್ ಕಾರ್ಯಕ್ರಮದ ಮುಖ್ಯಸಂಚಾಲಕಿ ಎನ್.ಗೀತಾ, ಸಹ–ಸಂಚಾಲಕರಾದ ಆರ್.ವಿದ್ಯಾ ಹಾಗೂ ಎಂ.ಹರ್ಷಿತಾ, ಕಾಲೇಜಿನ ಬೋಧಕ, ಬೋಧಕೇತರರು, ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಿದ್ದರು. ವಿದ್ಯಾರ್ಥಿನಿ ರಹೀಮಾ ರೋಷನ್ ಸ್ವಾಗತಿಸಿದರೆ, ವಿದ್ಯಾರ್ಥಿನಿ ಕೀರ್ತನಾ ವಂದಿಸಿದರೆ, ತೇಜಸ್ವಿನಿ ನಿರೂಪಿಸಿದರು. ಕಾರ್ಯಕ್ರಮದ ವರದಿಯನ್ನು ವಿದ್ಯಾರ್ಥಿನಿ ವಿದ್ಯಾ ಮಂಡಿಸಿದರು.

ಮೈಸೂರು ಮಿತ್ರ ಭಾನುವಾರ 24 ಮಾರ್ಚ್ 2024

## ಕಾರು ಡಿಕ್ಕಿ: ಬೈಕ್ ಹಿಂಬದಿ ಸವಾರ ಸಾವು


ಕೆ.ಎಸ್.ಶೇಖರ್

ಹಲಗೂರು,ಮಾ.23– ಬೈಕಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸಾವನ್ನಪ್ಪಿ ವ್ಯಕ್ತಿಯೋರ್ವ ಗಾಯಗೊಂಡಿರುವ ಘಟನೆ ಹಲಗೂರು ಹೆದ್ದಾರಿ ಹೆಚ್.ಬಸಾಪುರ ಬಳಿ ಸಂಭವಿಸಿದೆ. ಕಂಡಯಾನ ದೊಡ್ಡಗ್ರಾಮದ ಸಿದ್ದಶೆಟ್ಟಿ ಅವರ ಪುತ್ರ ಕೆ.ಎಸ್.ಶೇಖರ್(37) ಮೃತ ದುರ್ದೈವಿ. ತೀವ್ರ ಗಾಯಗೊಂಡಿರುವ ಇದೇ ಗ್ರಾಮದ ಮಂಚೇಗೌಡರ ಪುತ್ರ ಸುರೇಶ್ ಅವರನ್ನೂ ಆಸ್ಪತ್ರೆಗೆ ಸೇರಿಸಲಾಗಿದೆ

ಗುಂಡಾಪುರ ಗ್ರಾಮದ ಬೆಟ್ಟದರಸಮ್ಮ ಜಾತ್ರೆಯ ಪ್ರಯುಕ್ತ ಇಂದು ಬಸವನಬೆಟ್ಟದಿಂದ ತಟ್ಟೆ ತರುವುದನ್ನು ನೋಡಲು ಕೆಂಪಯ್ಯನದೊಡ್ಡಿ ಗ್ರಾಮದ ಸುರೇಶ್ ಮತ್ತು ಶೇಖರ್ ಹಲಗೂರು ಹೆದ್ದಾರಿಯಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಕಾರು ಹಿಂದಿನಿಂದ ಬೈಕ್‌ಗೆ ಡಿಕ್ಕಿ ಹೊಡೆದಾಗ ಈ ಘಟನೆ ಸಂಭವಿಸಿದೆ. ಸ್ಥಳಕ್ಕೆ ಸಿಪಿಐ ಶ್ರೀಧರ್ ಪಿ.ಎಸ್.ಐ. ಮಹೇಂದ್ರ ಸ್ಥಳ ಪರಿಶೀಲನೆ ನಡೆಸಿದ್ದು, ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಿದ್ಯುತ್ ಶಾರ್ಟ್ ಸರ್ಕ್ಯೂಟ್; ಅಗತ್ಯ ವಸ್ತುಗಳು ಸುಟ್ಟು ಕರಕಲು



ಭಾರತೀನಗರ,ಮಾ.23–ಇಲ್ಲಿಗೆ ಸಮೀಪದ ಮೆಳ್ಳಹಳ್ಳಿ ಗ್ರಾಮದ ಮನೆಯೊಂದರಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಯಲ್ಲಿದ್ದ ಬಟ್ಟೆ ಮತ್ತು ಉಪಕರಣಗಳು ಸುಟ್ಟುಕರಕಲಾಗಿರುವ ಘಟನೆ ಜರುಗಿದೆ.

ಸವಿತ ಗುರುಮೂರ್ತಿ ಎಂಬುವವರ ಮನೆ ಈ ಘಟನೆ ಸಂಭವಿಸಿದೆ. ಗುರುಮೂರ್ತಿ ಎಂದಿನಂತೆ ಕೂಲಿ ಕೆಲಸಕ್ಕೆ ಹೋಗಿದ್ದಾರೆ. ಪತ್ನಿ ಸವಿತ ಮದ್ದೂರಿನ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗಿದ್ದಾರೆ. ಇಬ್ಬರು ಮಕ್ಕಳು ಸಹ ಕಾಲೇಜಿಗೆ ಹೋಗಿ ಬರುವಷ್ಟರಲ್ಲಿ ಈ ಘಟನೆ ಜರುಗಿದೆ. ಈ ದಂಪತಿ ಬಡತನದಿಂದ ಜೀವನ ನಡೆಸುತ್ತಿದ್ದು ಈ ಘಟನೆಯಿಂದ ಮನೆ ಬಳಕೆ ವಸ್ತು ಮತ್ತು ಉಪಕರಣಗಳು ಸೇರಿ ಸುಮಾರು 1 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ. ಸಂಬಂಧಪಟ್ಟ ಇಲಾಖೆ, ಜಿಲ್ಲಾ ಮತ್ತು ತಾಲೂಕು ಆಡಳಿತದಿಂದ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮ ಪಂಚಾಯಿತಿ ಸದಸ್ಯ ಪುಟ್ಟರಾಮು ಒತ್ತಾಯಿಸಿದ್ದಾರೆ.

## ಅಣ್ಣೂರಲ್ಲಿ ಸಿಕ್ಕಿಬಿದ್ದ ಕೋಳಿ ಕಳ್ಳ

ಭಾರತೀನಗರ,ಮಾ.23– ಕಳ್ಳನೊಬ್ಬ ತಡರಾತ್ರಿ ಕೋಳಿ ಕದಿಯಲು ಹೋಗಿ ಗ್ರಾಮದ ಯುವಕರಿಗೆ ಸಿಕ್ಕಿಬಿದ್ದಿರುವ ಘಟನೆ ಅಣ್ಣೂರು ಗ್ರಾಮದಲ್ಲಿ ಜರುಗಿದೆ.

ಭರತ್ ಎಂಬ ಯುವಕನೇ ಕೋಳಿ ಫಾರಂನಲ್ಲಿ ಕೋಳಿಗಳನ್ನು ಖದಿಯುತ್ತಿದ್ದಾಗ ಸಿಕ್ಕಿಬಿದ್ದ ಕಳ್ಳ. ಅಣ್ಣೂರು ಗ್ರಾಮದಲ್ಲಿ ಸಂತೋಷ್ ಎಂಬ ಯುವಕ ನಾಟಿ ಕೋಳಿ ಫಾರಂ ಮಾಡಿದ್ದು ಈ ಫಾರಂನಲ್ಲಿ ಸುಮಾರು 500ಕ್ಕೂ ಹೆಚ್ಚು ಕೋಳಿಗಳನ್ನು ಸಾಕಿದ್ದರು. ಈ ಹಿಂದೆಯು ಸಹ ಸುಮಾರು 50ಕ್ಕೂ ಹೆಚ್ಚು ಕೋಳಿಗಳು ಕಳ್ಳತನವಾಗಿದ್ದವು. ಇದನ್ನು ಗಮನಿಸಿದ ಕೋಳಿಫಾರಂ ಮಾಲೀಕ ಸಂತೋಷ್ ಕೋಳಿಗಳನ್ನು ಕಾಯಲು ಆರಂಬಿಸಿದ್ದರು.

ಶನಿವಾರ ಮುಂಜಾನೆ 5 ಗಂಟೆಯಲ್ಲಿ ಕೋಳಿಗಳನ್ನು ಕದ್ದೊಯ್ಯುತ್ತಿದ್ದಾಗ ಯುವಕರು ಕೋಳಿ ಕಳ್ಳನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕೆಎಂ.ದೊಡ್ಡಿ ಪೊಲೀಸರಿಗೆ ಕೋಳಿಫಾರಂ ಮಾಲೀಕ ಸಂತೋಷ್ ದೂರು ನೀಡಿದ್ದಾರೆ. ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಮೇಲುಕೋಟೆಯಲ್ಲಿ ವೈಭವದ ಗಜೇಂದ್ರ ಮೋಕ್ಷ ಉತ್ಸವ

### ರಾಜಮುಡಿ ಕಿರೀಟಧಾರಣೆಯೊಂದಿಗೆ ಕಂಗೊಳಿಸಿದ ಚೆಲುವನಾರಾಯಣ

**ಮೇಲುಕೋಟೆ:** ಚೆಲುವನಾರಾಯಣಸ್ವಾಮಿಗೆ ವೈರಮುಡಿ ಬ್ರಹ್ಮೋತ್ಸವದ 6ನೇ ತಿರುನಾಳ್ ನಿಮಿತ್ತ ಶನಿವಾರ ರಾತ್ರಿ ಗಜೇಂದ್ರಮೋಕ್ಷ ಉತ್ಸವ ವೈಭವದಿಂದ ನೆರವೇರಿತು. ಬೃಹತ್ ಶ್ವೇತಛತ್ರಿಗಳ ನಡುವೆ ಗರುಡಾರೂಢನಾಗಿ ರಾಜಮುಡಿ ಕಿರೀಟಧಾರಣೆಯೊಂದಿಗೆ ಕಂಗೊಳಿಸಿದ ಚೆಲುವನನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು.

ಮಂಟಪೋತ್ಸವಗಳು ಮುಗಿದ ನಂತರ ಸಂಜೆ ಕಲ್ಯಾಣಿಯ ಗಜೇಂದ್ರವರದನ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆದ ನಂತರ ಗಜೇಂದ್ರ ಮೋಕ್ಷ ಉತ್ಸವಕ್ಕೆ ಚಾಲನೆ ನೀಡಲಾಯಿತು. ಕಲ್ಯಾಣಿಯಲ್ಲಿ ಸಂಜೆ 6.30ಕ್ಕೆ ಆರಂಭವಾದ ಉತ್ಸವ ರಾತ್ರಿ 8 ಗಂಟೆಯ ವೇಳೆಗೆ ಮುಕ್ತಾಯವಾಯಿತು. ರಾತ್ರಿ 9 ಗಂಟೆಗೆ ಆನೆ ವಾಹನೋತ್ಸವ ಮತ್ತು ಅಶ್ವ ವಾಹನೋತ್ಸವಗಳು ವೈಭವದಿಂದ ನೆರವೇರಿತು. ವಿದ್ವಾನ್ ಎಂ.ಎನ್.ಪಿ ರತ್ನಂ ಮತ್ತು ಪದ್ಮನಾಭನ್ ತಂಡ ಉತ್ಸವದಲ್ಲಿ ನಾದೋಪಾಸನ ಸೇವೆಯಡಿ ಸ್ಯಾಕ್ಸೋಫೋನ್ ವಾದನ ಸೇವೆ ನೆರವೇರಿಸಿದರು.


ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ವೈರಮುಡಿ ಬ್ರಹ್ಮೋತ್ಸವದ 6ನೇದಿನವಾದ ಶನಿವಾರ ರಾತ್ರಿ ಗಜೇಂದ್ರಮೋಕ್ಷ ಉತ್ಸವ ನೆರವೇರಿತು

**ಭಕ್ತಸ್ನೇಹಿಯಾಗಿ ರಥೋತ್ಸವ:** ಕಳೆದ ವರ್ಷ ಭಕ್ತರಿಗೆ ಯಾವುದೇ ಮಾಹಿತಿ ನೀಡದೆ ಅನೂಚಾನ ಸಮಯದಂತೆ ನಡೆಸದೆ ರಥೋತ್ಸವವನ್ನು 11 ಗಂಟೆಯ ವೇಳೆಗೆ ಮುಕ್ತಾಯ ಮಾಡಲಾಗಿತ್ತು ಇದರಿಂದ ತೇರೊಪ್ಪತ್ತು ಮಾಡುವ ಸಹಸ್ರಾರು ಸಂಖ್ಯೆಯ ಭಕ್ತರು ರಥದರ್ಶನ ಸಿಗದೆ ನಿರಾಶರಾದರಲ್ಲದೆ ಆಕ್ರೋಶ ವ್ಯಕ್ತಪಡಿಸಿದ್ದರು. ಅಂದಿನ ಜಿಲ್ಲಾಧಿಕಾರಿಗಳು ಈ ಮಾದರಿಯಲ್ಲಿ ಮನಬಂದಂತೆ ನಡೆಸುವುದನ್ನು ನಿಲ್ಲಿಸಿ ಭಕ್ತರಿಗೆ ಅನುಕೂಲವಾಗುಂತೆ ನಡೆಸಬೇಕು ಎಂದು ದೇವಾಲಯದ ಎಚ್ಚರಿಕೆ ನೀಡಿದ್ದರು.

ಈ ವರ್ಷ ಹೀಗಾಗದಂತೆ ಭಕ್ತಸ್ನೇಹಿಯಾಗಿ ದೂರದಿಂದ ಬರುವ ಭಕ್ತರೂ ಸಹ ರಥ ದರ್ಶನ ಮಾಡುವಂತೆ ರಾಮಾನುಜಾಚಾರ್ಯರ ಕಾಲದಿಂದಲೂ ಹೇಗೆ ನಡೆಯುತ್ತಿತ್ತೊ ಅದೇ ಸಮಯದಲ್ಲಿ ರಥೋತ್ಸವ ನಡೆಸುವಂತೆ ಪಾರುಪತ್ತೇಗಾರರಿಗೆ ಸೂಚಿಸಲಾಗಿದೆ ಕಲಾತಂಡಗಳೂ ಸಹ ರಥೋತ್ಸವದಲ್ಲಿ ಭಾಗಿಯಾಗಲಿವೆ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಾಹಿತಿ ನೀಡಿದ್ದಾರೆ.

**ಭಾನುವಾರ ಮಹಾರಥೋತ್ಸವ ನೆರವೇರಲಿದ್ದು ಸಾವಿರಾರು ಸಂಖ್ಯೆಯಲ್ಲಿ ಚೆಲುವನಾರಾಯಣಸ್ವಾಮಿ ಭಕ್ತರು ತಂಡೋಪತಂಡವಾಗಿ ಆಗಮಿಸುತ್ತಿದ್ದು ಕಲ್ಯಾಣಿ ಸಮುಚ್ಚಯದ ಸಾಲುಮಂಟಪಗಳು, ದೇವಾಲಯದ ಕೈಸಾಲೆಗಳಲ್ಲಿ ವಸತಿಗಾಗಿ ಆಶ್ರಯ ಪಡೆದಿದ್ದಾರೆ. ಶ್ರೀದೇವಿ ಭೂದೇವಿ ಕಲ್ಯಾಣ ನಾಯಕಿಯರು ಆಚಾರ್ಯ ರಾಮಾನುಜರ ಸಮೇತನಾದ ಚೆಲುವನಾರಾಯಣಸ್ವಾಮಿಗೆ ವೈರಮುಡಿ ಬ್ರಹ್ಮೋತ್ಸವದ 7ನೇ ತಿರುನಾಳ್ ಅಂಗವಾಗಿ ಮಹಾರಥೋತ್ಸವ ನಡೆಯಲಿದೆ ಬೆಳಿಗ್ಗೆ 9.30ಕ್ಕೆ ಯಾತ್ರಾದಾನದ ನಂತರ ಉತ್ಸವ ಆರಂಭವಾಗಲಿದೆ ಪೂಜಾಕೈಂಕರ್ಯಗಳು ಮುಗಿದ ನಂತರ ಮಹಾರಥೋತ್ಸವ ಆರಂಭವಾಗಲಿದ್ದು ಚತುರ್ವೀದಿಗಳಲ್ಲಿ ಸಂಚರಿಸಲಿದೆ. ರಥೋತ್ಸವದ ರಾತ್ರಿ ಹರಿಜನರ ಸೇವೆಯಾದ ಬಂಗಾರದ ಪಲ್ಲಕ್ಕಿ ಉತ್ಸವ ನೆರವೇರಲಿದೆ**

## ಗ್ಯಾರಂಟಿಯಿಂದ ಬರಗಾಲದಲ್ಲಿ ಜನರಿಗೆ ಅನುಕೂಲ

### ಕಾಂಗ್ರೆಸ್-ರೈತಸಂಘದ ಸಭೆಯಲ್ಲಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ

ಪಾಂಡವಪುರ,ಮಾ.23–ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳು ಬರಗಾಲದಲ್ಲಿ ಜನರ ಬದುಕು ನಿರ್ವಹಣೆಗೆ ಸಹಕಾರಿಯಾಗಿವೆ. ಜನರ ಪರವಾಗಿ ಕೆಲಸ ಮಾಡುತ್ತಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಜಿಲ್ಲೆಯ ಜನತೆ ಮತ ನೀಡುವ ಮೂಲಕ ಕೈಬಲಪಡಿಸಬೇಕೆಂದು ಸಚಿವ ಎನ್.ಚಲುವರಾಯಸ್ವಾಮಿ ಮನವಿ ಮಾಡಿದರು.


ಪಾಂಡವಪುರ ತಾಲೂಕಿನ ಜಯಂತಿನಗರದಲ್ಲಿ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಪರವಾಗಿ ನಡೆದ ರೈತಸಂಘ–ಕಾಂಗ್ರೆಸ್ ಜಂಟಿ ಕಾರ್ಯಕರ್ತರ ಪ್ರಚಾರ ಸಭೆಯಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ತಾಲೂಕಿನ ಜಯಂತಿನಗರ ಎಸ್‌ಎಲ್‌ವಿ ಕಲ್ಯಾಣ ಮಂಟಪದ ಬಳಿ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಪರವಾಗಿ ನಡೆದ ರೈತಸಂಘ–ಕಾಂಗ್ರೆಸ್ ಕಾರ್ಯಕರ್ತರ ಜಂಟಿ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಜಿಲ್ಲೆಗೆ ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿಪಡಿಸಿದೆ, ಸಿಎಂ ಸಿದ್ದರಾಮಯ್ಯನವರು ಮಂಡ್ಯ ಜಿಲ್ಲೆಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಕೊಟ್ಟ ಮಾತಿನಂತೆ ಜಿಲ್ಲೆಯ ಮೈಶುಗರ್ ಹೊಸ ಕಾರ್ಖಾನೆ ಹಾಗೂ ಕೃಷಿ ವಿಶ್ವವಿದ್ಯಾನಿಲಯ ಮಂಜೂರು ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಅವರು ದೊಡ್ಡ ಉದ್ಯಮಿಯಾಗಿದ್ದಾರೆ. ಜನಸೇವೆ ಮಾಡಬೇಕು ಎಂಬ ಉದ್ದೇಶದಿಂದ ರಾಜಕೀಯಕ್ಕೆ ಬಂದಿದ್ದಾರೆ ಹೊರತು ಹಣಮಾಡಬೇಕು ಎಂಬ ಆಸೆಯಿಂದ ಬಂದಿಲ್ಲ. ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳಿಂದ ಲಕ್ಷಾಂತರ ಕುಟುಂಬಗಳು ಬರಗಾಲದ ನಡುವೆಯೂ ಸಹ ನೆಮ್ಮದಿಯ ಜೀವನ ನಡೆಸುತ್ತಿವೆ. ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಶಾಸಕರು ಒಳ್ಳೆಯ ಅಭಿವೃದ್ಧಿ ಕೆಲಸ ಮಾಡಿ ಜನರ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದೇವೆ. ಜಿಲ್ಲೆಯ ಜನತೆ ನಮ್ಮ ಅಭ್ಯರ್ಥಿಗೆ ಮತಕೊಟ್ಟು ಗೆಲ್ಲಿಸಿ ನಮಗೆ ಐದು ವರ್ಷ ಅವಕಾಶಕೊಡಿ ಎಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ರಾಜ್ಯ ಸಂಘ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ತೀರ್ಮಾನಿಸಿದೆ. ರೈತ ಸಂಘ – ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸ್ಟಾರ್ ಚಂದ್ರು ಅವರನ್ನು ಬೆಂಬಲಿಸಿ. ಬೂತ್‌ಮಟ್ಟದಲ್ಲಿ ನಮ್ಮ ಅಭ್ಯರ್ಥಿಗೆ ಹೆಚ್ಚಿನ ಮತ ಹಾಕಿಸುವ ನಿಟ್ಟಿನಲ್ಲಿ ಕೆಲಸ ಮಾಡಿ ಎಂದು ಮನವಿ ಮಾಡಿದರು.

ಶಾಸಕ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿದರು. ಸಭೆಯಲ್ಲಿ ಮಾಜಿ ಶಾಸಕ ಎಚ್.ಪಿ.ರಾಮು, ಕೆಪಿಸಿಸಿ ಸದಸ್ಯ ಎಚ್.ತ್ಯಾಗರಾಜು, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಂಗ್ರೆಸ್ ಮುಖಂಡ ಬಿ.ರೇವಣ್ಣ, ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು, ಸಿ.ಕೆ.ನಾಗರಾಜು, ರೈತನಾಯಕಿ ಸುನೀತ ಪುಟ್ಟಣ್ಣಯ್ಯ, ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ತಾಲೂಕು ಅಧ್ಯಕ್ಷ ಪಿ.ನಾಗರಾಜು, ಎಸ್.ದಯಾನಂದ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಕೃಷ್ಣೇಗೌಡ, ಡಿ.ಹುಚ್ಚೇಗೌಡ, ಸಿ.ಆರ್.ರಮೇಶ್ ಸೇರಿದಂತೆ ಇತರರಿದ್ದರು.

## ಸುಮಲತಾಗೆ ಕೈತಪ್ಪಿದ ಟಿಕೆಟ್: ಪಕ್ಷೇತರ ಸ್ಪರ್ಧೆಗೆ ಒತ್ತಾಯ



ಮಂಡ್ಯ,ಮಾ.23–ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಟಿಕೆಟ್ ಸಿಕ್ಕೇ ಸಿಗುತ್ತದೆ ಎಂಬ ಭರವಸೆಯಲ್ಲಿದ್ದ ಹಾಲಿ ಸಂಸದೆ ಸುಮಲತಾ ಅಂಬರೀಷ್‌ಗೆ ಭಾರೀ ಹಿನ್ನಡೆಯಾಗಿದ್ದು, ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುತ್ತಿರುವುದಾಗಿ ಬಿಜೆಪಿ ಅಧಿಕೃತ ಘೋಷಣೆ ಮಾಡಿದೆ.

ಈ ನಿಟ್ಟಿನಲ್ಲಿ ಸುಮಲತಾ ಬೆಂಬಲಿಗರು ಅಸಮಾಧಾನ ವ್ಯಕ್ತಪಡಿಸಿದ್ದು, ಈ ಬಗ್ಗೆ ಬೆಂಬಲಿಗರ ಸಭೆ ಕರೆದು ಸೂಕ್ತ ನಿರ್ಧಾರ ಕೈಗೊಂಡು ಪಕ್ಷೇತರರಾಗಿ ಸ್ಪರ್ಧಿಸಬೇಕೆಂದು ಒತ್ತಾಯ ಮಾಡಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಸುಮಲತಾ ಅಂಬರೀಷ್ ಆಪ್ತ ಹನಕೆರೆ ಶಶಿಕುಮಾರ್, ಬಿಜೆಪಿಗಾಗಿ ಸುಮಲತಾ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ಈ ಬಾರಿ ಟಿಕೆಟ್ ಸಿಗುತ್ತದೆ ಎಂದು ಭಾರೀ ವಿಶ್ವಾಸದಲ್ಲಿದ್ದರು. ಆದರೆ ಬಿಜೆಪಿ ಟಿಕೆಟ್‌ನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ. ಕಳೆದ ಐದು ವರ್ಷದಲ್ಲಿ ತಮ್ಮದೇ ಆದ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವ ಸುಮಲತಾ ಅವರು ಈ ಬಾರಿ ಪಕ್ಷೇತರರಾಗಿ ಸ್ಪರ್ಧಿಸಬೇಕೆಂದು ಆಗ್ರಹಿಸಿದರು.

ದಿ.ಅಂಬರೀಷ್ ಹಾಗೂ ಸುಮಲತಾ ಅವರ ಕೊಡುಗೆ ಜಿಲ್ಲೆಯಲ್ಲಿ ಸಾಕಷ್ಟಿದ್ದು, ಅವರು ಮತ್ತೆ ಸ್ಪರ್ಧಿಸುವಂತೆ ನಾವು ಮನದಟ್ಟು ಮಾಡುತ್ತೇವೆ. ಎರಡ್ಮೂರು ದಿನಗಳಲ್ಲಿ ಸುಮಲತಾ ಬೆಂಬಲಿಗರ ಸಭೆ ಕರೆದು ಅಂಬಿ ಬೆಂಬಲಿಗರು ಏನು ತೀರ್ಮಾನ ಕೈಗೊಳ್ಳುತ್ತಾರೋ ಆ ಪ್ರಕಾರವಾಗಿ ನಾವು ನಡೆಯುತ್ತೇವೆ ಎಂದರು.

## ಎಂ.ಶ್ರೀನಿವಾಸ್ ಶೀಘ್ರ ಕಾಂಗ್ರೆಸ್ ಸೇರ್ಪಡೆ

**ಮಂಡ್ಯ:** ನಿನ್ನೆ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ನಡೆದ ಮಂಡ್ಯ ಜಿಲ್ಲಾ ಮುಖಂಡರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್‌ನ ಮಾಜಿ ಶಾಸಕ ಎಂ.ಶ್ರೀನಿವಾಸ್ ಕಾಣಿಸಿಕೊಂಡಿರಲಿಲ್ಲ. ಅನಾರೋಗ್ಯ ನಿಮಿತ್ತ ಪಕ್ಷ ಸೇರ್ಪಡೆ ಕಾರ್ಯಕ್ರಮಕ್ಕೆ ಶ್ರೀನಿವಾಸ್ ಗೈರಾಗಿದ್ದಾರೆ ಎಂದು ಖುದ್ದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದು, ಶೀಘ್ರವೇ ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂದರು. ನಿನ್ನೆಯ ಕಾರ್ಯಕ್ರಮದಲ್ಲಿ ಜೆಡಿಎಸ್ ಮಾಜಿ ಎಂಎಲ್‌ಸಿಗಳಾದ ಮರಿತಿಬ್ಬೇಗೌಡ ಮತ್ತು ಎನ್.ಅಪ್ಪಾಜಿಗೌಡ ಸಹ ಕಾಂಗ್ರೆಸ್ ಸೇರಿದ್ದರು.

# ಜೆಎಸ್‌ಎಸ್ ವೈದ್ಯಕೀಯ ಕಾಲೇಜಲ್ಲಿ ಪದವೀಧರರ ದಿನಾಚರಣೆ

### ರೋಗಿಯ ಕಾಯಿಲೆ ಗುಣಪಡಿಸುವುದೇ ವೈದ್ಯರಿಗೆ ಲಭಿಸುವ ನೈಜ ಬಹುಮಾನ ; ಪದವಿ ಪ್ರದಾನ ಮಾಡಿ ಪದ್ಮಶ್ರೀ ಪುರಸ್ಕೃತ ಹಿರಿಯ ವೈದ್ಯ ಡಾ.ಶಶಾಂಕ್ ಆರ್.ಜೋಶಿ


ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ನಡೆದ ಪದವೀಧರರ ದಿನಾಚರಣೆಯಲ್ಲಿ ಹಲವರಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನದೊಂದಿಗೆ ಪದವಿ ಪ್ರದಾನ ಮಾಡಲಾಯಿತು. ಸುತ್ತೂರು ಶ್ರೀಗಳು, ಪದ್ಮಶ್ರೀ ಪುರಸ್ಕೃತ ಹಿರಿಯ ವೈದ್ಯ ಡಾ.ಶಶಾಂಕ್ ಆರ್.ಜೋಶಿ ಸೇರಿದಂತೆ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.23(ಎಂಕೆ)–ವೈದ್ಯಕೀಯ ಶಿಕ್ಷಣದಲ್ಲಿ ಪ್ರಥಮ ಅಥವಾ ಕಡೆ ಬಹುಮಾನ ಪಡೆಯುವುದು ಮುಖ್ಯವಲ್ಲ. ರೋಗಿಯ ಕಾಯಿಲೆ ಗುರುತಿಸಿ, ಸೂಕ್ತ ಚಿಕಿತ್ಸೆ ಮೂಲಕ ಗುಣಪಡಿಸುವುದೇ ವೈದ್ಯರಿಗೆ ಲಭಿಸುವ ನಿಜವಾದ ಬಹುಮಾನ ಎಂದು ಮುಂಬೈನ ಲೀಲಾವತಿ ಹಾಸ್ಪಿಟಲ್ ಅಂಡ್ ರಿಸರ್ಚ್ ಸೆಂಟರ್‌ನ ಹಿರಿಯ ಅಂತಃಸ್ರಾವಶಾಸ್ತ್ರಜ್ಞ (Endocrinologist) ಹಾಗೂ ಪದ್ಮಶ್ರೀ ಪುರಸ್ಕೃತ ವೈದ್ಯ ಡಾ.ಶಶಾಂಕ್ ಆರ್.ಜೋಶಿ ಹೇಳಿದರು.

ಮೈಸೂರಿನ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪದವೀಧರರ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ವಿಶ್ವದಲ್ಲಿಯೇ ಅತೀ ಹೆಚ್ಚು ವೈದ್ಯರನ್ನು ಭಾರತ ರೂಪಿಸುತ್ತಿದೆ. ಅದೇ ರೀತಿ ವಿಶ್ವದಾದ್ಯಂತ ಭಾರತೀಯ ವೈದ್ಯರಿಗೆ ಹೆಚ್ಚಿನ ಬೇಡಿಕೆ ಇದ್ದು, ಗ್ರಾಮೀಣ ಭಾಗದ ಯುವ ಜನತೆ ವೈದ್ಯಕೀಯ ವೃತ್ತಿ ಆಯ್ಕೆ ಮಾಡಿಕೊಳ್ಳುತ್ತಿರುವುದು ವಿಶೇಷವಾಗಿದೆ ಎಂದರು.

ವೈದ್ಯ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿಯಾಗಿದ್ದು, ಮಾನವೀಯತೆಯಿಂದ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ತಾಳ್ಮೆ ಅತ್ಯಂತ ಮುಖ್ಯವಾಗುತ್ತದೆ. ಯಾವುದೇ ಕಾರಣಕ್ಕೂ ವೃತ್ತಿ ನಿಯಮ ಮೀರಬಾರದು. ಸಮಯ ಪಾಲನೆಯಲ್ಲಿ ಅತ್ಯಂತ ಶಿಸ್ತು ಹೊಂದಿರಬೇಕು. ಆತಂಕಗೊಳ್ಳದೇ ಆತ್ಮವಿಶ್ವಾಸದಿಂದ ವೃತ್ತಿಯ ಸವಾಲುಗಳನ್ನು ಸ್ವೀಕರಿಸಬೇಕು. ತಮ್ಮ ಆರೋಗ್ಯವನ್ನೂ ಕಾಪಾಡಿಕೊಂಡು ರೋಗಿಗಳ ಅಗತ್ಯತೆಗೆ ಅನುಗುಣವಾಗಿ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ಸಲಹೆ ನೀಡಿದರು.

ವೈದ್ಯಕೀಯ ಕ್ಷೇತ್ರದಲ್ಲಿಯೂ ತಂತ್ರಜ್ಞಾನದ ಪ್ರಾಮುಖ್ಯತೆ ಪಡೆದುಕೊಂಡಿದೆ. ಅದರಲ್ಲೂ ರೋಗಿಯೊಂದಿಗೆ ಸಂವಹನ ನಡೆಸುವ ಸಂದರ್ಭದಲ್ಲಿ ಭಾಷಾಂತರ ತಂತ್ರಜ್ಞಾನ ಹೆಚ್ಚು ಬಳಸಿಕೊಳ್ಳಲಾಗುತ್ತಿದೆ. ಆ ಮೂಲಕ ರೋಗಿಯು ಹೇಳುವ ತನ್ನ ಕಾಯಿಲೆಯ ಗುಣಲಕ್ಷಣ ಅರ್ಥ ಮಾಡಿಕೊಂಡು ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯರ ತಾವು ಕಲಿತಿರುವುದನ್ನು ತಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಬೇಕು. ಈ ರೀತಿಯ ಪರಸ್ಪರ ವಿಚಾರ–ವಿನಿಮಯದಿಂದ ಜ್ಞಾನವೃದ್ಧಿಯಾಗುವ ಜೊತೆಗೆ ವೃತ್ತಿ ಕೌಶಲ್ಯ ವೃದ್ಧಿಸುತ್ತದೆ. ವೈದ್ಯರು ಸಂಶೋಧನೆಯಲ್ಲಿ ಹೆಚ್ಚಾಗಿ ತೊಡಗಿಕೊಳ್ಳಬೇಕು. ಹೆಚ್ಚಿನ ಅಧ್ಯಯನದ ಮೂಲಕ ಗುಣಮಟ್ಟದ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಕಾಡೆಮಿ ಕುಲಾಧಿಪತಿಗಳಾದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಅಧ್ಯಕ್ಷತೆ ವಹಿಸಿದ್ದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಕಾಡೆಮಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಸುರೀಂದರ್ ಸಿಂಗ್, ಕುಲಸಚಿವ ಡಾ.ಮಂಜುನಾಥ, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಉಪ ಪ್ರಾಂಶುಪಾಲರಾದ ಡಾ.ಎಂಎನ್. ಸುಮಾ, ಡಾ.ಪ್ರವೀಣ್ ಕುಲಕರ್ಣಿ, ಆಡಳಿತಾಧಿಕಾರಿ ಎಸ್.ಆರ್.ಸತೀಶ್ ಚಂದ್ರ ಮತ್ತಿತರರು ಹಾಜರಿದ್ದರು.

### 204 ಮಂದಿಗೆ ಎಂಬಿಬಿಎಸ್ ಪದವಿ

204 ಮಂದಿಗೆ ಎಂಬಿಬಿಎಸ್ ಪದವಿ ಪ್ರದಾನ ಮಾಡಲಾಯಿತು. ಕೋಲ್ಕತ್ತಾದ ಡಾ.ಸುಬ್ರದೀಪ್ ಧರ್ 6 ಚಿನ್ನದ ಪದಕ ಮತ್ತು 2 ನಗದು ಬಹುಮಾನ ಪಡೆದರೆ, ಮೈಸೂರಿನ ಡಾ.ರೋಹಿತ್ ಆರ್.ನಾಯರ್ 3 ಚಿನ್ನದ ಪದಕ ಮತ್ತು 4 ನಗದು ಬಹುಮಾನ ಪಡೆದರು. ಅದೇ ರೀತಿ ಡಾ.ಎಸ್.ಎಂ.ತೇಜಶ್ರೀ 2 ಚಿನ್ನದ ಪದಕ ಮತ್ತು 2 ನಗದು ಬಹುಮಾನ, ಕೊಲ್ಕತ್ತಾದ ಡಾ.ಸೃಷ್ಟಿ ಖೈತಾನ್ 1 ಚಿನ್ನದ ಪದಕ, ಕೇರಳದ ಡಾ.ಜ್ಯೋತ್ಸ್ನಾ ಸಿ.ರಾಮೇಶ್ವರ, ನಾಸಿಕ್‌ನ ಡಾ.ಸಮ್ಯಕ್ ಶಾ, ಮೈಸೂರಿನ ಡಾ.ಕೆ.ನಯನಾ ಹಾಗೂ ಪಟ್ನಾದ ಡಾ.ಶಾಂತ್ವಿ ಕುಮಾರಿ ತಲಾ 1 ನಗದು ಬಹುಮಾನ ಪಡೆದರು.

## ಇಂದು ರಂಗೋಲಿ ಸ್ಪರ್ಧೆ

**ಮೈಸೂರು:** ನಗರದ ಒಂಟಿಕೊಪ್ಪಲ್ ಗ್ರಾಮದೇವತೆ ಹಬ್ಬದ ಪ್ರಯುಕ್ತ ಶ್ರೀ ಮಾರಮ್ಮ ದೇವಸ್ಥಾನದ ಪಕ್ಕ (ಒಂಟಿಕೊಪ್ಪಲ್) ವಾಲ್ಮೀಕಿ ರಸ್ತೆಯಲ್ಲಿ ಮಾ.24ರಂದು ಬೆಳಗ್ಗೆ 8.30ಕ್ಕೆ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ರಂಗೋಲಿ ಸ್ಪರ್ಧಾ ಸಮಿತಿ ಪ್ರಕಟಣೆ ತಿಳಿಸಿದೆ.

## ಮಾಸ್ಕೋದಲ್ಲಿ ಉಗ್ರರ ದಾಳಿ 143ಕ್ಕೂ ಅಧಿಕ ಸಾವು

● ಸಂಗೀತ ಕಾರ್ಯಕ್ರಮದಲ್ಲಿ ಸಾವಿರಾರು ಜನ ನೆರೆದಿದ್ದ ಸಭಾಂಗಣದ ಮೇಲೆ ದಾಳಿ ● ಗುಂಡಿನ ಮಳೆ; ಸ್ಫೋಟಕದಿಂದ ಭಾರೀ ಬೆಂಕಿಗೆ ನಲುಗಿದ ಜನ ● ಅನಾಗರಿಕ ಭಯೋತ್ಪಾದಕ ಕೃತ್ಯ: ಪುಟಿನ್



**ಮಾಸ್ಕೋ:** ಮಾಸ್ಕೋದ ಕ್ರೋಕಸ್ ಸಿಟಿ ಹಾಲ್ ಕನ್ಸರ್ಟ್‌ಗೆ ಶಸ್ತ್ರಸಜ್ಜಿತ ಗುಂಪು ಶುಕ್ರವಾರ ಏಕಾಏಕಿ ದಾಳಿ ನಡೆಸಿ, ಗುಂಡಿನ ಮಳೆಗರೆದು, ಸ್ಫೋಟಕಗಳನ್ನು ಸ್ಫೋಟಿಸಿದ್ದು, ಘಟನೆಯಲ್ಲಿ ಸಾವಿನ ಸಂಖ್ಯೆ 143ಕ್ಕೆ ಏರಿದೆ ಎಂದು ಸ್ಥಳೀಯ ಮಾಧ್ಯಮಗಳನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಸೋವಿಯತ್ ಯುಗದ ರಾಕ್ ಗುಂಪಿನಿಂದ ಸಂಗೀತ ಕಾರ್ಯಕ್ರಮಕ್ಕಾಗಿ ಜನರು ನೆರೆದಿದ್ದರು. ದಾಳಿಕೋರರು ನಾಗರಿಕರನ್ನು ಪಾಯಿಂಟ್–ಬ್ಲಾಂಕ್ ರೇಂಜ್‌ನಲ್ಲಿ ಶೂಟ್ ಮಾಡುತ್ತಿರುವ ವಿಡಿಯೋ ವೈರಲ್ ಆಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಈ ವಿಡಿಯೊಗಳು ಹರಿದಾಡುತ್ತಿವೆ. ದಾಳಿಕೋರರು ಕನ್ಸರ್ಟ್ ಹಾಲ್‌ಗೆ ಬೆಂಕಿ ಹಚ್ಚುವ ಮೊದಲು ಪರದೆ ಮತ್ತು ಕುರ್ಚಿಗಳ ಮೇಲೆ ದ್ರವವನ್ನು ಸುರಿದಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿನ ಕೆಲವು ವಿಡಿಯೊಗಳು ಸ್ಥಳದ ಕಟ್ಟಡದಿಂದ ಹೊಗೆ ಮತ್ತು ಜ್ವಾಲೆಯ ಮೋಡಗಳು ಏರುತ್ತಿರುವುದನ್ನು ತೋರಿಸಿವೆ. ಏತನ್ಮಧ್ಯೆ, ಇಸ್ಲಾಮಿಕ್ ಸ್ಟೇಟ್ ಬೃಹತ್ ದಾಳಿಯ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದು, ಸಮರ್ಥನೆಯನ್ನು ಬೆಂಬಲಿಸಲು ಯಾವುದೇ ಪುರಾವೆಗಳನ್ನು ಒದಗಿಸಲಿಲ್ಲ.

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶನಿವಾರ ಮಾಸ್ಕೋ ಕನ್ಸರ್ಟ್ ಹಾಲ್ ಮೇಲಿನ ದಾಳಿಯನ್ನು 'ಅನಾಗರಿಕ ಭಯೋತ್ಪಾದಕ ಕೃತ್ಯ' ಎಂದು ಹೇಳಿದ್ದಾರೆ. ಮಾ.24 ರಂದು ದೇಶದಲ್ಲಿ ಶೋಕಾಚರಣೆ ನಡೆಸಲಾಗುವುದು ಎಂದು ಹೇಳಿದ್ದಾರೆ. ರಕ್ತಸಿಕ್ತ, ಬರ್ಬರ ಭಯೋತ್ಪಾದಕ ಕೃತ್ಯದಲ್ಲಿ ಸಾವಿಗೀಡಾದವರು ಡಜನ್‌ಗಟ್ಟಲೆ ಮುಗ್ಧ, ಶಾಂತಿಯುತ ಜನರು. ನಾನು ಮಾ.24 ಅನ್ನು ರಾಷ್ಟ್ರೀಯ ಶೋಕಾಚರಣೆಯ ದಿನವೆಂದು ಘೋಷಿಸುತ್ತೇನೆ ಎಂದು ಪುಟಿನ್ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಹೇಳಿದ್ದಾರೆ.

ದಾಳಿಯಲ್ಲಿ ಭಾಗಿಯಾಗಿರುವ ಎಲ್ಲರಿಗೂ ಕಠಿಣ ಶಿಕ್ಷೆ ನೀಡುವುದಾಗಿ ರಷ್ಯಾ ಅಧ್ಯಕ್ಷರು ಪ್ರತಿಜ್ಞೆ ಮಾಡಿದ್ದಾರೆ. ಜನರನ್ನು ಗುಂಡಿಕ್ಕಿ ಕೊಂದ ಭಯೋತ್ಪಾದಕ ದಾಳಿಯ ಎಲ್ಲಾ ನಾಲ್ಕು ಅಪರಾಧಿಗಳನ್ನು ಬಂಧಿಸಲಾಗಿದೆ. ಭಯೋತ್ಪಾದಕರು, ಕೊಲೆಗಾರರು, ಮಾನವರಲ್ಲದವರು ಪ್ರತೀಕಾರ ಮತ್ತು ಕಠಿಣ ಶಿಕ್ಷೆಗೊಳಪಡುತ್ತಾರೆ ಎಂದು ಪುಟಿನ್ ಹೇಳಿದ್ದಾರೆ. ದೇಶದಾದ್ಯಂತ ಹೆಚ್ಚುವರಿ ಭದ್ರತಾ ಕ್ರಮಗಳನ್ನು ವಿಧಿಸಲಾಗಿದೆ.

ಮಾಸ್ಕೋದಲ್ಲಿ ನಡೆದ ದಾಳಿ, ಉಕ್ರೇನ್‌ಗೆ ಸಂಬಂಧವಿದೆ. ಅವರ ಪ್ರಕಾರ, ಬಂಧಿತ ನಾಲ್ವರು ದಾಳಿಕೋರರು ಉಕ್ರೇನ್ ಕಡೆಗೆ ಹೋಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು. ದಾಳಿಕೋರರನ್ನು ರಷ್ಯಾದಿಂದ ಗಡಿ ದಾಟಿಸಲು ಉಕ್ರೇನಿಯನ್ ಕಡೆಯ ಕೆಲವರು ಸಿದ್ಧತೆ ನಡೆಸಿದ್ದಾರೆ ಎಂದು ಪ್ರಾಥಮಿಕ ಮಾಹಿತಿಯು ತೋರಿಸಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

## ಜಾವಗಲ್ ಶ್ರೀನಾಥ್, ಮಹೇಂದ್ರ ನೇಮಕ



ಜಾವಗಲ್ ಶ್ರೀನಾಥ್ ಮಹೇಂದ್ರ.ಎಂ

ಮೈಸೂರು, ಮಾ.23(ಬಿಎಲ್‌ಯು)– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಾಜಿ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್ ಹಾಗೂ ಪ್ಯಾರಾ ಅಥ್ಲೆಟಿಕ್ಸ್ ಆಟಗಾರ ಮಹೇಂದ್ರ ಎಂ ಅವರನ್ನು ಮೈಸೂರು ಜಿಲ್ಲೆಯ ಸ್ವೀಪ್ ಐಕಾನ್ ಆಗಿ ನೇಮಕ ಮಾಡಲಾಗಿದೆ. ಹೆಚ್ಚುವರಿ ಮುಖ್ಯ ಚುನಾವಣಾ ಅಧಿಕಾರಿ ಕೂರ್ಮಾರಾವ್ ಎಂ ಈ ವಿಚಾರವನ್ನು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಳ, ಮತದಾರರ ನೋಂದಣಿ ಮತ್ತು ಮತದಾನದ ಮಹತ್ವ ಕುರಿತು ಜಾಗೃತಿ ಮೂಡಿಸಲು ಈ ಇಬ್ಬರು ಆಟಗಾರರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

# ಶುಶ್ರೂಷಕರು ಕೌಶಲ್ಯ ರೂಢಿಸಿಕೊಂಡರೆ ಜಾಗತಿಕ ಮಟ್ಟದಲ್ಲಿ ಉದ್ಯೋಗಾವಕಾಶ

ಮೈಸೂರು, ಮಾ.23(ಎಸ್‌ಬಿಡಿ)– ಶಿಸ್ತು–ಸಂಯಮದೊಂದಿಗೆ ಶುಶ್ರೂಷಕರು ಕೌಶಲ್ಯ ವೃದ್ಧಿಸಿಕೊಂಡರೆ ಜಾಗತಿಕ ಮಟ್ಟದಲ್ಲಿ ಉದ್ಯೋಗಾವಕಾಶ ವಿಫುಲವಾಗಿದೆ ಎಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಉಪ ನಿರ್ದೇಶಕ ಡಾ.ಎಸ್.ಟಿ.ಶ್ರೀನಿವಾಸ್‌ಮೂರ್ತಿ ಹೇಳಿದರು.

ನಗರದ ಜೆಎಸ್‌ಎಸ್ ಆಸ್ಪತ್ರೆ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಶನಿವಾರ ನಡೆದ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ 36ನೇ ಬ್ಯಾಚ್ ವಿದ್ಯಾರ್ಥಿಗಳ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಜ್ಯೋತಿಯನ್ನು ಸ್ವೀಕರಿಸಿದ ವಿದ್ಯಾರ್ಥಿಗಳ ಭವಿಷ್ಯವು ಜ್ಯೋತಿಯಂತೆ ಸದಾ ಪ್ರಜ್ವಲಿಸಲಿ ಎಂದು ಆಶಿಸಿದರು.

ಸಮಾಜದಲ್ಲಿ ಶುಶ್ರೂಷಕ ಸೇವೆ ಮಹತ್ವದ್ದಾಗಿದೆ. ಹಾಗಾಗಿ ವಿದ್ಯಾರ್ಥಿ ದಿಸೆಯಲ್ಲೇ ಶಿಸ್ತು–ಸಂಯಮ ಹಾಗೂ ಸಮಯಪಾಲನೆ ರೂಢಿಸಿಕೊಳ್ಳಬೇಕು. ಜೊತೆಗೆ ವೃತ್ತಿಗೆ ಪೂರಕವಾದ ಕೌಶಲ್ಯಗಳನ್ನು ವೃದ್ಧಿಸಿಕೊಂಡರೆ ಜಾಗತಿಕ ಮಟ್ಟದಲ್ಲಿ ಉದ್ಯೋಗ ಗಳಿಸಬಹುದು. ಆ ಮೂಲಕ ನಿಮ್ಮ ಹಾಗೂ ನಿಮ್ಮ ಕುಟುಂಬದ ಆರ್ಥಿಕ ಶಕ್ತಿಯೂ ಹೆಚ್ಚುತ್ತದೆ ಎಂದು ಕಿವಿಮಾತು ಹೇಳಿದರು.


ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ 36ನೇ ಬ್ಯಾಚ್ ವಿದ್ಯಾರ್ಥಿಗಳ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಉಪ ನಿರ್ದೇಶಕ ಡಾ.ಎಸ್.ಟಿ.ಶ್ರೀನಿವಾಸ್‌ಮೂರ್ತಿ ಉದ್ಘಾಟಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ನಿರ್ದೇಶಕ ಆರ್.ಮಹೇಶ್ ಮಾತನಾಡಿ, ವಿದ್ಯಾರ್ಥಿಗಳು ಸಂಸ್ಥೆಯಲ್ಲಿನ ಎಲ್ಲಾ ಸೌಕರ್ಯಗಳನ್ನು ಸದುಪಯೋಗಪಡಿಸಿಕೊಂಡು ಉನ್ನತ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಪೋಷಕರು ಕಲಿಸಿರುವ ಸಂಸ್ಕಾರವನ್ನು ತಮ್ಮ ವೃತ್ತಿಪರ ಜೀವನದಲ್ಲೂ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು ಮಾತನಾಡಿ, ರೋಗಿಗಳ ಆರೈಕೆ ಮಾಡುವ ಶುಶ್ರೂಷಕರ ಸೇವೆ ಅತ್ಯಂತ ಶ್ಲಾಘನೀಯ ಎಂದರು. ಆಸ್ಪತ್ರೆಯ ಶುಶ್ರೂಷ ಸೇವೆಗಳ ಮುಖ್ಯಾಧಿಕಾರಿ ಜೆನೆಟ್ ಮಥಾಯಸ್, ನರ್ಸಿಂಗ್ ಒಂದು ಸವಾಲಿನ ವೃತ್ತಿಯಾದರೂ ಇದೊಂದು ಅನನ್ಯ ಸೇವೆ. ಹೊರದೇಶಗಳಲ್ಲಿ ಶುಶ್ರೂಷಕರಿಗೆ ಬಹಳ ಬೇಡಿಕೆ ಇದ್ದು, 2026ರ ವೇಳೆಗೆ ಜಾಗತಿಕ ವಲಯದಲ್ಲಿ ಇನ್ನಷ್ಟು ಬೇಡಿಕೆ ಹೆಚ್ಚುತ್ತದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲೆ ಡಿ.ಎನ್.ರೇಣುಕಾದೇವಿರವರು, ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ನರ್ಸಿಂಗ್ ಟ್ಯೂಟರ್‌ಗಳು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.




# ಕೊನೆ ಓವರ್‌ನಲ್ಲಿ ಕೆಕೆಆರ್‌ಗೆ ಒಲಿದ ವಿಜಯ



ಕೋಲ್ಕತ್ತಾ, ಮಾ.23– ಆಂಡ್ರೆ ರಸೆಲ್ ಅವರ ಆಲ್‌ರೌಂಡ್ ಆಟ ಹಾಗೂ ಫಿಲಿಪ್ ಸಾಲ್ಟ್ ಅವರ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕೋಲ್ಕತ್ತಾ ನೈಟ್‌ರೈಡರ್ಸ್ 4 ರನ್‌ಗಳ ರೋಚಕ ಗೆಲುವು ಸಾಧಿಸಿದೆ.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 208 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಫಿಲಿಪ್ ಸಾಲ್ಟ್ ಭರ್ಜರಿ ಆರಂಭ ಒದಗಿಸಿದರಾದರೂ, ತಂಡದ ಮೊತ್ತ 51 ರನ್ ಆಗುವಷ್ಟರಲ್ಲಿ ಸುನೀಲ್ ನರೇನ್ 2, ವೆಂಕಟೇಶ್ ಅಯ್ಯರ್ 7, ನಾಯಕ ಶ್ರೇಯಸ್ ಅಯ್ಯರ್ 0, ನಿತೀಶ್ ರಾಣಾ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಒಂದಾದ ಫಿಲಿಪ್ ಸಾಲ್ಟ್ ಹಾಗೂ ರಮಣ್‌ದೀಪ್ ಸಿಂಗ್ 54 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಈ ವೇಳೆ 17 ಎಸೆತಗಳಲ್ಲಿ 4 ಸಿಕ್ಸರ್, 1 ಬೌಂಡರಿ ಒಳಗೊಂಡ 35 ರನ್ ಗಳಿಸಿದ್ದ ರಮಣ್‌ದೀಪ್ ಸಿಂಗ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿದ ಫಿಲಿಪ್ ಸಾಲ್ಟ್ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 54 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಆಂಡ್ರೆ ರಸೆಲ್ ಹಾಗೂ ರಿಂಕು ಸಿಂಗ್ 81 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ರಿಂಕು ಸಿಂಗ್ 3 ಬೌಂಡರಿ ಒಳಗೊಂಡ 23 ರನ್ ಗಳಿಸಿದರೇ, ಪಂದ್ಯದಲ್ಲಿ ಮಿಂಚಿನ ಬ್ಯಾಟಿಂಗ್ ಮಾಡಿದ ರಸೆಲ್ 25 ಎಸೆತಗಳಲ್ಲಿ 7 ಸಿಕ್ಸರ್, 3 ಬೌಂಡರಿ ಒಳಗೊಂಡ 64 ರನ್ ಗಳಿಸಿ ಅಜೇಯರಾಗಿ ಉಳಿದರು. ಹೈದರಾಬಾದ್ ಪರ ಟಿ.ನಟರಾಜನ್ 3, ಮಯಾಂಕ್ ಮರ್ಕಂಡೆ 2, ಪ್ಯಾಟ್ ಕಮ್ಮಿನ್ಸ್ 1 ವಿಕೆಟ್ ಉರುಳಿಸಿದರು.

209 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 204 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮಯಾಂಕ್ ಅಗರ್ವಾಲ್ ಹಾಗೂ ಅಭಿಷೇಕ್ ಶರ್ಮಾ ಮೊದಲ ವಿಕೆಟ್‌ಗೆ 60 ರನ್ ಜೊತೆಯಾಟ ವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಇವರಿಬ್ಬರೂ ತಲಾ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ರಾಹುಲ್ ತ್ರಿಪಾಠಿ 20, ಏಡನ್ ಮಾಕ್ರಮ್ 18, ಅಬ್ದುಲ್ ಸಮದ್ 15, ಶಹಬ್ಬಾಜ್ ಅಹಮ್ಮದ್ 16 ರನ್ ಗಳಿಸಿ ಔಟಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಏಕಾಂಗಿ ಹೋರಾಟ ನಡೆಸಿದ ಹೆನ್ರಿಚ್ ಕ್ಲಾಸೆನ್ 29 ಎಸೆತಗಳಲ್ಲಿ 8 ಸಿಕ್ಸರ್ ಒಳಗೊಂಡ 63 ರನ್ ಗಳಿಸಿದರಾದರೂ ಇನ್ನಿಂಗ್ಸ್‌ನ ಅಂತಿಮ ಓವರ್‌ಗಳಲ್ಲಿ ಔಟಾಗುವ ಮೂಲಕ ಹೈದರಾಬಾದ್ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ಅಂತಿಮವಾಗಿ ಕೋಲ್ಕತ್ತಾ ನೈಟ್ ರೈಡರ್ಸ್ ಪರ ಹರ್ಷಿತ್ ರಾಣ 3, ಆಂಡ್ರೆರಸೆಲ್ 2, ಮರ್ಣ್ ಚಕ್ರವರ್ತಿ ಹಾಗೂ ಸುನೀಲ್ ನರೇನ್ ತಲಾ ಒಂದೊಂದು ವಿಕೆಟ್ ಪಡೆದರು. ಪಂದ್ಯದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ಆಂಡ್ರೆ ರಸೆಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

# ಸ್ಯಾಮ್ ಕರ್ರನ್ ಅಬ್ಬರ: ಪಂಜಾಬ್‌ಗೆ ಜಯ



ಚಂಡೀಗಢ, ಮಾ.23– ಸ್ಯಾಮ್ ಕರ್ರನ್ ಅವರ ಅರ್ಧಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಮುಲ್ಲನ್ಪುರ್‌ನಲ್ಲಿರುವ ಮಹಾರಾಜ ಯಾದವೀಂದ್ರ ಸಿಂಗ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 174 ರನ್ ಗಳಿಸಿತ್ತು. 175 ರನ್‌ಗಳ ಗುರಿ ಬೆನ್ನತ್ತಿದ್ದ ಪಂಜಾಬ್ ಕಿಂಗ್ಸ್ 19.2 ಓವರ್‌ಗಳಲ್ಲಿ 6 ವಿಕೆಟ್‌ಗೆ 177 ರನ್ ಗಳಿಸಿ ಗೆಲುವು ಸಾಧಿಸಿತು.

ಪಂಜಾಬ್ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಶಿಖರ್ ಧವನ್ 22, ಜಾನಿ ಬೈರ್‌ಸ್ಟೋ 9 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ಸ್ಯಾಮ್ ಕರ್ರನ್ ಹಾಗೂ ಪ್ರಭಾಸಿಮಾನ್ ಸಿಂಗ್ 42 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 26 ರನ್ ಗಳಿಸಿದ್ದ ಪ್ರಭಾಸಿಮಾನ್ ಸಿಂಗ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಜಿತೇಶ್ ಶರ್ಮಾ 9 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಭರ್ಜರಿ ಆಟವಾಡಿದ ಸ್ಯಾಮ್ ಕರ್ರನ್ 47 ಎಸೆತಗಳಲ್ಲಿ 1 ಸಿಕ್ಸರ್, 6 ಬೌಂಡರಿ ಒಳಗೊಂಡ 63 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಲಿವಿಂಗ್‌ಸ್ಟೋನ್ ಇನ್ನಿಂಗ್ಸ್ ಕೊನೆವರೆಗೂ ಕ್ರೀಸ್‌ನಲ್ಲಿದ್ದು 38 ರನ್ ಗಳಿಸುವ ಮೂಲಕ ತಂಡಕ್ಕೆ ಜಯ ತಂದು ಕೊಟ್ಟರು. ಡೆಲ್ಲಿ ಪರ ಖಲೀಲ್ ಅಹ್ಮದ್, ಕುಲ್ದೀಪ್ ಯಾದವ್ 2, ಇಶಾಂತ್ ಶರ್ಮಾ 1 ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ಪರ ಡೆಲ್ಲಿ ಪರ ಡೇವಿಡ್ ವಾರ್ನರ್ 29, ಮಿಚೆಲ್ ಮಾರ್ಷ್ 20, ಶಾಯ್ ಹೋಪ್ 33, ರಿಷಭ್ ಪಂತ್ 18, ರಿಕಿ ಭುಯಿ 3, ಟ್ರಿಸ್ಟಾನ್ ಸ್ಟಬ್ಸ್ 5, ಅಕ್ಷರ್ ಪಟೇಲ್ 21, ಸುಮಿತ್ ಕುಮಾರ್ 2, ಕುಲ್ದೀಪ್ 1 ರನ್ ಗಳಿಸಿದರೆ ಅಭಿಷೇಕ್ 10 ಎಸೆತಗಳಲ್ಲಿ 32 ರನ್ ಬಾರಿಸಿ ಅಜೇಯರಾಗಿ ಉಳಿದರು.

ಪಂಜಾಬ್ ಪರ ಅರ್ಷ್‌ದೀಪ್ ಸಿಂಗ್, ಹರ್ಷಲ್ ಪಟೇಲ್ ತಲಾ 2, ಕಗಿಸೋ ರಬಾಡ, ಹರ್‍ಪ್ರೀತ್ ಬ್ರಾರ್, ರಾಹುಲ್ ಚಹಾರ್ ತಲಾ ಒಂದೊಂದು ವಿಕೆಟ್ ಪಡೆದರು. ಸ್ಯಾಮ್ ಕರ್ರನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

**ಪಂತ್ ಕಂಬ್ಯಾಕ್, ಅಭಿಮಾನಿಗಳಿಂದ ವೆಲ್‌ಕಮ್:** ಕಾರು ಅಪಘಾತದಿಂದ ಗಂಭೀರವಾಗಿ ಗಾಯಗೊಂಡಿದ್ದ ಟೀಂ ಇಂಡಿಯಾ ಕ್ರಿಕೆಟಿಗ ರಿಷಭ್ ಪಂತ್ 14 ತಿಂಗಳ ಬಳಿಕ ಮತ್ತೆ ಕ್ರೀಸ್‌ಗಿಳಿದು ಬ್ಯಾಟಿಂಗ್ ಮಾಡಿದರು. ರಿಷಬ್ ಕ್ರೀಸ್‌ಗೆ ಬರುತ್ತಿದ್ದಂತೆ ಅಭಿಮಾನಿಗಳು ಎದ್ದು ನಿಂತು ಚಪ್ಪಾಳೆಯೊಂದಿಗೆ ಸ್ವಾಗತಿಸಿದರು.




[ಮಾ. 24]

**ರಾಜಸ್ಥಾನ V/S ಲಕ್ನೋ**
ಸ್ಥಳ: ಜೈಪುರ, ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ,
**ಸಮಯ: ಮಧ್ಯಾಹ್ನ 3.30**

**ಗುಜರಾತ್ V/S ಮುಂಬೈ**
ಸ್ಥಳ: ಅಹಮದಾಬಾದ್, ನರೇಂದ್ರ ಮೋದಿ ಕ್ರೀಡಾಂಗಣ
**ಸಮಯ: ರಾತ್ರಿ 7.30**

## ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರಿಗೆ ಸನ್ಮಾನ



**ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ತಂಡದ ವತಿಯಿಂದ ಶನಿವಾರ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಚಾಮರಾಜ ಕ್ಷೇತ್ರದ ದಿನೇಶ್‌ಗೌಡ, ಪ್ರಧಾನ ಕಾರ್ಯದರ್ಶಿ ದಾಸ್‌ಪ್ರಕಾಶ್, ಮೈಸೂರು ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆರ್.ಸಚಿನ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಅರ್ಜುನ್‌ಕುಮಾರ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಯೋಗೇಶ್, ನಿಖಿಲ್, ಬಿಜೆಪಿ ಮುಖಂಡರಾದ ಲೋಹಿತ್, ಪಂಕಜ್ ಪಾರೀಕ್, ಸುರೇಂದ್ರ ಬಾಬು, ಸಚಿನ್, ಸಂಜೀವಿನಿಕುಮಾರ್, ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.**

## ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸಿ.ಮಹದೇವಯ್ಯ ಬಿಎಸ್‌ಪಿ ಅಭ್ಯರ್ಥಿ


ಸಿ.ಮಹದೇವಯ್ಯ


ಮೈಸೂರು, ಮಾ.23(ಜಿಎ)–ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಹುಜನ ಸಮಾಜ ಪಕ್ಷದಿಂದ ನಿವೃತ್ತ ಕೆಎಎಸ್ ಅಧಿಕಾರಿ ಸಿ.ಮಹದೇವಯ್ಯ ಅವರನ್ನು ಕಣಕ್ಕಿಳಿಸಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಪುಟ್ಟಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹದೇವಯ್ಯ ಅವರು ಸರ್ಕಾರಿ ಸೇವೆಯಲ್ಲಿದ್ದ ವೇಳೆ ಉತ್ತಮ ಕೆಲಸ ಮಾಡಿದ್ದಾರೆ. ಜೊತೆಗೆ ಜನಾನುರಾಗಿಯೂ ಆಗಿರುವ ಕಾರಣ ಪಕ್ಷ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದೆ. ಮಾರ್ಚ್ 27ರಂದು ಬೆಳಗ್ಗೆ 11 ಗಂಟೆಗೆ ಚಾಮರಾಜನಗರದ ವರ್ತಕರ ಭವನದಲ್ಲಿ ಈ ಭಾಗದ ಕಾರ್ಯಕರ್ತರು, ಮುಖಂಡರ ಸಮಾವೇಶ ಆಯೋಜಿಸಿದೆ. ಇದರಲ್ಲಿ ಪಕ್ಷದ ರಾಜ್ಯ ಸಂಯೋಜಕರು ಸಹಾ ಪಾಲ್ಗೊಳ್ಳಲಿದ್ದಾರೆ ಎಂದರು.

ನಂತರ ಅಭ್ಯರ್ಥಿ ಸಿ.ಮಹದೇವಯ್ಯ ಮಾತನಾಡಿ, ಬಿಎಸ್‌ಪಿ ಪಕ್ಷವು ಸಂವಿಧಾನ ರಕ್ಷಣೆ ವಿಷಯದಲ್ಲಿ ಸಾಕಷ್ಟು ಹೋರಾಟ ಮಾಡಿದೆ. ಕೆಲವರು ಮನುವಾದಕ್ಕೆ ಒಪ್ಪಿ ಇತರೆ ಪಕ್ಷಕ್ಕೆ ಹೋದರೂ ತಮ್ಮ ಪಕ್ಷಕ್ಕೆ ಹಿನ್ನಡೆಯಾಗಿಲ್ಲ. ಚಾಮರಾಜನಗರ ಜನ ಈ ಬಾರಿ ಚುನಾವಣೆಯಲ್ಲಿ ಅಭಿವೃದ್ಧಿ ಕಾರ್ಯ ಮಾಡಲು ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಬಸವಣ್ಣ, ಬಿ.ಚಂದ್ರಶೇಖರ್, ಮಹದೇವಸ್ವಾಮಿ, ಪುಟ್ಟರಾಜು ಉಪಸ್ಥಿತರಿದ್ದರು.

## ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನಿಷ್ಕ್ರಿಯ

● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆರೋಪ ● ತಮಿಳ್ನಾಡಿಗೆ ನೀರು ಹರಿಸಿದ್ದರಿಂದ ನಮ್ಮ ಜನರಿಗೆ ಕುಡಿಯಲು ನೀರಿಲ್ಲ



ಬೆಂಗಳೂರು, ಮಾ.23(ಕೆಎಂಶಿ)– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನಿಷ್ಕ್ರಿಯವಾಗಿದೆ. ಬರಗಾಲ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ, 800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರೂ ಎಚ್ಚೆತ್ತುಕೊಳ್ಳದೆ ಇರುವುದು ದುರಂತ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

ಪಕ್ಷದ ಲೋಕಸಭಾ ಚುನಾವಣಾ ಮಾಧ್ಯಮ ಕೇಂದ್ರ ಉದ್ಘಾಟಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ನದಿಗಳಲ್ಲಿ ನೀರಿಲ್ಲ, ಕುಡಿಯುವ ನೀರಿನ ಹಾಹಾಕಾರ ಇದೆ ಎಂಬುದಾಗಿ ಮುಖ್ಯಮಂತ್ರಿ ಹೇಳುತ್ತಾರೆ, ಕಾವೇರಿ ನೀರನ್ನು ತಮಿಳುನಾಡಿಗೆ ಯಥೇಚ್ಛವಾಗಿ ಹರಿಸುವಾಗ ಈ ಆಲೋಚನೆ ಮಾಡಿದ್ದರೆ ಪರಿಸ್ಥಿತಿ ಇಷ್ಟು ಕೆಡುತ್ತಿರಲಿಲ್ಲ, ನೀರಿಗಾಗಿ ಹಾಹಾಕಾರ ಇರುತ್ತಿರಲಿಲ್ಲ ಎಂದರು.

ಕಾಂಗ್ರೆಸ್ ಆಡಳಿತದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ, ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಲೇ ಬಂದಿದೆ, ಲೋಕಸಭಾ ಚುನಾವಣೆಯಲ್ಲಿ ಇದಕ್ಕೆ ತಕ್ಕ ಉತ್ತರ ಕೊಡುವ ಕಾಲ ಬಂದಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 10 ವರ್ಷಗಳು ಕಳೆದ ಮೇಲೂ ಪ್ರಧಾನಮಂತ್ರಿ ನರೇಂದ್ರ ಮೋದಿ ಜನಪ್ರಿಯತೆ ಇನ್ನೂ ಉತ್ತುಂಗಕ್ಕೆ ಏರಿದೆ.

ದೇಶದ ಜನತೆ ಪ್ರಧಾನಿ ಮೋದಿ ನಾಯಕತ್ವ ಮೆಚ್ಚಿಕೊಂಡಿದ್ದಾರೆ, ಕೇಂದ್ರ ಸರ್ಕಾರದ ಯೋಜನೆಗಳು ಮನೆ ಮನೆಗೆ ತಲುಪಿವೆ, ಅಭಿವೃದ್ಧಿ ರಾಷ್ಟ್ರವನ್ನಾಗಿ ಪರಿವರ್ತಿಸುವ ಸಂಕಲ್ಪದೊಂದಿಗೆ ಜನಪರ ಯೋಜನೆಗಳನ್ನು ಜಾರಿಗೆ ತಂದಿದೆ. ಕರ್ನಾಟಕವು ದಕ್ಷಿಣ ಭಾರತದ ಬಿಜೆಪಿಯ ಹೆಬ್ಬಾಗಿಲು ಎಂಬುದನ್ನು ನಾವು ಮತ್ತೆ ಸಾಬೀತು ಮಾಡಬೇಕಿದೆ. ರಾಜ್ಯದಲ್ಲಿ ಬಿಜೆಪಿ ಆಡಳಿತದ ಸಂದರ್ಭದಲ್ಲಿ ನೀಡಿದ ಕೊಡುಗೆಗಳು, ಕಾರ್ಯಕ್ರಮಗಳು, ಜನಪರ ಯೋಜನೆಗಳನ್ನು ಜನತೆ ಮರೆತಿಲ್ಲ ಎಂದರು.

## ಲಕ್ಷ್ಮಿಪುರಂ ಪೊಲೀಸರಿಂದ ರೂಟ್ ಮಾರ್ಚ್



ಮೈಸೂರು,ಮಾ23(ಆರ್‌ಕೆ)–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಲಕ್ಷ್ಮಿಪುರಂ ಠಾಣೆ ಪೊಲೀಸರು ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ನಡೆಸಿ ಮತದಾರರಿಗೆ ಅಭಯ ನೀಡಿದರು. ಇನ್ಸ್‌ಪೆಕ್ಟರ್ ಎಂ.ಎಲ್.ಶೇಖರ್, ಸಬ್‌ಇನ್ಸ್‌ಪೆಕ್ಟರ್ ಭಾನುಕುಮಾರಿ ಅವರ ನೇತೃತ್ವದಲ್ಲಿ ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಕೋರ್ಟ್ ರಸ್ತೆ, ಬಲ್ಲಾಳ್ ಸರ್ಕಲ್, ಅಶೋಕಪುರಂ ಪಾರ್ಕ್ ರಸ್ತೆ, ಆರ್‌ಟಿಓ ಸರ್ಕಲ್‌ಗಳಲ್ಲಿ ರೂಟ್ ಮಾರ್ಚ್ ಮಾಡಿದ ಪೊಲೀಸರು, ನಿಮ್ಮೊಂದಿಗೆ ನಾವಿದ್ದೇವೆ, ನಿರ್ಭೀತಿಯಿಂದ ಮತಚಲಾಯಿಸಿ ಎಂಬ ಸಂದೇಶ ರವಾನಿಸಿದರು.

# ಪ್ರಕೃತಿ ಸಂರಕ್ಷಣೆ ಅರಿವು ಮೂಡಲು ಪಕ್ಷಿ ವೀಕ್ಷಣೆ ಒಂದು ಸಾಧನ

## ಸಲೀಂ ಅಲಿ ನೆನಪಿನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಪಕ್ಷಿ ವೀಕ್ಷಕ ಡಾ.ಎಸ್.ವಿ.ನರಸಿಂಹನ್ ಅಭಿಮತ

ಮೈಸೂರು,ಮಾ.23(ಪಿಎಂ)– ಪ್ರಕೃತಿ ಸಂರಕ್ಷಣೆ ಬಗ್ಗೆ ಅರಿವು ಮೂಡಲು ಪಕ್ಷಿ ವೀಕ್ಷಣೆ ಹವ್ಯಾಸ ಒಂದು ಸಾಧನ ಎಂದು ವಿರಾಜಪೇಟೆ ಮೂಲದ ವೈದ್ಯ, ಪಕ್ಷಿ ವೀಕ್ಷಕ ಡಾ.ಎಸ್.ವಿ.ನರಸಿಂಹನ್ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಎಸ್‌ವಿವೈಎಂ, ಕುತೂಹಲಿ, ಎನ್‌ಸಿಎಫ್ ಸಂಯುಕ್ತಾಶ್ರಯದಲ್ಲಿ 'ಸಲೀಂ ಅಲಿ ಅವರೊಂದಿಗೆ ಒಂದು ದಿನ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ ಉಪನ್ಯಾಸ, 'ಸಲೀಂ ಅಲಿ–ಪಕ್ಷಿ ಲೋಕದ ಬೆರಗು (ಕನ್ನಡ ಮತ್ತು ಇಂಗ್ಲಿಷ್) ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪಕ್ಷಿ ವೀಕ್ಷಣೆ ಮಾಡುವವರು ಮೊದಲಿಗೆ ಪ್ರಕೃತಿಯನ್ನೂ ವೀಕ್ಷಿಸಿ ಅದರೊಂದಿಗೆ ಒಂದಾಗುತ್ತಾರೆ. ಆ ಮೂಲಕ ಅವರಲ್ಲಿ ಪ್ರಕೃತಿಯಲ್ಲಿ ನಾವೂ ಒಂದು ಎಂಬ ಭಾವನೆ ಮೂಡುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪ್ರಕೃತಿಗೆ ವಿಶಿಷ್ಟ ಸ್ಥಾನ ನೀಡಲಾಗಿದೆ. ಪ್ರಕೃತಿಯಲ್ಲಿ ಮನುಷ್ಯನೂ ಒಂದು ಭಾಗ ಎಂಬುದನ್ನು ಭಾರತೀಯರು ಅರ್ಥ ಮಾಡಿಕೊಂಡಂತೆ ಬೇರೆ ಯಾರೂ ಅರ್ಥ ಮಾಡಿಕೊಂಡಿಲ್ಲ. ನಮ್ಮ ಭಾರತೀಯರು ಮೂಲತಃ ಪ್ರಕೃತಿ ಆರಾಧಕರು. ಶುಕ್ಲ ಯಜುರ್ವೇದದ ಪ್ರಾರಂಭದ ಮಂತ್ರದಲ್ಲಿ ಯುವಕನೊಬ್ಬ ಗಿಡದೊಂದಿಗೆ ಸಂಭಾಷಣೆ ನಡೆಸುವ ಪ್ರಸಂಗವಿದೆ. ಪ್ರಕೃತಿಯಲ್ಲಿರುವ ಎಲ್ಲಾ ವಸ್ತು, ಜೀವಿಗಳಲ್ಲಿ ಭಾರತೀಯರು ದೈವತ್ವ ಕಾಣುತ್ತಾರೆ ಎಂದು ಹೇಳಿದರು.



'ಸಲೀಂ ಅಲಿ' ನೆನಪಿನ ಕಾರ್ಯಕ್ರಮದಲ್ಲಿ ಪಕ್ಷಿ ವೀಕ್ಷಕ ಡಾ.ಎಸ್.ವಿ.ನರಸಿಂಹನ್ ಅವರನ್ನು ಸನ್ಮಾನಿಸಲಾಯಿತು.

ಪ್ರಕೃತಿಯ ವೈವಿಧ್ಯ, ಅದರ ಸಂರಕ್ಷಣೆ ಬಗ್ಗೆ ತಿಳಿದುಕೊಳ್ಳುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಧ್ಯೇಯವಾಗಬೇಕು. ಭೌತಶಾಸ್ತ್ರ, ರಾಸಾಯನಶಾಸ್ತ್ರ ಮೊದಲಾದ ವಿಷಯಗಳಲ್ಲಿ ವಿವಿಧ ಶಕ್ತಿಗಳ ಬಗ್ಗೆ ಓದುತ್ತೇವೆ. ಅಂತಹ ಶಕ್ತಿಗಳಿಗೆ ಭಾರತೀಯರು ದೇವರುಗಳ ಹೆಸರು ನೀಡಿದ್ದಾರೆ. ಈಶ್ವರ ಓಡಾಡುವುದು ನಂದಿ. ಆತನ ಪತ್ನಿ ಪಾರ್ವತಿ ವಾಹನ ಹುಲಿ. ಹಸು ಹುಲಿಗೆ ಆಹಾರವಾಗುತ್ತದೆ. ಗಣೇಶ ಸಂಚರಿಸುವ ಇಲಿಯು ಶಿವ ಕೊರಳಿನಲ್ಲಿರುವ ಹಾವಿನ ಆಹಾರ. ಇಲ್ಲಿ ವೈರುಧ್ಯವಿದ್ದು, ಇಷ್ಟೊಂದು ವೈರುಧ್ಯಗಳ ನಡುವೆಯೂ ಸಹಬಾಳ್ವೆ, ಸಾಮರಸ್ಯ ಮುಖ್ಯವೆಂಬುದು ಇದರ ಪರಿಕಲ್ಪನೆಯಾಗಿದೆ. ಈ ತತ್ವವನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದರು.

ಇದಕ್ಕೂ ಮುನ್ನ 'ಮೈಸೂರು ಪ್ರದೇಶದ ಪಕ್ಷಿಗಳು (ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳು ಒಳಗೊಂಡಂತೆ)' ಕುರಿತು ಮಾತನಾಡಿದ ಪಕ್ಷಿ ವೀಕ್ಷಕ ಎನ್.ಆರ್.ಹರ್ಷ, 1879ರಲ್ಲಿ ಸ್ಯಾಂಡರ್ಸನ್, 1940 ಮತ್ತು 1948ರಲ್ಲಿ ಫಿಥಿಯನ್ ಆಡಮ್ಸ್ ಮೈಸೂರು ಭಾಗದಲ್ಲಿ ಪಕ್ಷಿ ಸಮೀಕ್ಷೆ ನಡೆಸಿದ್ದರು. ಸಲೀಂ ಅಲಿ ಅವರು 1939ರ ನವೆಂಬರ್‌ನಿಂದ 1940ರ ಫೆಬ್ರವರಿವರೆಗೆ ಮೈಸೂರು ಭಾಗದಲ್ಲಿ ಪಕ್ಷಿ ಸಮೀಕ್ಷೆ ನಡೆಸಿದ್ದರು ಎಂದು ತಿಳಿಸಿದರು.

ಪ್ರಸ್ತುತ ಮೈಸೂರು ಪ್ರದೇಶದಲ್ಲಿ 419 ಜಾತಿಯ ಪಕ್ಷಿಗಳು ಇರುವುದು ಇತ್ತೀಚೆಗಿನ ಸಮೀಕ್ಷೆಯಿಂದ ತಿಳಿದುಬಂದಿದೆ. ಆ ಪ್ರಕಾರ ಮೈಸೂರು ಪ್ರದೇಶದಲ್ಲಿ ಸ್ಥಳೀಯವಾಗಿ 191 ಜಾತಿಯ ಪಕ್ಷಿಗಳಿವೆ. ಅದೇ ರೀತಿಯಲ್ಲಿ ಚಳಿಗಾಲದಲ್ಲಿ ವಲಸೆ ಬರುವ ಪಕ್ಷಿಗಳಲ್ಲಿ 129 ಜಾತಿಗಳು, ಸ್ಥಳೀಯವಾಗಿ ವಲಸೆ ಬರುವ 53 ಜಾತಿಗಳು ಇವೆ. ಇತರೆ ಜಾತಿಯ ಪಕ್ಷಿಗಳು ಸೇರಿದಂತೆ ಪ್ರಸ್ತುತ 419 ಜಾತಿಯ ಪಕ್ಷಿಗಳು ಮೈಸೂರು ಪ್ರದೇಶದಲ್ಲಿವೆ ಎಂದು ವಿವರಿಸಿದರು. ಭಾರತದಲ್ಲಿರುವ ವಿವಿಧ ಜಾತಿಯ ಪಕ್ಷಿಗಳ ಪೈಕಿ ಮೈಸೂರು ಪ್ರದೇಶದಲ್ಲಿ ಶೇ.30.7ರಷ್ಟು ಜಾತಿಯ ಪಕ್ಷಿಗಳಿವೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ಶೇ.76ರಷ್ಟು ಜಾತಿಯ ಪಕ್ಷಿಗಳಿದ್ದು, ಅಂತಹ ವೈವಿಧ್ಯತೆಯನ್ನು ನಮ್ಮ ರಾಜ್ಯ ಮತ್ತು ಮೈಸೂರು ಪ್ರದೇಶದಲ್ಲಿ ಕಾಣಬಹುದು ಎಂದರು.

'ಸಲೀಂಅಲಿ ಮತ್ತು ನಾನು' ಕುರಿತು ಬೆಂಗಳೂರು ಮೂಲದ ಪಕ್ಷಿ ವೀಕ್ಷಕ ಎಸ್.ಸುಬ್ರಹ್ಮಣ್ಯ, 'ಮನೆ ಬಾಗಿಲಿಗೆ ಪಕ್ಷಿ ಪ್ರಪಂಚ' ಕುರಿತು ಪಕ್ಷಿ ವೀಕ್ಷಕಿ ಅಭಿಷೇಕ ಕೃಷ್ಣಗೋಪಾಲ್ ಮಾತನಾಡಿದರು. ಇದೇ ವೇಳೆ 'ಸಲೀಂ ಅಲಿ–ಪಕ್ಷಿ ಲೋಕದ ಬೆರಗು' ನಾಟಕದ ಪುಸ್ತಕ ಬಿಡುಗಡೆ ಮಾಡಲಾಯಿತು. ಬಳಿಕ ಅರಿವು ರಂಗ ತಂಡದಿಂದ ಇದೇ ನಾಟಕದ ಪ್ರದರ್ಶನ ನಡೆಯಿತು. ಅರಿವು ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ಎಂ.ಸಿ.ಮನೋಹರ, ವಿಜ್ಞಾನ ನಾಟಕೋತ್ಸವ ಟ್ರಸ್ಟ್‌ನ ಟ್ರಸ್ಟಿ ಶಶಿಧರ ಡೋಂಗ್ರೆ, ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಕೊಳ್ಳೇಗಾಲ ಶರ್ಮ, ಎನ್‌ಸಿಎಫ್‌ನ ಸುಹೇಲ್ ಖಾದರ್, ಎಸ್‌ವಿವೈಎಂ ಶಿಕ್ಷಣ ವಿಭಾಗದ ಮುಖ್ಯಸ್ಥ ಪ್ರವೀಣ್ ಮತ್ತಿತರರು ಹಾಜರಿದ್ದರು.

## ಕೆಎಎಸ್ ಹುದ್ದೆ ಆಕಾಂಕ್ಷಿಗಳಿಗೆ ಇಂದು ಉಚಿತ ಕಾರ್ಯಾಗಾರ

ಮೈಸೂರು,ಮಾ.23–ಮೈಸೂರು ವಿಶ್ವವಿದ್ಯಾನಿಲಯ ವೃತ್ತಿ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರದ ವತಿಯಿಂದ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಮಾ.24ರಂದು ಬೆಳಗ್ಗೆ 10 ಗಂಟೆಗೆ 384 ಕೆಎಎಸ್ ಹುದ್ದೆಯ ಆಕಾಂಕ್ಷಿಗಳಿಗೆ ಉಚಿತ ಕಾರ್ಯಾಗಾರ ಉದ್ಘಾಟನಾ ಸಮಾರಂಭವನ್ನು ಯುವರಾಜ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಮಾರಂಭವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಲಿದ್ದು, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸುವರು.

ಮೈಸೂರು ನಗರಪಾಲಿಕೆ ಆಯುಕ್ತ ಡಾ.ಎನ್.ಎನ್.ಮಧು ಹಾಗೂ ಮೈಸೂರು ವಿವಿ ಕುಲಸಚಿವರಾದ ವಿ.ಆರ್. ಶೈಲಜಾ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಹಿಂದುಳಿದ ವರ್ಗಗಳ ಇಲಾಖೆ ಜಿಲ್ಲಾಧಿಕಾರಿ ರಾಘವೇಂದ್ರ ಕೆ.ಜಿ.ಎಸ್, ಪಿ.ಎಂ.ಇ ಬೋರ್ಡ್ ಮೈಸೂರು ವಿವಿ ನಿರ್ದೇಶಕ ಪ್ರೊ.ಎನ್.ನಾಗರಾಜ್ ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪ್ರೊ.ಡಿ.ಆನಂದ್ ಉಪಸ್ಥಿತರಿರುವರು.

# ನಮ್ಮ ಗ್ಯಾರಂಟಿ ಕದ್ದು ಮೋದಿ ಗ್ಯಾರಂಟಿ ಹೆಸರಿಡಲಾಗಿದೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ ● ಇದುವರೆಗೆ ಪ್ರಧಾನಿ ನರೇಂದ್ರ ಮೋದಿ ಹೇಳಿದ ಯಾವುದೂ ಜಾರಿಯಾಗಿಲ್ಲ



**ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ, ಜಿಲ್ಲಾ, ತಾಲೂಕು ಸಮಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಉಪಾಧ್ಯಕ್ಷರಾದ ಪುಷ್ಪ ಅಮರನಾಥ್ ಭಾಗವಹಿಸಿದ್ದರು.**

ಬೆಂಗಳೂರು, ಮಾ.23(ಕೆಎಂಶಿ)– ರಾಜ್ಯ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳನ್ನು ಕದ್ದು ಅದಕ್ಕೆ ಮೋದಿ ಗ್ಯಾರಂಟಿ ಎಂದು ಹೆಸರಿಸಿ ರಾಜಕೀಯ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆರೋಪಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿಂದು ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ, ಜಿಲ್ಲಾ, ತಾಲೂಕು ಸಮಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರ ಸಮಾವೇಶದಲ್ಲಿ ಮಾತನಾಡಿದ ಅವರು, ಅಚ್ಛೆ ದಿನ್ ಬಂತಾ, ರೈತರ ಆದಾಯ ದುಪ್ಪಟ್ಟು ಮಾಡಿದ್ರಾ, ಡೀಸೆಲ್–ಪೆಟ್ರೋಲ್–ಗ್ಯಾಸ್ ಬೆಲೆ ಕಡಿಮೆ ಮಾಡ್ತೀವಿ ಅಂದ್ರು ಮಾಡಿದ್ರಾ, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸ್ತೀವಿ ಅಂದ್ರು ಸೃಷ್ಟಿಸಿದ್ರಾ, ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಾಕ್ತೀವಿ ಅಂದ್ರು ಹಾಕಿದ್ರಾ ಎಂದು ಪ್ರಧಾನಿ ನರೇಂದ್ರ ಮೋದಿ ಅವರ ಆಶ್ವಾಸನೆಗಳ ಸರಣಿ ಸುಳ್ಳುಗಳನ್ನು ಪಟ್ಟಿ ಮಾಡಿ ಪ್ರಶ್ನಿಸಿದರು.

ಭಾರತದ ಪ್ರಧಾನಿಗಳಲ್ಲಿ ಅತ್ಯಂತ ಹೆಚ್ಚು ಸುಳ್ಳು ಹೇಳಿದವರು ಪ್ರಧಾನಿ ಮೋದಿ, ಈಗ ನಮ್ಮ ಗ್ಯಾರಂಟಿಗಳನ್ನು ಕದ್ದು ಅದಕ್ಕೆ ಮೋದಿ ಗ್ಯಾರಂಟಿ ಎಂದು ಹೆಸರಿಟ್ಟಿದ್ದಾರೆ ಎಂದು ವ್ಯಂಗ್ಯವಾಡಿದರು.

ನಮ್ಮ ಗ್ಯಾರಂಟಿ ಯೋಜನೆಗಳು ಎಲ್ಲಾ ಧರ್ಮ, ಎಲ್ಲಾ ಜಾತಿ, ಎಲ್ಲಾ ವರ್ಗದವರಿಗೆ ಸೇರಿವೆ. ಸರ್ವರನ್ನೂ ಸಮಾನವಾಗಿ ಕಾಣುವ ಕಾರ್ಯಕ್ರಮಗಳನ್ನು ನಮ್ಮ ಕಾಂಗ್ರೆಸ್ ಸರ್ಕಾರ ರೂಪಿಸುತ್ತಿದೆ. ಜಾರಿ ಮಾಡುತ್ತಿದೆ. ಇವೆಲ್ಲವನ್ನೂ ನೀವುಗಳು ನಾಡಿನ ಜನರಿಗೆ ಸರಿಯಾಗಿ ಅರ್ಥ ಮಾಡಿಸಿ ಬಿಜೆಪಿಯ ಸುಳ್ಳುಗಳಿಗೆ ತಕ್ಕ ಸತ್ಯದ ದಾಖಲೆಗಳನ್ನು ಮಂಡಿಸಿ ಎಂದು ಸಿದ್ದರಾಮಯ್ಯ ಕರೆ ನೀಡಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಹಸಿವು ಮುಕ್ತ ರಾಜ್ಯ ಮಾಡಲು ಅನ್ನಭಾಗ್ಯ ಯೋಜನೆ ಮೂಲಕ 10 ಕೆ.ಜಿ. ಅಕ್ಕಿ ನೀಡುವ ಘೋಷಣೆ ಮಾಡಿದೆವು. ನಾವು ಅಕ್ಕಿ ಖರೀದಿ ಮಾಡಲು ಕೇಂದ್ರಕ್ಕೆ ಮನವಿ ಮಾಡಿದರೆ, ಕೇಂದ್ರ ಸರ್ಕಾರ ನಿರಾಕರಿಸಿತು. ನಮ್ಮ ಸರ್ಕಾರವೇ 5 ಕೆ.ಜಿ. ಅಕ್ಕಿ ಹಾಗೂ ಉಳಿದ 5 ಕೆ.ಜಿ. ಅಕ್ಕಿಯ ಹಣವನ್ನು ನೀಡುತ್ತಿದೆ ಎಂದರು.

## ನಾವು ಗಂಡಸರನ್ನು ನಂಬಲ್ಲ....! ಹಾಗಾಗಿಯೇ ಹೆಂಗಸರಿಗೆ ಎರಡು ಸಾವಿರ ಕೊಡ್ತಿದ್ದೇವೆ...!!

### ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಚ್ಚರಿ ಹೇಳಿಕೆ

ಮೈಸೂರು, ಮಾ.23(ಬಿಎಲ್‌ಯು)– ನಾವು ಗಂಡಸರನ್ನು ಯಾವ ಕಾರಣಕ್ಕೂ ನಂಬಲ್ಲ. ಹೀಗಾಗಿ ಗೃಹಲಕ್ಷ್ಮಿ ಯೋಜನೆಯಲ್ಲಿ ಹೆಣ್ಣು ಮಕ್ಕಳಿಗೆ ಎರಡು ಸಾವಿರ ರೂ. ನೀಡುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಇಂದು ನಡೆದ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಗಂಡಸರು ವೈನ್‌ಶಾಪ್‌ಗೆ ಹೋಗಿ ಹಣ ಹಾಳು ಮಾಡಿಕೊಳ್ಳುತ್ತಾರೆ. ಆದ ಕಾರಣ ಗೃಹಲಕ್ಷ್ಮಿ ಯೋಜನೆಯಲ್ಲಿ ಹೆಣ್ಣು ಮಕ್ಕಳ ಖಾತೆಗೆ ಎರಡು ಸಾವಿರ ರೂಪಾಯಿ ಹಾಕುತ್ತಿದ್ದೇವೆ ಎಂದರು.

ಹೆಣ್ಣು ಮಕ್ಕಳು ಅಂದರೆ ಕುಟುಂಬದ ಕಣ್ಣು ಇದ್ದಂತೆ. ಹೆಣ್ಣು ಮಕ್ಕಳ ಖಾತೆಗೆ ಹಣ ಹಾಕಿದರೆ ಅದು ಕುಟುಂಬದ ನಿರ್ವಹಣೆಗೆ ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಹೆಣ್ಣು ಮಕ್ಕಳ ಖಾತೆಗೆ ಹಣ ಹಾಕುತ್ತಿದ್ದೇವೆ. ಇದರಿಂದ ನಾವು ಕೊಟ್ಟ ಹಣ ಪಡೆದು ನೆಮ್ಮದಿಯಿಂದ ಇದ್ದಾರೆ ಎಂದರು.

ಬಿಜೆಪಿ ಆಡಳಿತದಲ್ಲಿ ಪೆಟ್ರೋಲ್ ಬೆಲೆ 70 ರಿಂದ 110 ಕ್ಕೇರಿತು. ಅಡುಗೆ ಅನಿಲದ ಬೆಲೆ 410 ರಿಂದ 1100 ರೂಪಾಯಿಗೆ ಏರಿಕೆಯಾಯಿತು. ಇದರಿಂದ ಬೆಲೆ ಏರಿಕೆ ಸಮಯದಲ್ಲಿ ಮಹಿಳೆಯರಿಗೆ ನೆರವಾಗಲೆಂದು ಗೃಹಲಕ್ಷ್ಮಿ ಯೋಜನೆ ಘೋಷಣೆ ಮಾಡಿದ್ದೇವೆ. ಈ ಯೋಜನೆಯಲ್ಲಿ ಕರ್ನಾಟಕದ 1.33 ಕೋಟಿ ಮನೆಯೊಡತಿಯರಿಗೆ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಅವರ ಖಾತೆಗೆ ಜಮಾ ಆಗುತ್ತಿದೆ ಎಂದು ಡಿ.ಕೆ.ಶಿವಕುಮಾರ್ ವಿವರಿಸಿದರು.

ಬಿಜೆಪಿಯವರಾಗಲೀ ಅಥವಾ ನರೇಂದ್ರ ಮೋದಿಯವರಾಗಲೀ ಗ್ಯಾರಂಟಿ ಎಂಬ ಪದ ಬಳಕೆ ಮಾಡಿರಲಿಲ್ಲ. ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ ಗ್ಯಾರಂಟಿ ಯೋಜನೆಯ ಯಶಸ್ವಿ ನೋಡಿ ನಮ್ಮ ಗ್ಯಾರಂಟಿಯನ್ನು ಬಿಜೆಪಿ ಕಾಪಿ ಮಾಡಿಕೊಂಡಿದೆ. ಈಗ ಎಲ್ಲಿ ನೋಡಿದರೂ ಗ್ಯಾರಂಟಿ ಪದ ಬಳಕೆ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಆರೋಪಿಸಿದರು.

# ನಾಪೋಕ್ಲು ಬಳಿ ಕಾಡಾನೆ ದಾಳಿ: ಕಾಫಿ ಬೆಳೆಗಾರ ಸಾವು

ಮೂರನೇ ಪುಟದಿಂದ

ಈ ವೇಳೆ ತೋಟದಲ್ಲಿ ಕಾಡಾನೆಯನ್ನು ಕಂಡು ಭಯ ಭೀತರಾಗಿ ಮನೆಗೆ ಓಡಿ ಬಂದು ತಮ್ಮ ಮಗನಿಗೆ ಮಾಹಿತಿ ನೀಡಿದ್ದಾರೆ. ಮಗ ತೋಟಕ್ಕೆ ತೆರಳಿ ಹುಡುಕಾಡಿದಾಗ ರಾಜ ದೇವಯ್ಯ ಅವರ ಮೃತದೇಹ ಪತ್ತೆಯಾಗಿದೆ. ಬಳಿಕ ಘಟನೆಯ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದಾರೆ.

ಒಟ್ಟು ಮೂರು ಕಾಡಾನೆಗಳು ತೋಟದಲ್ಲಿ ಬೀಡು ಬಿಟ್ಟಿದ್ದವು ಎಂದು ಗ್ರಾಮಸ್ಥರು ಹೇಳಿದ್ದಾರೆ. ರಾಜ ದೇವಯ್ಯ ಅವರು ಕಾಫಿ ಬೆಳೆಗಾರರಾಗಿದ್ದು, ಕಕ್ಕಬೆಯಲ್ಲಿ ಸ್ವಂತ ಆಟೋ ಬಾಡಿಗೆಗೆ ಓಡಿಸುತ್ತಾ ಜೀವನ ಸಾಗಿಸುತ್ತಿದ್ದರು. ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ರಾಜದೇವಯ್ಯ ತೋಟಕ್ಕೆ ತೆರಳಿದ್ದ ವೇಳೆ ತೋಟದಲ್ಲಿ ಬೀಡುಬಿಟ್ಟಿದ ಕಾಡಾನೆ ಏಕಾಏಕಿ ದಾಳಿ ನಡೆಸಿ ತುಳಿದು ಸಾಯಿಸಿವೆ. ಈ ವೇಳೆ ಜೊತೆ ಇದ್ದ ನಾಯಿ ಬೆದರಿ, ಮನೆಗೆ ಓಡಿ ಬಂದಿದೆ ಎಂದು ಹೇಳಲಾಗಿದೆ.

**ಗ್ರಾಮಸ್ಥರ ಆಕ್ರೋಶ:** ಈ ಭಾಗದಲ್ಲಿ ಕಾಡಾನೆ ಹಾವಳಿಯಿಂದ ಗ್ರಾಮಸ್ಥರು ಸದಾ ಭಯಪಡುವ ಪರಿಸ್ಥಿತಿ ಎದುರಾಗಿದೆ. ಅಲ್ಲದೆ ಈ ಹಿಂದೆ ರಾಜ ದೇವಯ್ಯ ಅವರ ಸಹೋದರನ ಮೇಲೂ ಕಾಡಾನೆ ದಾಳಿ ನಡೆಸಿದ್ದು ಪರಿಣಾಮ ಕಾಲು ಮುರಿದು ಪ್ರಾಣಾಪಾಯದಿಂದ ಪಾರಾಗಿ ಇತ್ತೀಚೆಗಷ್ಟೇ ಚೇತರಿಸಿಕೊಂಡಿದ್ದಾರೆ. ಈ ಭಾಗದಲ್ಲಿ ಹಲವರ ಮೇಲೆ ಕಾಡಾನೆಗಳ ದಾಳಿ ನಡೆದಿದೆ. ಅಲ್ಲದೆ ಗ್ರಾಮದ ಬೆಳೆಗಾರರ ತೋಟಗಳಿಗೆ ನಿರಂತರ ಕಾಡಾನೆಗಳು ಲಗ್ಗೆ ಇಡುತ್ತಿದ್ದು, ಇದರಿಂದ ಬೆಳೆಗಾರರು ಸಂಕಷ್ಟ ಎದುರಿಸುವಂತಾಗಿದೆ. ಈ ಬಗ್ಗೆ ಹಲವು ಬಾರಿ ಮನವಿ ಮಾಡಿದರು. ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕಂಡುಕೊಳ್ಳದ ಕಾರಣ ಇಂದು ಕುಟುಂಬಕ್ಕೆ ಆಸರೆಯಾಗಿದ್ದ ರಾಜ ದೇವಯ್ಯ ಅವರನ್ನು ಕಳೆದುಕೊಳ್ಳುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೃತರ ಕುಟುಂಬಸ್ಥರಿಗೆ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು. ಅವರ ಮಕ್ಕಳಿಗೆ ಸರ್ಕಾರಿ ಉದ್ಯೋಗವನ್ನು ನೀಡಬೇಕು. ಇನ್ನಾದರೂ ಎಚ್ಚೆತ್ತುಕೊಂಡು ಗ್ರಾಮದಲ್ಲಿರುವ ಕಾಡಾನೆಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಆಗ್ರಹಿಸಿದರು.

ಇಲಾಖೆಯಿಂದ ದೊರೆಯುವ ಸೌಲಭ್ಯ ಹಾಗೂ ಪರಿಹಾರ ನೀಡುವುದಾಗಿ ಭರವಸೆ ನೀಡಿದರು. ಅಲ್ಲದೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ರೀತಿಯಲ್ಲಿ ಸ್ಪಂದಿಸುವ ಭರವಸೆಯನ್ನು ನೀಡಿದ ಬಳಿಕ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಬಳಿಕ ಮೃತ ರಾಜ ದೇವಯ್ಯ ಅವರ ಕುಟುಂಬಕ್ಕೆ ಅರಣ್ಯ ಇಲಾಖೆ ವತಿಯಿಂದ ಪ್ರಥಮ ಹಂತದ 5 ಲಕ್ಷ ರೂ.ಗಳ ಪರಿಹಾರದ ಚೆಕ್ ಅನ್ನು ಡಿಎಫ್‌ಓ ಭಾಸ್ಕರ್ ಹಸ್ತಾಂತರಿಸಿದರು.

**ಯದುವೀರ್ ಸಾಂತ್ವನ:** ಮೃತ ರಾಜಾ ದೇವಯ್ಯ ಅವರ ಮನೆಗೆ ತೆರಳಿದ ಕೊಡಗು-ಮೈಸೂರು ಲೋಕಸಭಾ ಕ್ಷೇತ್ರ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಸಂದರ್ಭ ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಎಂ.ಎಲ್.ಸಿ. ಸುಜಾ ಕುಶಾಲಪ್ಪ ಮತ್ತಿತ್ತರರು ಹಾಜರಿದ್ದರು.

ಈ ಸಂದರ್ಭ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್, ಮಡಿಕೇರಿ ವಲಯ ಅರಣ್ಯಾಧಿಕಾರಿ ರವೀಂದ್ರ, ವಿರಾಜಪೇಟೆ ಆರ್‌ಎಫ್‌ಓ ಕಳ್ಳಿರ ದೇವಯ್ಯ, ಭಾಗಮಂಡಲ ವಲಯ ಅರಣ್ಯ ಅಧಿಕಾರಿಗಳು, ಸಿಬ್ಬಂದಿಗಳು, ಕಕ್ಕಬ್ಬೆ ಗ್ರಾಮ ಪಂಚಾಯಿತಿ ಪದಾಧಿಕಾರಿಗಳು, ಗ್ರಾಮದ ಪ್ರಮುಖರು, ನಾಪೋಕ್ಲು ಪೊಲೀಸ್ ಸಿಬ್ಬಂದಿ, ಗ್ರಾಮಸ್ಥರು ಹಾಜರಿದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೃತರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.

# ರಾಜ್ಯದಲ್ಲಿ ಬಿಜೆಪಿ ಒಡೆದ ಮನೆ: ಶಾಸಕ ಪೊನ್ನಣ್ಣ

## ಅಭಿವೃದ್ಧಿ ಕುರಿತು ಶ್ವೇತಪತ್ರ ಬಿಡುಗಡೆ ಮಾಡಿದ ಶಾಸಕರು

ಮಡಿಕೇರಿ,ಮಾ.23- ರಾಜ್ಯ ಬಿಜೆಪಿಯ ಲಗಾಮು ಕೇವಲ ಎರಡು ಮೂವರ ಕೈಯಲ್ಲಿರುವುದು ಜಗಜ್ಜಾಹೀರಾಗಿದೆ. ಆ ಪಕ್ಷದ ಲೋಕಸಭಾ ಚುನಾವಣೆಗೆ ಆಯ್ಕೆ ಮಾಡಿದ ಅಭ್ಯರ್ಥಿಗಳ ಬಗ್ಗೆ ಜನ ನಿರಾಶರಾಗಿದ್ದು, ಪ್ರಸ್ತುತ 'ಬಿಜೆಪಿ ಒಡೆದ ಮನೆ' ಆಗಿದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹೇಳಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳ 'ಶ್ವೇತಪತ್ರ'ವನ್ನು ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಮಡಿಕೇರಿಯಲ್ಲಿ ಬಿಡುಗಡೆ ಮಾಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕಳೆದ 10 ತಿಂಗಳ ಅವಧಿಯಲ್ಲಿ ತನ್ನ ಕ್ಷೇತ್ರದ 58 ಗ್ರಾಮ ಪಂಚಾಯ್ತಿ, 1 ಪುರಸಭೆಗೆ ಭೇಟಿ ನೀಡಿ ಅಲ್ಲಿನ ಜನರೊಂದಿಗೆ ಬೆರೆತು, ಅಭಿವೃದ್ಧಿ ಪರ ಚಿಂತನೆಯೊಂದಿಗೆ ಕಾರ್ಯನಿರ್ವಹಿಸಿದ್ದೇನೆ ಎಂದರು.

ಚುನಾವಣಾ ಘೋಷಣೆಯ ಬಳಿಕ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳಬಾರದೆನ್ನುವ ಚಿಂತನೆ ಅಡಿ ಚುನಾವಣಾ ಘೋಷಣೆಗೂ ಮುನ್ನ ಅನುದಾನ ಬಿಡುಗಡೆಯಾಗಿ, ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ಕಾಮಗಾರಿಗಳಿಗೆ ತಾನು ಭೂಮಿ ಪೂಜೆ ನಡೆಸಿ ಚಾಲನೆ ನೀಡಿದ್ದೇನೆಂದು ಸ್ಪಷ್ಟಪಡಿಸಿದರು.

**ರಾಜಕೀಯ ಜೀವನ ತೊರೆಯುತ್ತೇನೆ:** ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ತಾವು ಚಾಲನೆ ನೀಡಿದ ಕಾಮಗಾರಿ, ಅನುದಾನ ಹಿಂದಿನ ಬಿಜೆಪಿ ಸರ್ಕಾರದ್ದೆಂದು ಬಿಜೆಪಿ ಮಂದಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ, ತಾವು ಚಾಲನೆ ನೀಡಿದ ಕಾಮಗಾರಿ, ಅದಕ್ಕೆ ಕಾಂಗ್ರೆಸ್ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಶ್ವೇತಪತ್ರದ ಮೂಲಕ ನೀಡುತ್ತಿರುವುದಾಗಿ ಸ್ಪಷ್ಟಪಡಿಸಿದರು. ಗೋಣಿಕೊಪ್ಪಲು ಬಸ್ ನಿಲ್ದಾಣ ನಿರ್ಮಾಣದ ಬಗ್ಗೆಯೂ ಬಿಜೆಪಿ ಮಂದಿ ಇದೇ ರೀತಿಯ ಆರೋಪ ಮಾಡಿದ್ದಾರೆ. ಬಿಜೆಪಿ ಮಂದಿ ಈ ಬಸ್ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಅವರ ಸರ್ಕಾರದ ಅವಧಿಯಲ್ಲಿ ಮಾಡಿರುವ ಬಗ್ಗೆ ದಾಖಲೆಯ ಒಂದು ತುಂಡು ಕಾಗದವನ್ನು ನೀಡಿದರೂ ತಾನು ರಾಜಕೀಯ ಜೀವನದಿಂದ ನಿವೃತ್ತನಾಗುವುದಾಗಿ ಎ.ಎಸ್. ಪೊನ್ನಣ್ಣ ಇದೇ ಸಂದರ್ಭ ಸವಾಲೊಡ್ಡಿದರು.

**ಅಭಿವೃದ್ಧಿಯಲ್ಲಿ ರಾಜಕೀಯ ಮಾಡದಿರಿ:** ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಲ್ಲಿ ಎಂದಿಗೂ ರಾಜಕೀಯ ಮಾಡದಿರಿ ಎಂದು ತಿಳಿಸಿದ ಪೊನ್ನಣ್ಣ, ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಕ್ಷೇತ್ರ ವ್ಯಾಪ್ತಿಗೆ ಬಿಡುಗಡೆ ಮಾಡಿದ 290 ಕೋಟಿ ರೂ.ಗಳ ಕಾಮಗಾರಿಗಳಿಗೆ ತಾನು ಚುನಾವಣೆ ಮುಂಚಿತವಾಗಿ ಚಾಲನೆ ನೀಡಿರುವುದಾಗಿ ಸ್ಪಷ್ಟಪಡಿಸಿದರು.

**ನ್ಯಾಯಕ್ಕಾಗಿ ಪ್ರಯತ್ನಿಸುತ್ತೇನೆ:** ಕೊಡಗು ಜಿಲ್ಲೆಯಲ್ಲಿ ಸಾಂಪ್ರದಾಯಿಕವಾಗಿ ಹಲವಾರು ಮನೆಗಳಲ್ಲಿ ಮತ್ತು ದೇಗುಲಗಳ ಧಾರ್ಮಿಕ ಕಾರ್ಯಗಳಲ್ಲಿ ವನ್ಯಜೀವಿಗಳ ಉತ್ಪನ್ನಗಳನ್ನು ಬಳಸಲಾಗುತ್ತಿದೆ. ಇವುಗಳನ್ನು ತಮಗೆ ಒಪ್ಪಿಸಬೇಕೆನ್ನುವ ಅರಣ್ಯ ಇಲಾಖೆಯ ಆದೇಶವನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು, ತಾತ್ಕಾಲಿಕ ತಡೆಯಾಜ್ಞೆ ದೊರಕಿದೆ. ಕೆಲವೊಮ್ಮೆ ನಾವು ಸರಕಾರದ ಭಾಗವಾಗಿದ್ದರು, ಸಮಸ್ಯೆ ಬಗೆಹರಿಸಿ ಸರಕಾರದ ನಿಟ್ಟಿನಲ್ಲಿ ಸಾಧ್ಯವಾಗುವುದಿಲ್ಲ. ಹೀಗಾಗಿ ವನ್ಯಜೀವಿ ಉತ್ಪನ್ನಕ್ಕೆ ಸಂಬಂಧಪಟ್ಟಂತೆ ಜಿಲ್ಲೆಯ ಜನತೆಯ ಭಾವನೆಗಳಿಗೆ ಪೂರಕವಾಗಿ ನ್ಯಾಯ ದೊರಕಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅಭಿವೃದ್ಧಿ ಕಾರ್ಯಗಳ 'ಶ್ವೇತಪತ್ರ'ವನ್ನು ಶಾಸಕ ಎ.ಎಸ್.ಪೊನ್ನಣ್ಣ ಬಿಡುಗಡೆ ಮಾಡಿದರು.

# ಮೂರ್ನಾಡಲ್ಲಿ ಸಿಎನ್‌ಸಿ ವಿಚಾರ ಮಂಡನೆ




ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ನೇತೃತ್ವದಲ್ಲಿ ಕೊಡವ ಲ್ಯಾಂಡ್ ಹಕ್ಕೊತ್ತಾಯ ಮಂಡಿಸಲಾಯಿತು.

**ಮಡಿಕೇರಿ:** ಅಂತಾರಾಷ್ಟ್ರೀಯ ಜನಾಂಗೀಯ ತಾರತಮ್ಯ ನಿರ್ಮೂಲನಾ ದಿನಾಚರಣೆ ಅಂಗವಾಗಿ ಕೊಡವ ನ್ಯಾಷನಲ್ ಸಂಘಟನೆ ಕೊಡವ ಲ್ಯಾಂಡ್‌ಗಾಗಿ ಹಕ್ಕೊತ್ತಾಯ ಮಂಡಿಸಿತು.

ಮೂರ್ನಾಡು ಬಲ್‌ಂಬೇರಿ ರಸ್ತೆಯ ಕಾಫಿ ಕ್ಯಾಸ್ಟಲ್ ಕೂರ್ಗ್‌ನಲ್ಲಿ ವಿಚಾರ ಮಂಡಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಲೋಕಸಭಾ ಚುನಾವಣೆಯಲ್ಲಿ ಕೊಡವ ವಿರೋಧಿಗಳಿಗೆ ಮತ ಹಾಕದಂತೆ ಕರೆ ನೀಡಿದರು. ಕೊಡವ ಲ್ಯಾಂಡ್ ಸೇರಿದಂತೆ 9 ಸಾಂವಿಧಾನಿಕ ಬೇಡಿಕೆಗಳು ಮತ್ತು ಕೊಡವ ಜನಾಂಗದ ಗೌರವಾನ್ವಿತ ಗುರಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಅಭ್ಯರ್ಥಿಯನ್ನು ಬೆಂಬಲಿಸಬೇಕು. ಕೊಡವ ಬುಡಕಟ್ಟು ಜನಾಂಗದ ವಿರುದ್ಧ ಎಲ್ಲಾ ತಾರತಮ್ಯವನ್ನು ತೊಡೆದುಹಾಕಬೇಕು. ಕೊಡವ ನೀತಿ, ಸ್ವಾಭಿಮಾನ ಮತ್ತು ಹಕ್ಕುಗಳನ್ನು ನುಂಗಲು ಹವಣಿಸುವ ಹಾಗೂ ಕೊಡವ ಜನಾಂಗೀಯ ಗುರುತು ಮತ್ತು ಅಸ್ತಿತ್ವವನ್ನು ಅಮಾನ್ಯಗೊಳಿಸುವ ಮೂಲಕ ಕೊಡವ ಅಸ್ತಿತ್ವ ಮರೆಮಾಚಿ ಆಶ್ರಯ ಪಡೆಯಲು ನಡೆಸುವ ಪ್ರಚೋದನೆಯನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.


ಕಾವೇರಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರ ನಮ್ಮ ಹಕ್ಕುಗಳನ್ನು ಮೊಟಕುಗೊಳಿಸಿದೆ. ಕೊಡವರನ್ನು ವರ್ಣಭೇದ ನೀತಿಯ ನಾಗರಿಕರಂತೆ ನಡೆಸಿಕೊಂಡಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾಗವಹಿಸುವ ಪ್ರಜಾಪ್ರಭುತ್ವದಲ್ಲಿ ನಮ್ಮನ್ನು ಮೊಟಕುಗೊಳಿಸಿದೆ. ದಟ್ಟ ಜನಸಂಖ್ಯೆಯ ಕೊಡವ ಕುಗ್ರಾಮಗಳು ಮತ್ತು ಹಳ್ಳಿಗಳಲ್ಲಿ ಇತರ ಸಮುದಾಯಗಳಿಗೆ ಸೀಟುಗಳನ್ನು ಮೀಸಲಿಡಲಾಗಿದೆ. ಆರ್ಥಿಕ ಪ್ಯಾಕೇಜ್, ರಾಜಕೀಯ ಪ್ಯಾಕೇಜ್‌ಗಳು, ಶಿಕ್ಷಣ ಮತ್ತು ಉದ್ಯೋಗ ಯೋಜನೆಗಳು ಇತ್ಯಾದಿ ಎಲ್ಲಾ ಸಬಲೀಕರಣ ಕಾರ್ಯಕ್ರಮಗಳಿಂದ ನಾವು ವಂಚಿತರಾಗಿದ್ದೇವೆ ಎಂದರು.

ಭಾರತೀಯ ಸಂವಿಧಾನ ಆದಿಮ ಸಂಜಾತ ಮೂಲನಿವಾಸಿ ಜನಾಂಗೀಯ ಅಲ್ಪಸಂಖ್ಯಾತ ಗುಂಪುಗಳನ್ನು ರಕ್ಷಿಸಲು, ಉತ್ತೇಜಿಸಲು ಹಾಗೂ ಜೀವಂತಗೊಳಿಸಲು ತತ್ವ ಮತ್ತು ನೀತಿಯನ್ನು ಅನುಸರಿಸಿದೆ. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ಅಪ್ಪಯ್ಯ, ನಂದಿನೆರವಂಡ ಅಯ್ಯಣ್ಣ, ಬೇಪಡಿಯಂಡ ಬಿದ್ದಪ್ಪ, ಬೇಪಡಿಯಂಡ ದಿನು, ಪಾರ್ವಂಗಡ ನವೀನ್, ಮಣವಟಿರ ಚಿಣ್ಣಪ್ಪ, ಚೋಳಪಂಡ ನಾಣಯ್ಯ, ಮಣವಟಿರ ತುಷಾರ್, ಪುಟ್ಟಿಚಂಡ ದೇವಯ್ಯ, ಮುದ್ದಂಡ ಗಪ್ಪಣ್ಣ, ಮೇದೂರ ಕಂಠಿ, ನಂದೇಟಿರ ಸುಬ್ಬಯ್ಯ, ಪೆಮ್ಮಡಿಯಂಡ ವೇಣು, ಪುದಿಯೊಕ್ಕಡ ಕಾಶಿ, ಬಡುವಂಡ ವಿಜಯ್, ಪುದಿಯೋಕ್ಕಡ ಪೃಥ್ವಿ ಇದ್ದರು.

# ಲಾರಿ-ಆಂಬುಲೆನ್ಸ್ ಡಿಕ್ಕಿ; ಓರ್ವನಿಗೆ ಗಾಯ

ವಿರಾಜಪೇಟೆ, ಮಾ.23- ಲಾರಿ ಮತ್ತು ಆಂಬುಲೆನ್ಸ್ ನಡುವೆ ಡಿಕ್ಕಿ ಸಂಭವಿಸಿ ಓರ್ವ ಗಾಯಗೊಂಡಿರುವ ಘಟನೆ ವಿರಾಜಪೇಟೆ ಗೋಣಿಕೊಪ್ಪ ಮುಖ್ಯ ರಸ್ತೆಯ ಕೊಳತ್ತೋಡು ಬಳಿ ಜರುಗಿದೆ. ಅಪಘಾತದಿಂದ ಗಾಯಗೊಂಡಿರುವ ಆಂಬುಲೆನ್ಸ್ ಚಾಲಕನನ್ನು ಸುಳ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಂದು ಬೆಳಗ್ಗೆ ಮರದಿಂದ ಬಿದ್ದ ಓರ್ವ ಗಾಯಾಳುವನ್ನು ವಿರಾಜಪೇಟೆ ಸರಕಾರಿ ಆಸ್ಪತ್ರೆಯ ಆಂಬುಲೆನ್ಸ್‌ನಲ್ಲಿ ಮೈಸೂರಿಗೆ ಕರೆದೊಯ್ಯಲಾಗುತ್ತಿತ್ತು. ಈ ಸಂದರ್ಭ ಕೊಳತ್ತೋಡು ಹಾತೂರು ಬಳಿ ಪೊನ್ನು ಚಲಾಯಿಸುತ್ತಿದ್ದ ಲಾರಿಗೆ ಯಾದವ್ ಅವರು ಚಲಾಯಿಸುತ್ತಿದ್ದ ಆಂಬುಲೆನ್ಸ್ ಡಿಕ್ಕಿ ಹೊಡೆದಿದೆ. ಸಂಭವಿಸಬಹುದಾಗಿದ್ದ ಭಾರಿ ಅನಾಹುತವನ್ನು ತಪ್ಪಿಸಲು ಲಾರಿ ಚಾಲಕ ಲಾರಿಯನ್ನು ತಕ್ಷಣ ಪಕ್ಕದಲ್ಲಿದ್ದ ಮರಕ್ಕೆ ಡಿಕ್ಕಿಪಡಿಸಿ ಸಮಯ ಪ್ರಜ್ಞೆ ಮೆರೆದಿದ್ದಾರೆ.




ಆಂಬುಲೆನ್ಸ್ ಚಾಲಕ ಹೊರತುಪಡಿಸಿ ಉಳಿದವರೆಲ್ಲರು ಅಪಾಯದಿಂದ ಪಾರಾಗಿದ್ದು, ಚಾಲಕನನ್ನು ಸುಳ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ವಿರಾಜ ಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಂಡಾಯವಾಗಿ ಸ್ಪರ್ಧಿಸುವ ಬಗ್ಗೆ 2 ದಿನದಲ್ಲಿ ನಿರ್ಧಾರ

## ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಹೇಳಿಕೆ



ಚಾಮರಾಜನಗರದಲ್ಲಿ ನಡೆದ ಬಿಜೆಪಿ ಮಾದಿಗ ಮುಖಂಡರ ಸಭೆಯಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿದರು.

ಚಾಮರಾಜನಗರ, ಮಾ.23- ಸಮುದಾಯದ ಮುಖಂಡರ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ, ಸಮುದಾಯದ ಹಿತದೃಷ್ಟಿಯಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವ ಬಗ್ಗೆ ಎರಡು ದಿನದಲ್ಲಿ ತಮ್ಮ ನಿರ್ಧಾರ ಘೋಷಿಸುವುದಾಗಿ ಮಾಜಿ ಸಚಿವರೂ ಆದ ಬಿಜೆಪಿ ಮುಖಂಡ ಸಚಿವ ಕೋಟೆ ಎಂ.ಶಿವಣ್ಣ ಹೇಳಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಮಾದಿಗ ಸಮುದಾಯದ ಬಿಜೆಪಿ ಮುಖಂಡರ ಸಭೆಯಲ್ಲಿ ಸಲಹೆ, ಸೂಚನೆಗಳನ್ನು ಸ್ವೀಕರಿಸಿ ಮಾತನಾಡಿದ ಅವರು, ಬಿಜೆಪಿ ಸಮುದಾಯಕ್ಕೆ ಪದೇಪದೆ ಅನ್ಯಾಯ ಮಾಡುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈ ಭಾಗದಲ್ಲಿ ಎಡಗೈ ಸಮುದಾಯಕ್ಕೆ ಟಿಕೆಟ್ ಕೊಡಲಿಲ್ಲ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕೋಟೆ ಶಿವಣ್ಣ ಅವರಿಗೆ ಸಿಗುವ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ ಸಮುದಾಯಕ್ಕೆ ಟಿಕೆಟ್ ವಂಚಿತವಾಗಿದೆ. ಆದ್ದರಿಂದ ಬಂಡಾಯವಾಗಿ ಸ್ಪರ್ಧೆ ಮಾಡುವಂತೆ ಸಮುದಾಯದ ಮುಖಂಡರು ತಮಗೆ ಒತ್ತಡ ಹೇರಿದ್ದಾರೆ. ಸಮುದಾಯದ ಎಲ್ಲಾ ಮುಖಂಡರ ಅಭಿಪ್ರಾಯ ಪಡೆದು ಎರಡು ದಿನದೊಳಗೆ ನನ್ನ ನಿರ್ಧಾರ ತಿಳಿಸುತ್ತೇನೆ ಎಂದರು.

**ಮತ ಕೊಡದ ಸಮುದಾಯಕ್ಕೆ ಮಣೆ ಹಾಕಿದ್ದೆ:** ಮಾದಿಗ ಸಮುದಾಯ ಪ್ರತಿ ಸಾರಿ ಬಿಜೆಪಿಗೆ ಮತ ಹಾಕುತ್ತಾ ಬಂದರು ಕೂಡ ಸಮುದಾಯವನ್ನು ಕಡೆಗಣಿಸುತ್ತಿರುವುದು ಸಮುದಾಯಕ್ಕೆ ಬಹಳ ನೋವು ಉಂಟು ಮಾಡಿದೆ. ಯಾವ ಸಮುದಾಯಕ್ಕೆ ಮಾನ್ಯತೆ ಕೊಡಬೇಕಿತ್ತೋ ಅಂತಹ ಸಮುದಾಯಕ್ಕೆ ಮಾನ್ಯತೆ ಕೊಡುತ್ತಿಲ್ಲ. ಮತ ಕೊಡದ ಸಮುದಾಯಕ್ಕೆ ಮಣೆ ಹಾಕಲಾಗುತ್ತಿದೆ ಎಂದು ದೂರಿದರು.

ಬಿಜೆಪಿ ಮುಖಂಡ ಬಸವನಪುರ ರಾಜಶೇಖರ ಮಾತನಾಡಿ, ಮಾದಿಗ ಸಮುದಾಯ ಪ್ರತಿ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚಿನ ಮತ ಹಾಕುವ ಮೂಲಕ ಬೆಂಬಲಿಸಿಕೊಂಡು ಬಂದಿದ್ದೇವೆ. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಮಾದಿಗ ಸಮುದಾಯ 1.45 ಲಕ್ಷ ಮತಗಳಿದ್ದರೂ ಕೂಡ ಬಿಜೆಪಿ ಸಮುದಾಯದ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರಿಗೆ ಟಿಕೆಟ್ ನೀಡದೆ ಕಡೆಗಣಿಸಿದೆ. ಈ ಚುನಾವಣೆಯಲ್ಲಿ ಅವರಿಗೆ ಒಂದು ಉತ್ತಮ ಸ್ಥಾನಮಾನ ನೀಡಿ ಗೌರವಯುತವಾಗಿ ನಡೆಸಿಕೊಳ್ಳಬೇಕು, ಇಲ್ಲದಿದ್ದರೆ ಅವರನ್ನು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಸಮುದಾಯ ಮುಖಂಡರು ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ಸಭೆಯಲ್ಲಿ ವಕೀಲ ಸಿದ್ದೇಶ್, ಮೂಗೂರು ಸಿದ್ದರಾಜು, ನಾಗರಾಜು, ಶಿವಕುಮಾರ್, ಮಹದೇವಸ್ವಾಮಿ, ಡ್ಯಾನ್ಸ್ ಬಸವರಾಜು, ಪುಟ್ಟಲಿಂಗಯ್ಯ, ಲಿಂಗರಾಜು, ಬಿಳಿಯಪ್ಪ, ಮರಪ್ಪ, ಕಾಮಗೆರೆ ಮಹದೇವ, ಗ್ರಾಪಂ ಅಧ್ಯಕ್ಷ ಬೂದಿತಿಟ್ಟು ನಾರಾಯಣ್, ಸದಸ್ಯ ಚಿಕ್ಕಸ್ವಾಮಿ, ಸುಂದರ್, ಸಿದ್ದಯ್ಯ, ಗುರುಲಿಂಗಯ್ಯ, ಶಿವಣ್ಣ ಇತರರು ಭಾಗವಹಿಸಿದ್ದರು.

# ಯಳಂದೂರಿನಲ್ಲಿ ಮೇಣದಬತ್ತಿ ಮೆರವಣಿಗೆ ಮೂಲಕ ಮತದಾನ ಜಾಗೃತಿ



ಮತದಾನ ಜಾಗೃತಿ ಸಂಬಂಧ ಮೇಣದ ಬತ್ತಿ ಮೆರವಣಿಗೆ ಹಾಗೂ ಜಾಥಾ ನಡೆಸಲಾಯಿತು.

ಚಾಮರಾಜನಗರ, ಮಾ.23- ಯಳಂದೂರು ತಾಲೂಕು ಪಂಚಾಯಿತಿ ಮತ್ತು ತಾಲೂಕು ಸ್ವೀಪ್ ಸಮಿತಿ ವತಿಯಿಂದ ಯಳಂದೂರು ಪಟ್ಟಣದಲ್ಲಿ ಶುಕ್ರವಾರ (ಮಾರ್ಚ್ 22) ರಾತ್ರಿ 'ಚುನಾವಣಾ ಪರ್ವ- ದೇಶದ ಗರ್ವ' ಘೋಷವಾಕ್ಯದೊಂದಿಗೆ ಮತದಾನ ಜಾಗೃತಿ ಸಂಬಂಧ ಮೇಣದಬತ್ತಿ ಮೆರವಣಿಗೆ ಹಾಗೂ ಜಾಥಾ ನಡೆಸಲಾಯಿತು.

ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಆರ್.ಉಮೇಶ್ ಮೇಣದಬತ್ತಿ ಮೆರವಣಿಗೆ ಹಾಗೂ ಜಾಥಾಗೆ ಚಾಲನೆ ನೀಡಿದರು.

ನಗರದ ತಾಲೂಕು ಪಂಚಾಯಿತಿ ಕಚೇರಿಯಿಂದ ಹೊರಟ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಾಗಿತು. ಮೇಣದಬತ್ತಿ ಹಿಡಿದು ಮತದಾನದ ಅರಿವು ಮೂಡಿಸಲಾಯಿತು. ಬಸ್ ನಿಲ್ದಾಣದಲ್ಲಿ ಮತದಾನದ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಇದೇ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಯೋಜನಾಧಿಕಾರಿ ಗುರು ಮಹದೇವ, ತಾಲೂಕು ಪಂಚಾಯಿತಿ ಕಚೇರಿ ವ್ಯವಸ್ಥಾಪಕ ವೆಂಕಟಾಚಲ, ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಕಲೇಶ್ವರ್, ವಿವಿಧ ಇಲಾಖೆಗಳ ಅಧಿಕಾರಿಗಳು ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಚಾಮರಾಜನಗರದಲ್ಲಿ ರಾಜ್ಯಮಟ್ಟದ ನೆಟ್‌ಬಾಲ್ ಪಂದ್ಯಾವಳಿ ಆಯೋಜನೆ



ಚಾಮರಾಜನಗರ, ಮಾ.23- ಚಾಮರಾಜನಗರದಲ್ಲಿ ರಾಜ್ಯಮಟ್ಟದ ನೆಟ್‌ಬಾಲ್ ಪಂದ್ಯಾವಳಿಯನ್ನು ಮೇ ತಿಂಗಳಿನಲ್ಲಿ ಆಯೋಜಿಸಲಾಗುವುದು ಎಂದು ನೆಟ್‌ಬಾಲ್ ಅಸೋಸಿಯೇಷನ್‌ನ ಗೌರವಾಧ್ಯಕ್ಷೆ ನರ್ಗೀಸ್‌ಬಾನು ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೇ ತಿಂಗಳಿನಲ್ಲಿ ರಾಜ್ಯಮಟ್ಟದ ಪಂದ್ಯಾವಳಿ ನಡೆಸಲು ಚಾಮರಾಜನಗರ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್‌ಗೆ ಅವಕಾಶ ದೊರೆತಿದೆ. ಅದಕ್ಕೆ ತಕ್ಕಂತೆ ಎಲ್ಲಾ ರೀತಿಯಲ್ಲೂ ರೂಪುರೇಷೆಗಳನ್ನು ಸಿದ್ದಪಡಿಸುವ ಸಲುವಾಗಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದರು.

ಚಾಮರಾಜನಗರದಲ್ಲಿ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಅಸ್ತಿತ್ವಕ್ಕೆ ಬಂದ ನಂತರ ಇದೇ ಮೊದಲ ಬಾರಿಗೆ ರಾಜ್ಯಮಟ್ಟದ ನೆಟ್‌ಬಾಲ್ ಪಂದ್ಯಾವಳಿಯನ್ನು ನಡೆಸುವ ಅವಕಾಶ ಸಿಕ್ಕಿರುವುದು ಸಂತಸದ ವಿಷಯ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ನಮ್ಮ ಸಂಘ ಅಸ್ತಿತ್ವಕ್ಕೆ ಬಂದ ನಂತರ ರಾಜ್ಯ ಮಟ್ಟದ ಪಂದ್ಯಾವಳಿಯನ್ನು ನಮ್ಮ ಜಿಲ್ಲೆಯಲ್ಲಿ ಆಯೋಜಿಸಿರುವುದು ಹೆಮ್ಮೆಯ ವಿಚಾರ ಜೊತೆಗೆ ನಮ್ಮ ಸಂಘ ಬೆಳವಣಿಗೆಗೂ ಕೂಡಾ ಉತ್ತಮ ಅವಕಾಶ ಎಂದರು.

ಅಸೋಸಿಯೇಷನ್‌ನ ಅಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್ ಮಾತನಾಡಿ, ರಾಜ್ಯಾದ್ಯಂತ ನಮ್ಮ ಜಿಲ್ಲೆಗೆ ಬರುವಂತಹ ಕ್ರೀಡಾಪಟುಗಳಿಗೆ ಯಾವುದೇ ಕೊರತೆಗಳು ಆಗದಂತೆ ಊಟ, ವಸತಿ, ಅಂಕಣದ ವ್ಯವಸ್ಥೆ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡುವಂತೆ ಸಲಹೆ ನೀಡಿದರು. ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಮಹದೇವಪ್ರಸಾದ್.ಬಿ, ಮಾತನಾಡಿ, ರಾಜ್ಯ ಮಟ್ಟದ ನೆಟ್‌ಬಾಲ್ ಅಸೋಸಿಯೇಷನ್‌ನಿಂದ ಇತ್ತೀಚೆಗೆ ನಡೆದ ಸಭೆಯಲ್ಲಿ ಅಂಡರ್ 19 ಹಾಗೂ ಫಾಸ್ಟ್ 5 ನೆಟ್‌ಬಾಲ್ ಪಂದ್ಯಾವಳಿ ನಡೆಸುವ ಜವಾಬ್ದಾರಿಯನ್ನು ನಮ್ಮ ಜಿಲ್ಲೆಗೆ ನೀಡಿದೆ. ಈ ಸುವರ್ಣಾವಕಾಶವನ್ನು ಬಳಸಿಕೊಂಡು ಜವಾಬ್ದಾರಿಯುತವಾಗಿ ಉತ್ತಮ ರೀತಿಯಲ್ಲಿ ಪಂದ್ಯಾವಳಿಯನ್ನು ನಡೆಸುವ ಮೂಲಕ ಜಿಲ್ಲೆಗೆ ಕೀರ್ತಿ ತರುವುದು ಮುಖ್ಯ ಉದ್ದೇಶವಾಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದ ಪಂದ್ಯಾವಳಿಗೆ ಅವಕಾಶ ದೊರಕುವ ಸಾಧ್ಯತೆ ಇದೆ ಎಂದರು. ಈ ಸಂದರ್ಭದಲ್ಲಿ ಖಜಾಂಚಿ ಎಂ.ಸಿ.ಮಹದೇವಸ್ವಾಮಿ, ಸದಸ್ಯರಾದ ಶ್ರೀಧರ್, ಸಂತೋಷ್, ನಾಗೇಂದ್ರ ಸಿ., ರೂಪಾ.ಎಸ್., ಸುರೇಶ್, ಲೋಕೇಶ್, ಮಧುಕುಮಾರ್, ಸೇರಿದಂತೆ ಮತ್ತಿತರರಿದ್ದರು.

# ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಡಾ.ಅಂಬೇಡ್ಕರ್ ಓದು ಕಾರ್ಯಕ್ರಮ

ಕೊಳ್ಳೇಗಾಲ, ಮಾ.23- ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಾಮರಾಜನಗರ ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮವನ್ನು ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶೈಲೇಶ್ ಕುಮಾರ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಅಂಬೇಡ್ಕರ್ ಅವರ ಪರಿಶ್ರಮದಿಂದ ಓದುವ ಮೂಲಕ ರಾಷ್ಟ್ರಮೆಚ್ಚುವಂತಹ ಸಾಧನೆ ಮಾಡಿದರು.

ವಿದ್ಯಾರ್ಥಿಗಳು ಸಹಾ ಅಂಬೇಡ್ಕರ್ ಅವರಂತೆ ಸತತ ಪರಿಶ್ರಮದ ಮೂಲಕ ಅಧ್ಯಯನ ಮಾಡಿ ಉತ್ತಮ ಪ್ರಜೆಗಳಾಗಬೇಕು ಎಂದರು. ಡಾ.ಬಿ.ಆರ್. ಅಂಬೇಡ್ಕರ್ ವ್ಯಕ್ತಿತ್ವ ಸಾಧನೆ, ಸಂವಿಧಾನ ರಚನೆ ಕುರಿತಾಗಿ ವಿಶೇಷ ಉಪನ್ಯಾಸವನ್ನು ಐಕ್ಯೂಎಸಿ ಸಂಚಾಲಕ ಹೆಚ್.ಜಿ. ನಟರಾಜನ್ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕಿ ಭ್ರಮರಾಂಭ, ಸಹಾಯಕ ಆಡಳಿತಾಧಿಕಾರಿ ಹೆಚ್.ಜಿ. ಗಿರೀಶ್ ಇನ್ನಿತರಿದ್ದರು. ಇದೆ ವೇಳೆ ಅಂಬೇಡ್ಕರ್ ಅವರ ಕುರಿತು ಅಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ 5ಮಂದಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು



ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮಕ್ಕೆ ಶೈಲೇಶ್‌ಕುಮಾರ್ ಚಾಲನೆ ನೀಡಿದರು

# ಪಾಲಾರ್ ಚೆಕ್‌ಪೋಸ್ಟ್ ಬಳಿ ದಾಖಲೆ ಇಲ್ಲದ 2.71 ಲಕ್ಷಕ್ಕೂ ಹೆಚ್ಚು ಹಣ ವಶ

**ಚಾಮರಾಜನಗರ:** ಲೋಕಸಭಾ ಸಾರ್ವತ್ರಿಕ ಚುನಾವಣೆ ಸಂಬಂಧ ಕಾರ್ಯ ನಿರ್ವಹಿಸುತ್ತಿರುವ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಾಲಾರ್ ಚೆಕ್‌ಪೋಸ್ಟ್ ಬಳಿ ಶುಕ್ರವಾರ ರಾತ್ರಿ 8 ಗಂಟೆ ಸಮಯದಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 2,71,670 ರೂ.ಗಳನ್ನು ಎಫ್‌ಎಸ್‌ಟಿ ತಂಡದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.



ಮಾರ್ಚ್ 22 ರಂದು ರಾತ್ರಿ 8 ಗಂಟೆ ವೇಳೆ ಪಾಲಾರ್ ಚೆಕ್‌ಪೋಸ್ಟ್ ಬಳಿ ಬೊಲೆರೋ ವಾಹನದಲ್ಲಿ ಶಿವಮೂರ್ತಿ ಎಂಬುವವರಿಂದ ದಾಖಲೆಗಳಿಲ್ಲದೆ ಸಾಗಿಸಲಾಗುತ್ತಿದ್ದ 2,71,670 ರೂ. ಗಳನ್ನು ಎಫ್‌ಎಸ್‌ಟಿ ತಂಡದ ಅಧಿಕಾರಿ ಶಾಂತರಾಜು, ಸಬ್‌ಇನ್ಸ್‌ಪೆಕ್ಟರ್ ಜಯರಾಮ್ ಮತ್ತು ತಂಡದವರು ಜಪ್ತಿ ಮಾಡಿದ್ದಾರೆ. ಹಣ ಸಾಗಣೆ ಮಾಡುತ್ತಿದ್ದ ಬಗ್ಗೆ ವಿಚಾರಣೆ ಮಾಡಿದ ವೇಳೆ ಸ್ಪಷ್ಟ, ಸಮಂಜಸ ಉತ್ತರ ದೊರೆಯದ ಹಿನ್ನೆಲೆಯಲ್ಲಿ ಹಣ ವಶಕ್ಕೆ ಪಡೆದು ಕೊಳ್ಳೇಗಾಲದ ಉಪ ಖಜಾನೆಯಲ್ಲಿ ಇರಿಸಲಾಗಿದೆ. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಳಿಗಿರಿರಂಗನಬೆಟ್ಟದಲ್ಲಿ ಕಾಡಾನೆ ಸಾವು

**ಚಾಮರಾಜನಗರ:** ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಯಳಂದೂರು ವನ್ಯಜೀವಿ ವಲಯದ ಬಿಳಿಗಿರಿ ರಂಗನಾಥಸ್ವಾಮಿ ಟೆಂಪಲ್ ಫಾರೆಸ್ಟ್ ರಿಸರ್ವ್ ಅರಣ್ಯದ ಕೆಂಕೆರೆ ಕೆರೆಯ ಸಮೀಪ ಹೆಣ್ಣು ಕಾಡಾನೆಯೊಂದು ಮೃತಪಟ್ಟಿದೆ.



ಬಿಳಿರಂಗನಬೆಟ್ಟದ ಶಾಖೆಯ ಬಾಳೆಬರೆ ಗಸ್ತಿನ ಸಿಬ್ಬಂದಿ ಅರಣ್ಯದಲ್ಲಿ ಗಸ್ತು ತಿರುಗುವ ವೇಳೆ ಈ ಕಾಡಾನೆ ಸಾವನ್ನಪ್ಪಿರುವುದು ಕಂಡು ಬಂದಿದೆ. ವಿಷಯ ತಿಳಿಯುತ್ತಿದ್ದಂತೆಯೇ ಇಂದು (ಮಾ.23) ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಮತಿ ದೀಪ್ ಜೆ.ಕಂಟ್ರಾಕ್ಟರ್ ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಂದಗೋಪಾಲ್ ಸಮಕ್ಷಮದಲ್ಲಿ ಬಿ.ಆರ್.ಹಿಲ್ಸ್ ಲ್ಯಾಂಪ್ ಸೊಸೈಟಿ ಉಪಾಧ್ಯಕ್ಷ ಸಿ.ಮಾದೇಗೌಡ, ವೈಲ್ಡ್ ಲೈಫ್ ಟ್ರಸ್ಟ್ ಆಫ್ ಕರ್ನಾಟಕ ಕಾರ್ಯದರ್ಶಿ ಮನೋಜ್‌ಕುಮಾರ್, ಯಳಂದೂರು ವನ್ಯಜೀವಿ ವಲಯದ ಆರ್‌ಎಫ್‌ಓ ಹಾಗೂ ಸಿಬ್ಬಂದಿಗಳ ಸಮ್ಮುಖದಲ್ಲಿ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಪಶು ವೈದ್ಯಾಧಿಕಾರಿ ಮಿರ್ಜಾ ವಾಸಿಂ ಅವರು ಹೆಣ್ಣು ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಿ ಇದು ಸ್ವಾಭಾವಿಕ ಸಾವು ಎಂದು ಖಚಿತಪಡಿಸಿದ್ದಾರೆ ಎಂದು ಅರಣ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

## ಹಾಸನ, ಮಂಡ್ಯ, ಕೋಲಾರ ಜೆಡಿಎಸ್ ಪಾಲು

ಮಾತನಾಡಿದ ಅವರು, ಕೋಲಾರ ಲೋಕಸಭಾ ಕ್ಷೇತ್ರವನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಟ್ಟಿರುವುದಾಗಿ ಅಧಿಕೃತ ಘೋಷಣೆ ಮಾಡಿದರು. ಉಳಿದ 25 ಕ್ಷೇತ್ರಗಳಲ್ಲಿ ನಾವು ಸ್ಪರ್ಧಿಸುತ್ತಿದ್ದು, ಉಭಯ ಪಕ್ಷದ ಮುಖಂಡರು, ಕಾರ್ಯಕರ್ತರು ಇಂದಿನಿಂದಲೇ ಚುನಾವಣಾ ಹೋರಾಟ ನಡೆಸಿ, ಎಲ್ಲಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸಬೇಕೆಂದರು.

ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಪಕ್ಷದ ಅಧಿಕೃತ ಅಭ್ಯರ್ಥಿಗಳ ಪರ ಕೆಲಸ ಮಾಡಿ, ಇಲ್ಲದಿದ್ದರೆ ಕಠಿಣ ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## ಸುಮಲತಾ ಭವಿಷ್ಯ ಉತ್ತಮವಾಗಿರಲಿದೆ

ಹಿಂದೂ ಸಂಸ್ಕೃತಿ. ನಮ್ಮನ್ನು ನಾವು ಯಾವಾಗಲೂ ಶುದ್ಧೀಕರಣ ಮಾಡಿಕೊಳ್ಳುತ್ತೇವೆ. ಅವರು ಬಿಜೆಪಿಯವರು, ಬಿಜೆಪಿಯಲ್ಲೇ ಇರ್ತಾರೆ. ಬಿಜೆಪಿಯಲ್ಲಿ ಸದಾಕಾಲ ಶುದ್ಧೀಕರಣ ಆಗ್ತಾನೆ ಇರುತ್ತೆ. ಇದೇನು ಹೊಸದಲ್ಲ ಎಂದು ರಾಧಾ ಮೋಹನ್ ದಾಸ್ ಅಗರವಾಲ್ ಹೇಳಿದ್ದಾರೆ. ಬೆಳಗಾವಿಯಲ್ಲಿ ಜಗದೀಶ್ ಶೆಟ್ಟರ್ ವಿಚಾರಕ್ಕೆ ಪ್ರತಿಕ್ರಿಯಿಸಿ, ಬೆಳಗಾವಿಯಲ್ಲಿ ಯಾರಿಗಾದರೂ ಟಿಕೆಟ್ ಕೊಡಿ, ಅವರ ಪರವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಲು ಅಲ್ಲಿಯ ಲೀಡರ್ ಬಂದಿದ್ದರು. ಜಗದೀಶ್ ಶೆಟ್ಟರ್ ವಿರುದ್ಧವಾಗಿ ಮಾತಾಡಿದ್ದು ನನಗೆ ಗೊತ್ತಿಲ್ಲ. ನಿಮಗೆ ಮಾಹಿತಿ ಇರಬಹುದು. ಮೋದಿ ಕರ್ನಾಟಕವನ್ನು ಬಹಳ ಪ್ರೀತಿಸುತ್ತಾರೆ. ಈಗಾಗಲೇ ಎರಡು ಸಭೆ ಮಾಡಿದ್ದಾರೆ. ಮತ್ತೆ–ಮತ್ತೆ ಬರಬೇಕು ಎಂದು ವಿನಂತಿ ಮಾಡುತ್ತೇನೆ. ಕೇವಲ ಎರಡು ದಿನದ ತಯಾರಿಯಲ್ಲಿ ಬಹಳ ಅದ್ಭುತವಾಗಿ ಮೋದಿ ಕಾರ್ಯಕ್ರಮ ನಡೆದಿದೆ. ಉತ್ತರ ಪ್ರದೇಶದಲ್ಲೂ ಇಷ್ಟೊಂದು ಅದ್ಭುತವಾಗಿ ಕಾರ್ಯಕ್ರಮ ಮಾಡಲು ಸಾಧ್ಯವಾಗಿಲ್ಲ. ರಾಜ್ಯಕ್ಕೆ ಎಷ್ಟು ಸಮಯ ಕೊಡ್ತಾರೆ ನೋಡಬೇಕು. 6 ಬಾರಿ ಮೋದಿ ರಾಜ್ಯಕ್ಕೆ ಬರುವ ನಿರೀಕ್ಷೆ ಇದೆ ಎಂದು ವಿವರಿಸಿದ್ದಾರೆ.

## ಇಂದು ಆಸ್ಪತ್ರೆಯಿಂದ ಕುಮಾರಸ್ವಾಮಿ ಬಿಡುಗಡೆ

ಹೆಚ್ಚಿನ ವಿಶ್ರಾಂತಿ ಅಗತ್ಯವಿಲ್ಲ.ತಂತ್ರಜ್ಞಾನ ಬೆಳೆಯುತ್ತಿದ್ದಂತೆ ಆರೋಗ್ಯ ಕ್ಷೇತ್ರದಲ್ಲೂ ಮಹತ್ತರ ಸಂಶೋಧನೆಗಳನ್ನು ನಡೆಸಿರುವ ವೈದ್ಯ ವಿಜ್ಞಾನಿಗಳು, ನಾಳದ ಮೂಲಕವೇ ಕವಾಟಗಳನ್ನು ಬದಲಿಸುವ ಸುಧಾರಿತ ಚಿಕಿತ್ಸೆ ಕಂಡುಹಿಡಿದಿದ್ದಾರೆ. ಚೆನ್ನೈನ ಅಪೊಲೋ ಆಸ್ಪತ್ರೆಯಲ್ಲಿ ಇಂತಹ ಶಸ್ತ್ರಚಿಕಿತ್ಸೆಗೆ ಅವಕಾಶವಿದ್ದರೂ ಕುಮಾರಸ್ವಾಮಿ ವಿಚಾರದಲ್ಲಿ ಭಾರಿ ಸೂಕ್ಷ್ಮತೆ ಇತ್ತು. ಅಲ್ಲಿನ ಖ್ಯಾತ ಹೃದಯ ತಜ್ಞರು ವಿದೇಶಿ ವೈದ್ಯರ ನೆರವು ಪಡೆದು ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಮುಂದಿನ ಬುಧವಾರದಿಂದ ಅವರು ಸಕ್ರಿಯವಾಗಿ ತಮ್ಮನ್ನು ಚುನಾವಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಮಂಡ್ಯದಿಂದ ಚುನಾವಣಾ ಸ್ಪರ್ಧೆಗಿಳಿಯಬೇಕು ಎಂದು ಜೆಡಿಎಸ್ ಕಾರ್ಯಕರ್ತರ ಒತ್ತಡ ಇರುವ ಹಿನ್ನೆಲೆಯಲ್ಲಿ ಆ ಜಿಲ್ಲೆಯ ಪ್ರಮುಖರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.

## ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್‌ನ ಅಜಯ್ ರೈ ಸ್ಪರ್ಧೆ

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿದ್ದ ಸಸಿಕಾಂತ್ ಸೆಂಥಿಲ್ ಅವರನ್ನು ತಮಿಳುನಾಡಿನ ತಿರುವಳ್ಳುವರ್ ಕ್ಷೇತ್ರದಿಂದ ಸ್ಪರ್ಧೆಗಿಳಿಸಲಾಗುತ್ತಿದೆ. ಮಧ್ಯ ಪ್ರದೇಶದ ರಾಜ್‌ಗಢ್‌ನಲ್ಲಿ ದಿಗ್ವಿಜಯ್ ಸಿಂಗ್, ತಮಿಳುನಾಡಿನ ಶಿವಗಂಗಾ ಕ್ಷೇತ್ರದಿಂದ ಕಾರ್ತಿ ಚಿದಂಬರಂ, ಇತ್ತೀಚೆಗಷ್ಟೇ ಕಾಂಗ್ರೆಸ್ ಸೇರ್ಪಡೆಯಾಗಿದ್ದ ಡ್ಯಾನಿಶ್ ಅಲಿಯನ್ನು ಉತ್ತರ ಪ್ರದೇಶದ ಅಮ್ರೋಹ ಕ್ಷೇತ್ರದಿಂದ ಕಣಕ್ಕಿಳಿಸಲಾಗುತ್ತಿದೆ. ಡ್ಯಾನಿಶ್ ಅವರನ್ನು ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಬಿಎಸ್‌ಪಿಯಿಂದ ಉಚ್ಚಾಟಿಸಲಾಗಿತ್ತು. ಈ ಮೊದಲು ಇವರು ಜೆಡಿಎಸ್‌ನಲ್ಲಿದ್ದು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಆಪ್ತರಾಗಿದ್ದರು. ದಕ್ಷಿಣ ಕನ್ನಡದ ಡಿಸಿ ಆಗಿದ್ದ ಸಸಿಕಾಂತ್ ಸೆಂಥಿಲ್ ಬಿಜೆಪಿ ಆಡಳಿತಾವಧಿಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆಗಲೇ ರಾಜಕೀಯ ಪ್ರವೇಶಿಸುವ ಸುಳಿವು ಸಹ ನೀಡಿದ್ದರು.

## ಅಧ್ಯಕ್ಷ ಸೇರಿ 13 ಮಂದಿ ವಿರುದ್ಧ ಕೇಸ್

ಸಂಘದ ಅಧ್ಯಕ್ಷರೂ ಆದ ನಗರಸಭೆಯ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ ಮತ್ತಿತರರು ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದ್ದಾರೆ ಎಂದು ಆರೋಪಿಸಿ, ಸಂಘದ ಆಸ್ತಿ ಉಳಿವಿಗಾಗಿ ಸಮುದಾಯದವರು ಸಮಿತಿಯೊಂದನ್ನು ರಚಿಸಿಕೊಂಡು ಹೋರಾಟ ನಡೆಸುತ್ತಿದ್ದರು. ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಸಮಿತಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಸಮಗ್ರ ತನಿಖೆಗಾಗಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ಕೊಳ್ಳೇಗಾಲ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚಾಮರಾಜನಗರ ತಹಸೀಲ್ದಾರ್, ಚಾಮರಾಜನಗರ ಜಿಲ್ಲೆ ಸಹಕಾರ ಸಂಘಗಳ ಉಪ ನಿಬಂಧಕರು, ನಗರಸಭೆಯ ಆಯುಕ್ತರು, ತಾಲೂಕು ಪಂಚಾಯ್ತಿ ಇಓ ಒಳಗೊಂಡಂತೆ ಐವರ ಸಮಿತಿ ರಚಿಸಿದ್ದರು.

ತನಿಖೆ ನಡೆಸಿದ ಈ ಸಮಿತಿಯು 1952–53ರಲ್ಲಿ ಆದಿ ಕರ್ನಾಟಕ ಅಭಿವೃದ್ಧಿ ಸಂಘಕ್ಕಾಗಿ ಸರ್ಕಾರ ಭೂಸ್ವಾಧೀನಪಡಿಸಿಕೊಂಡು ಲೋಕೋಪಯೋಗಿ ಇಲಾಖೆಯಿಂದ 1968ರಲ್ಲಿ ಹಾಸ್ಟೆಲ್ ನಿರ್ಮಾಣವಾಗಿದ್ದು, ಪಹಣಿಯಲ್ಲಿ ಎಕೆ ಜನರಲ್ ಹಾಸ್ಟೆಲ್ ಎಂದು ನಮೂದಾಗಿದ್ದರೂ, ಆಸ್ತಿಯನ್ನು ಸಂಘಕ್ಕೆ ಸರ್ಕಾರದಿಂದ ಹಸ್ತಾಂತರಿಸಿರುವ ಬಗ್ಗೆ ಸದ್ಯಕ್ಕೆ ದಾಖಲೆಗಳು ಲಭ್ಯವಿಲ್ಲದ ಕಾರಣ ಸದರಿ ದಾಖಲೆಗಳು ಹಾಜರುಪಡಿಸುವವರೆಗೆ ಆಸ್ತಿಯನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿತ್ತು. 2019ರ ಫೆಬ್ರವರಿ 19ರಿಂದ 2023ರ ಜುಲೈ 31ರವರೆಗೆ ಹಲವು ದಿನಾಂಕಗಳಲ್ಲಿ ಆಸ್ತಿಯನ್ನು ಕೆಲ ಭಾಗಗಳಾಗಿ ವಿಂಗಡಿಸಿ ನಕಲಿ ದಾಖಲೆಗಳ ಮೂಲಕ ಮಾರಾಟ ಮಾಡಿರುವುದು ದೃಢಪಟ್ಟಿದ್ದು, ಮೇಲಿನ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಶಿಫಾರಸು ಮಾಡಿತ್ತು. ಈ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ನೀಡಿದ ಆದೇಶದ ಮೇರೆಗೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್ ಅವರು ಚಾಮರಾಜನಗರ ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪೊಲೀಸರು ಭಾರತೀಯ ದಂಡ ಸಂಹಿತೆ 420, 465, 468, 471ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಗಣನೀಯ ಇಳಿಮುಖ

ಜನರಿಲ್ಲದೇ ಬಿಕೋ ಎನ್ನುತ್ತಿವೆ. ಪ್ರತೀದಿನ ಸರಾಸರಿ 4750ರಿಂದ 5250 ಮಂದಿ ಭೇಟಿ ನೀಡುತ್ತಿದ್ದ ಮೈಸೂರಿನ ಅರಮನೆಗೆ ಕಳೆದ 10 ದಿನಗಳಿಂದ ಕೇವಲ 2250ರಿಂದ 2,500 ಮಂದಿ ಪ್ರವಾಸಿಗರು ಮಾತ್ರ ಭೇಟಿ ನೀಡುತ್ತಿದ್ದಾರೆ. ಪರಿಣಾಮ ಅರಮನೆ ಮಂಡಳಿಗೆ ಪ್ರವೇಶ ಟಿಕೆಟ್ ಮಾರಾಟದಿಂದ ಆದಾಯ ಕುಸಿದಿದೆಯಲ್ಲದೆ, ಸುತ್ತಲಿನ ಅಂಗಡಿ ಮುಂಗಟ್ಟು, ಪಾರ್ಕಿಂಗ್ ಶುಲ್ಕ, ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್ ಟಿಡಿಸಿ)ದ 'ಅಂಬಾರಿ' ಡಬಲ್ ಡೆಕ್ಕರ್ ಬಸ್‌ಗಳಿಗೂ ಆದಾಯ ಕಡಿಮೆಯಾಗಿದೆ.

ಸ್ಥಳೀಯ ಭಕ್ತಾದಿಗಳೇ ಹೆಚ್ಚಾಗಿ ಭೇಟಿ ನೀಡುತ್ತಿ ರುವುದರಿಂದ ಚಾಮುಂಡಿ ಬೆಟ್ಟದ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ನಿತ್ಯ ನೂಕು ನುಗ್ಗಲಿರುತ್ತದೆಯಾದರೂ, ಹೊರ ರಾಜ್ಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ

ಉಳಿದಂತೆ ಕಾರಂಜಿ ಕೆರೆ ಉದ್ಯಾನವನ, ಜಗ ನ್ಮೋಹನ ಅರಮನೆ, ಮೃಗಾಲಯಗಳಿಗೂ ಪ್ರವಾಸಿ ಗರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಅದೇ ರೀತಿ ನಂಜನಗೂಡು ಶ್ರೀ ನಂಜುಂಡೇಶ್ವರ ದೇವಾಲಯ, ತಲಕಾಡು, ಸೋಮನಾಥಪುರ, ಮಡಿಕೇರಿ, ಹಾರಂಗಿ ಜಲಾಶಯ, ಕಾವೇರಿ ನಿಸರ್ಗಧಾಮ, ದುಬಾರೆ ಆನೆ ಶಿಬಿರ, ಬಿಳಿಗಿರಿರಂಗನ ಬೆಟ್ಟ, ಮಲೆ ಮಹದೇಶ್ವರ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಪ್ರವಾಸಿಗರ ಸಂಖ್ಯೆ ಕುಸಿದಿದೆ. ಮಂಡ್ಯ ಜಿಲ್ಲೆಯ ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗನಾಥ ದೇವಸ್ಥಾನ, ದರಿಯಾ ದೌಲತ್, ಟಿಪ್ಪು ಸುಲ್ತಾನ್, ನಿಮಿಷಾಂಬ ದೇವಸ್ಥಾನ, ತೊಣ್ಣೂರು ಕೆರೆ, ಮೇಲುಕೋಟೆಯಂತಹ ಪ್ರವಾಸಿ ತಾಣಗಳಲ್ಲೂ ಜನರಿಲ್ಲದೇ ಭಣಗುಡುತ್ತಿರುವುದನ್ನು ಕಾಣಬಹುದಾಗಿದೆ.

## ಸುಪ್ರೀಂಕೋರ್ಟ್ ಮೊರೆ ಹೋದ ರಾಜ್ಯ ಸರ್ಕಾರ

ರಾಜ್ಯ ಸರ್ಕಾರ ಮನವಿ ಮಾಡಿದ ವಾರದಲ್ಲಿ ಕೇಂದ್ರದ ತಂಡ ಬರಬೇಕು. ಆದರೆ, ಅಕ್ಟೋಬರ್‌ನಲ್ಲಿ ಕೇಂದ್ರ ತಂಡ ರಾಜ್ಯಕ್ಕೆ ಬಂದು ಪರಿಶೀಲನೆ ನಡೆಸಿ ಕೇಂದ್ರಕ್ಕೆ ಐಎಂಸಿಟಿ ವರದಿ ನೀಡಿದೆ. ಈ ವರದಿ ಕೊಟ್ಟ ಒಂದು ತಿಂಗಳಲ್ಲಿ ರಾಜ್ಯಕ್ಕೆ ಬರ ಪರಿಹಾರ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ನಿಯಮ. ಆದರೆ, ಇದುವರೆಗೂ ಕೇಂದ್ರ ರಾಜ್ಯದ ಜನರಿಗೆ ಸ್ಪಂದಿಸಿಲ್ಲ ಎಂದು ಎನ್‌ಡಿಆರ್‌ಎಫ್ ನಿಯಮಾವಳಿಗಳನ್ನು ಮಾಧ್ಯಮಗಳ ಎದುರಿಗೆ ಓದಿದರು.

ಕೇಂದ್ರ ತಂಡ ವರದಿ ಕೊಟ್ಟರೂ ನಮಗೆ ಕೇಂದ್ರ ಸರ್ಕಾರ ಸ್ಪಂದಿಸದಿದ್ದಾಗ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ದೆಹಲಿಗೆ ಹೋದರೂ ಕೇಂದ್ರ ಸಚಿವರ ಭೇಟಿಗೆ ಅವಕಾಶವನ್ನೇ ಕೊಡಲಿಲ್ಲ. ಬಳಿಕ ಡಿಸೆಂಬರ್ 20ರಂದು ನಾನು ಮತ್ತು ಕೃಷ್ಣಭೈರೇಗೌಡ ಅವರು ಮತ್ತೆ ದೆಹಲಿಗೆ ಹೋಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಮನವಿ ಮಾಡಿದೆವು. ಆದರೂ ನಮಗೆ ಪರಿಹಾರ ಕೊಡಲಿಲ್ಲ. ಬಳಿಕ ನಾನು ಬೆಂಗಳೂರಿನಲ್ಲೇ ಪ್ರಧಾನಿ ಮೋದಿ ಅವರನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಮಾಡಿದೆ. ಆದರೂ ಪರಿಹಾರ ಸಿಗಲಿಲ್ಲ.

ಕೇಂದ್ರದಿಂದ ನಯಾಪೈಸೆ ಬಿಡುಗಡೆ ಆಗದಿದ್ದಾಗ 450 ಕೋಟಿ ರೂ., ಕುಡಿಯುವ ನೀರಿಗೆ 870 ಕೋಟಿ ರೂ. ಬಿಡುಗಡೆ ಮಾಡಿದೆವು. ಡಿಸಿಗಳ ಬಳಿ ಇನ್ನೂ 800 ಕೋಟಿ ರೂ. ಬರ ನಿರ್ವಹಣೆ ಉದ್ದೇಶಕ್ಕಾಗಿಯೇ ಮೀಸಲಿಡಲಾಗಿದೆ. ಬರ ನಿರ್ವಹಣೆ ಕುರಿತಾಗಿ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ ಎಂದರು.

4,600 ಕೋಟಿ ರೂ. ಇನ್‌ಪುಟ್ ಸಬ್ಸಿಡಿಗೆ ಹಣ ಬೇಕು, ಕಾಯ್ದೆ ಪ್ರಕಾರ ಇಂಥಾ ಸನ್ನಿವೇಶದಲ್ಲಿ ತಡ ಮಾಡದೆ ಹಣ ಬಿಡುಗಡೆ ಆಗಬೇಕಿತ್ತು. ಆದರೆ ಐದು ತಿಂಗಳಾದರೂ ನಮಗೆ ಎನ್‌ಡಿಆರ್‌ಎಫ್ ನಿಧಿ ಬಂದೇ ಇಲ್ಲ. ಹೀಗಾಗಿ ನಾವು ಬೇರೆ ದಾರಿ ಇಲ್ಲದೆ ಸುಪ್ರೀಂಕೋರ್ಟ್ ಬಾಗಿಲು ಬಡಿಯಬೇಕಾಯಿತು. ನಮ್ಮ ನಾಡಿಗೆ, ನಮ್ಮ ನಾಡಿನ ಜನರಿಗೆ ಆಗಿರುವ ಅನ್ಯಾಯವನ್ನು ಸರಿಮಾಡಿ ಎಂದು, ಎನ್‌ಡಿಆರ್‌ಎಫ್ ನಿಧಿ ಕೊಡಿ ಎಂದು ಮೇಲಿಂದ ಮೇಲೆ ಮನವಿ ಮಾಡಿ ಎಲ್ಲಾ ರೀತಿಯಲ್ಲೂ ಬೇಡಿಕೆ ಸಲ್ಲಿಸಿದರೂ ಪ್ರಯೋಜನ ಆಗಲಿಲ್ಲ. ಈ ಕಾರಣಕ್ಕೆ ನಾವು ಸುಪ್ರೀಂಕೋರ್ಟ್ ಬಳಿ ನ್ಯಾಯ ಕೇಳದೆ ಬೇರೆ ದಾರಿ ಇರಲಿಲ್ಲ ಎಂದರು.

# ದೇವರಾಜ ಮಾರುಕಟ್ಟೆಯಲ್ಲಿ ಅತಿಕ್ರಮ ತೆರವು

### ಅಂಗಡಿಗಳಲ್ಲಿ ಅನುಪಯುಕ್ತ ವಸ್ತುಗಳ ಶೇಖರಣೆ, ಪಾದಚಾರಿ ರಸ್ತೆಗಳಲ್ಲಿ ಪದಾರ್ಥಗಳನ್ನಿಟ್ಟು ವ್ಯಾಪಾರದ ವಿರುದ್ಧ ನಗರ ಪಾಲಿಕೆ ಅಧಿಕಾರಿಗಳಿಂದ ಯಶಸ್ವಿ ಕಾರ್ಯಾಚರಣೆ

ಮೈಸೂರು, ಮಾ.23(ಜಿಎ)– ಮೈಸೂರಿನ ದೇವರಾಜ ಮಾರುಕಟ್ಟೆಯ ಒಳ ಆವರಣದ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡಿದ್ದ ವ್ಯಾಪಾರಿಗಳನ್ನು ಮೈಸೂರು ನಗರಪಾಲಿಕೆ (ಎಂಸಿಸಿ) ಅಧಿಕಾರಿಗಳು ಶನಿವಾರ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಸಾರ್ವಜನಿಕರಿಂದ ಹಲವಾರು ದೂರುಗಳು ಬಂದ ಹಿನ್ನೆಲೆಯಲ್ಲಿ ಮೈಸೂರು ನಗರಪಾಲಿಕೆ (ಎಂಸಿಸಿ) ಅಧಿಕಾರಿಗಳು ಮಾರುಕಟ್ಟೆಗೆ ಭೇಟಿ ನೀಡಿ ಅತಿಕ್ರಮಿತ ಸ್ಥಳವನ್ನು ತೆರವುಗೊಳಿಸಿ, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಸುಗಮವಾಗಿ ಸಂಚರಿಸಲು ಅನುವು ಮಾಡಿಕೊಟ್ಟರು.

ನಿಯಮಗಳ ಪ್ರಕಾರ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಗರಿಷ್ಠ 3 ಅಡಿ ಜಾಗವನ್ನು ಬಳಸಿಕೊಳ್ಳಲು ನೀಡಲಾಗಿದೆ. ಆದಾಗ್ಯೂ ಪಾದಚಾರಿಗಳ ಮಾರ್ಗದ ಎರಡೂ ಬದಿಗಳಲ್ಲಿ ವ್ಯಾಪಾರಿಗಳು ತಮ್ಮ ಪದಾರ್ಥಗಳನ್ನು ಇರಿಸಿದ್ದು, ಇದ್ದರಿಂದ ಪಾದಚಾರಿಗಳು ಸಂಚರಿಸಲು ಕಷ್ಟವಾಗುತ್ತಿತ್ತು.



ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಒಳ ಆವರಣದ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡಿದ್ದ ವ್ಯಾಪಾರಿಗಳನ್ನು ಮೈಸೂರು ನಗರ ಪಾಲಿಕೆ (ಎಂಸಿಸಿ) ಅಧಿಕಾರಿಗಳು ಶನಿವಾರ ಕಾರ್ಯಾಚರಣೆ ನಡೆಸಿ ತೆರವುಗೊಳಿಸುತ್ತಿರುವುದು

ಪಾಲಿಕೆಯ ವಲಯ ಕಚೇರಿ 6ರ ಸಹಾಯಕ ವಲಯ ಆಯುಕ್ತೆ ವಾಣಿ ಆಳ್ವಾ ನೇತೃತ್ವದಲ್ಲಿ ಎಂಸಿಸಿಯ ಅಧಿಕಾರಿಗಳು ಮಾರುಕಟ್ಟೆಗೆ ಭೇಟಿ ನೀಡಿ ಇಲ್ಲಿನ ಪರಿಸ್ಥಿತಿ ಗಮನಿಸಿ, ಪಾದಚಾರಿ ಮಾರ್ಗವನ್ನು ವ್ಯಾಪಾರಿಗಳು ಆಕ್ರಮಿಸಿಕೊಂಡು ತಮ್ಮ ಸರಕು, ಟೇಬಲ್ ಸೇರಿದಂತೆ ಇತರೆ ಅನುಪಯುಕ್ತ ವಸ್ತುಗಳನ್ನು ಇಟ್ಟುಕೊಂಡಿರುವುದನ್ನು ಅಧಿಕಾರಿಗಳು ಗಮನಿಸಿದರು.

ಅನಗತ್ಯ ವಸ್ತುಗಳನ್ನು ತೆರವುಗೊಳಿಸಿ, ಮಾರಾಟ ವಸ್ತುಗಳನ್ನು ಜೋಡಿಸುವಂತೆ ಸೂಚಿಸಿ, ಅಂಗಡಿಗಳ ಮುಂಭಾಗದಲ್ಲಿರುವ ಟಾರ್ಪಾಲ್‌ಗಳನ್ನು ತೆರವುಗೊಳಿಸಿ ತಮ್ಮ ವಶಕ್ಕೆ ತೆಗೆದುಕೊಂಡರು. ಈ ವೇಳೆ ಸಂಪೂರ್ಣ ಅವ್ಯವಸ್ಥೆಯಿಂದ ಕೂಡಿದ್ದ ಎರಡು ಅಂಗಡಿಗಳ ಒಳಗೆ ಇರುವ ಎಲ್ಲಾ ಅನಗತ್ಯ ವಸ್ತುಗಳನ್ನು ತೆರವುಗೊಳಿಸಿ, ತರಕಾರಿಗಳನ್ನು ಜೋಡಿಸಿ ಈ ಮಾದರಿಯನ್ನು ಅನುಸರಿಸುವಂತೆ ತಿಳಿಸಿದರು.

ಈ ನಡುವೇ ಕೆಲ ವ್ಯಾಪಾರಿಗಳು ಅಧಿಕಾರಿಗಳ ನಿರ್ಧಾರಕ್ಕೆ ಬೇಸರ ವ್ಯಕ್ತಪಡಿಸಿ, ಟಾರ್ಪಲ್‌ಗಳನ್ನು ತೆಗೆದು ಹಾಕುವುದರಿಂದ ತರಕಾರಿ, ಸೊಪ್ಪು ಬಿಸಿಲಿಗೆ ಹಾಳಾಗುತ್ತದೆ ಇದರಿಂದ ನಮ್ಮ ವ್ಯಾಪಾರಕ್ಕೂ ತೊಂದರೆಯಾಗುತ್ತದೆ. ಟಾರ್ಪಲ್‌ಗಳನ್ನು ಹಿಂತಿರುಗಿಸುವಂತೆ ಒತ್ತಾಯಿಸಿ, ಹೆಚ್ಚುವರಿಯಾಗಿ ಅಂಗಡಿಗಳಿಗೆ ರೋಲಿಂಗ್ ಶಟರ್‌ಗಳನ್ನು ಅಳವಡಿಸಿಕೊಡುವಂತೆ ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದರು. ಆದರೆ, ಅಧಿಕಾರಿಗಳು ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂಭಾಗ 3 ಅಡಿ ಮಿತಿಯೊಳಗೆ ವ್ಯಾಪಾರ ಮಾಡುವ ಮೂಲಕ ನಿಯಮವನ್ನು ಪಾಲಿಸುವಂತೆ ಸೂಚಿಸಿದರು.

ದೇವರಾಜ ಮಾರುಕಟ್ಟೆಯ ಒಳಭಾಗದ ಪಾದಚಾರಿಗಳ ಮಾರ್ಗದ ಒತ್ತುವರಿ ತೆರವು ಕಾರ್ಯಾಚರಣೆಯ ನಂತರ ಪಾದಚಾರಿ ಮಾರ್ಗಗಳು ವಾಹನಗಳೇ ಸುಗಮವಾಗಿ ಸಂಚರಿಸುವಷ್ಟು ಸ್ಥಳಾವಕಾಶ ಪಾದಚಾರಿಗಳು, ಗ್ರಾಹಕರು ಓಡಾಡಲು ಲಭ್ಯವಿದೆ.

### ಮೇಕೆದಾಟು ಯೋಜನೆಗೆ ಅವಕಾಶ ನೀಡದ ಡಿಎಂಕೆ ಹೇಳಿಕೆ

## ಮೈಸೂರು ಕನ್ನಡ ವೇದಿಕೆಯಿಂದ ಪ್ರತಿಭಟನೆ



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಡಿಎಂಕೆ ಹೇಳಿಕೆ ಖಂಡಿಸಿ ಮೈಸೂರು ಕನ್ನಡ ವೇದಿಕೆ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.23(ಜಿಎ)–ಲೋಕಸಭೆ ಚುನಾವಣೆಯಲ್ಲಿ ಐಎನ್‌ಡಿಐಎ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಮೇಕೆದಾಟು ಯೋಜನೆಗೆ ಅವಕಾಶ ನೀಡುವುದಿಲ್ಲ ಎಂಬ ತಮಿಳುನಾಡು ಸಿಎಂ ಸ್ಟಾಲಿನ್ ಹೇಳಿಕೆ ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಡಿಎಂಕೆ ಚುನಾವಣಾ ಭಾಷಣದಲ್ಲಿ ಕಾವೇರಿ ಸಮಸ್ಯೆಯನ್ನು ರಾಜಕೀಯ ದಾಳವನ್ನಾಗಿ ಪ್ರಯೋಗ ಮಾಡುತ್ತಿರುವುದು ದುರದೃಷ್ಟಕರ. ಇದು ಚುನಾವಣೆ ನೀತಿ ಸಂಹಿತೆಗೆ ವಿರುದ್ಧವಾದದ್ದು. ಮೇಕೆದಾಟು ಯೋಜನೆಗೆ ಅವಕಾಶ ನೀಡುವುದಿಲ್ಲವೆಂದು ಹೇಳಿರುವುದು ಖಂಡನೀಯ. ಇದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ. ಕಾವೇರಿ ವಿಷಯದಲ್ಲಿ ಇಷ್ಟೆಲ್ಲಾ ಬೆಳವಣಿಗೆ ಆಗುತ್ತಿದ್ದರೂ ಕರ್ನಾಟಕದಲ್ಲಿರುವ ಯಾವ ರಾಜಕೀಯ ಪಕ್ಷಗಳೂ ಇದರ ಬಗ್ಗೆ ಧ್ವನಿ ಎತ್ತದೆ ಇರುವುದು ದುರಂತ. ಕರ್ನಾಟಕದಿಂದ ಅನುಕೂಲ ಪಡೆದು ರಾಜ್ಯದ ಜನತೆಗೆ ಚೂರಿ ಹಾಕುತ್ತಿರುವುದು ಖಂಡನೀಯ ಎಂದು ಕಿಡಿಕಾರಿದರು.

ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ವ್ಯಾಪಕ ವಿರೋಧದ ನಡುವೆಯೂ ಅಂದಿನ ಕರುಣಾನಿಧಿ ಸರ್ಕಾರ ಹೊಗೇನಕಲ್ ಯೋಜನೆಯನ್ನು ಜಾರಿಗೆ ತಂದು ಧರ್ಮಪುರಿ, ಕೃಷ್ಣಗಿರಿಗೆ ನೀರನ್ನು ಪೂರೈಸಿತು. ಕಾಂಗ್ರೆಸ್ ನಾಯಕರು ಮೇಕೆದಾಟು ಯೋಜನೆ ಜಾರಿಗೆ ಹೋರಾಟದ ನಾಟಕವಾಡಿದರು. ಆದರೀಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿದ್ದರೂ ಯೋಜನೆ ಜಾರಿಗೆ ಮುಂದಾಗಿಲ್ಲ. ತಮಿಳುನಾಡಿನ ಹೇಳಿಕೆಗೆ ಮೌನವಾಗಿರುವುದನ್ನು ನೋಡಿದರೆ ರಾಷ್ಟ್ರೀಯ ಪಕ್ಷಗಳು ಹೈಕಮಾಂಡ್ ಕೈಗೊಂಬೆಗಳೇ ಹೊರತು ಇವರಿಂದ ರಾಜ್ಯದ ಜನತೆಗೆ, ಅನ್ನದಾತರಿಗೆ ಕಿಂಚಿತ್ತೂ ಉಪಯೋಗವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಕೊಳ್ಳದ ಮತದಾರರು ನಿಮ್ಮ ಮನೆಯ ಬಾಗಿಲಿಗೆ ಬರುವ ಅಭ್ಯರ್ಥಿಗಳನ್ನು, ಮೊದಲು ಕಾವೇರಿ ಸಮಸ್ಯೆ ಬಗೆಹರಿಸಿ ನಂತರ ಮತಯಾಚಿಸಿ ಎಂದು ಒತ್ತಾಯಿಸಿ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್‌ಬಾಬು, ಗೋಪಿ, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜ್, ಅರವಿಂದ್, ಮದನ್, ಬೀಡಾಬಾಬು, ಹರೀಶ್, ಮಾದಪ್ಪ, ಸುನೀಲ್, ಸಿದ್ದರಾಮನಾಯಕ ಪಾಲ್ಗೊಂಡಿದ್ದರು.



ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ ಶಾಸಕ ತನ್ವೀರ್ ಸೇಠ್ ಅವರನ್ನು ಕಾಂಗ್ರೆಸ್ ಮುಖಂಡ ಡಾ. ಸುಶ್ರುತ್‌ಗೌಡ ಅಭಿನಂದಿಸಿದರು. ಈ ವೇಳೆ ಮುಖಂಡರಾದ ನಾಗಭೂಷಣ್ ತಿವಾರಿ, ಎಂ.ಎಸ್.ಮಹದೇವ್, ರೋಹಿತ್, ಶಫಿ ಯೋಗೇಶ್ ನಾಯಕ್ ಇನ್ನಿತರರಿದ್ದರು.

## ಕೇಂದ್ರದಿಂದ ಮಹಿಳಾ ಕಲ್ಯಾಣ ಕಾರ್ಯಕ್ರಮ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಮಾ.23(ಎಂಟಿವೈ)– ಕೇಂದ್ರ ಸರ್ಕಾರ ಮಹಿಳೆಯರ ಹಿತ ಕಾಯುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಮೈಸೂರು –ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬೆಂಬಲಿಸುವಂತೆ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮನವಿ ಮಾಡಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯವಿಲ್ಲದೆ ಮಹಿಳೆಯರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಆದರೆ, ಕೇಂದ್ರ ಸರ್ಕಾರ ಪ್ರತಿ ಮನೆಗೂ ಶೌಚಾಲಯ ನಿರ್ಮಿಸಿ ಕೊಡುವ ಯೋಜನೆ ಜಾರಿಗೊಳಿಸಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲೂ ಶೌಚಾಲಯ ನಿರ್ಮಿಸಲಾಗಿದ್ದು, ಮಹಿಳೆಯರು ಗೌರವದಿಂದ ಬದುಕುವಂತಾಗಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಉಜ್ವಲ ಯೋಜನೆಯಡಿ ಅಡುಗೆ ಅನಿಲ ವಿತರಿಸಲಾಗಿದೆ. ಪ್ರತಿ ಮನೆಗೆ ಕುಡಿಯುವ ನೀರನ್ನು ಪೂರೈಸಲಾಗಿದೆ. ವಸತಿಹೀನರಿಗೆ ಮನೆ ಮಂಜೂರು ಮಾಡಲಾಗಿದೆ. ಜನ್‌ಧನ್ ಯೋಜನೆಯಡಿ ಶೂನ್ಯ ಶುಲ್ಕದಲ್ಲಿ ಬ್ಯಾಂಕ್ ಖಾತೆ ತೆರೆಯಲಾಗಿದೆ. ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಲ್ಲಿ ರೈತರಿಗೆ ನೆರವು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಿ, ಕೇಂದ್ರದಲ್ಲಿ ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಪ್ರಧಾನಿ ಮಾಡಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರ ಮಹಿಳಾ ಘಟಕದ ಅಧ್ಯಕ್ಷೆ ರೇಣುಕಾ, ಮಾಜಿ ಉಪ ಮೇಯರ್ ಡಾ.ರೂಪ ಹಾಗೂ ಇನ್ನಿತರು ಇದ್ದರು.

## ಯದುವೀರರ ಬಗ್ಗೆ ಲಘುವಾಗಿ ಹೇಳಿಕೆ ನೀಡದಂತೆ ಲಕ್ಷ್ಮಣಗೆ ಬಿಜೆಪಿ ವಕ್ತಾರ ಮೋಹನ್ ಆಗ್ರಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ವಕ್ತಾರ ಮೋಹನ್ ಸುದ್ದಿಗೋಷ್ಠಿ ನಡೆಸಿದರು.

ಮೈಸೂರು,ಮಾ.23(ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಬಗ್ಗೆ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಹಗುರವಾಗಿ ಹೇಳಿಕೆ ನೀಡದಂತೆ ಬಿಜೆಪಿ ವಕ್ತಾರ ಮೋಹನ್ ಆಗ್ರಹಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚುನಾವಣೆಗಳು ಹಬ್ಬವಿದ್ದಂತೆ, ಅದನ್ನು ಸಂಭ್ರಮಿಸಬೇಕು. ಯಾರೇ ಅಭ್ಯರ್ಥಿಗಳಾದರೂ ಜಂಟಲ್‌ಮನ್‌ರಂತೆ ವರ್ತಿಸಬೇಕು. ಆದರೆ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರು ಅರಮನೆ ಹಿತ ಕಾಯುವವರು ಬೇಕೋ, ಜನ ಸಾಮಾನ್ಯರ ಮನೆ ಕಾಯೋರು ಬೇಕೋ ಎಂದು ನೀಡಿರುವ ಹೇಳಿಕೆ ಖಂಡನೀಯ. ಮೈಸೂರು ರಾಜಮನೆತನದ ಕೊಡುಗೆ ಅಪಾರ. ಈ ಹಿನ್ನೆಲೆಯಲ್ಲಿ ಹಗುರವಾದ ಹೇಳಿಕೆ ನೀಡಬಾರದು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಸೋಲಿನ ಭೀತಿಯಿಂದ ಹತಾಶರಾಗಿದ್ದಾರೆ. ನಾಲ್ಕು ಚುನಾವಣೆಯಲ್ಲಿ ಸೋತಿದ್ದೇನೆ ಎಂದು ಸಾವಿನ ಮಾತನಾಡಿದ್ದಾರೆ. ಹಬ್ಬದ ಸಂಭ್ರಮದಲ್ಲಿ ಸಾವಿನ ಮಾತಾಡಿದ್ದು ಅವರ ಹತಾಶೆಯನ್ನು ತೋರಿಸುತ್ತದೆ. ಚುನಾವಣೆಯನ್ನು ನಾವು ಮಾಡಿದ ಕೆಲಸದ ಮೇಲೆ ಎದುರಿಸಬೇಕು. ನಾವು ಇಂತಹ ಸಾಧನೆ ಮಾಡಿದ್ದೇವೆ ಮತ ನೀಡಿ ಎಂದು ಕೇಳಬೇಕು. ಆದರೆ, ಲಕ್ಷ್ಮಣ ಅವರು ನಾಲ್ಕು ಚುನಾವಣೆ ಸೋತಿರುವುದಾಗಿ ಹೇಳುತ್ತಿದ್ದಾರೆ. ಒಕ್ಕಲಿಗ ಜನಾಂಗದವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂದಿದ್ದಾರೆ. ಈ ಹಿಂದೆ ಬಿಜೆಪಿ ಒಕ್ಕಲಿಗ ಸಮುದಾಯ ಪ್ರತಾಪ ಸಿಂಹ ಅವರಿಗೂ ಟಿಕೆಟ್ ನೀಡಿತ್ತು ಎನ್ನುವುದನ್ನು ಮರೆಯಬಾರದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೃಪಾಕಟಾಕ್ಷದಿಂದ ಟಿಕೆಟ್ ಪಡೆದಿರುವ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ರಾಷ್ಟ್ರೀಯ ಪಕ್ಷದ ಅಭ್ಯರ್ಥಿಯಂತೆ ವರ್ತಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಹೆಚ್.ಜಿ.ಗಿರಿಧರ್, ಮಹೇಶ್ ರಾಜೇ ಅರಸ್ ಸೇರಿದಂತೆ ಇನ್ನಿತರರು ಇದ್ದರು.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನೋಟರೀಸ್ ಅಸೋಸಿಯೇಷನ್ ವತಿಯಿಂದ ಮೈಸೂರಿನ ನ್ಯಾಯಾಲಯದ ವಕೀಲರ ಸಂಘದ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಚಂದ್ರಶೇಖರಯ್ಯ ಅವರು ನೋಟರಿ ಕೈಪಿಡಿ ಬಿಡುಗಡೆ ಮಾಡಿದರು. (ಎಡದಿಂದ) ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಶೀಘ್ರಗತಿ 'ನ್ಯಾಯಾಲಯದ ನ್ಯಾಯಧೀಶರಾದ ಶೈಮಾ ಕಮ್ರೋಜ್, ಡಿ.ಪುಟ್ಟಸ್ವಾಮಿ, ಬಿ.ಎಸ್.ಪ್ರಶಾಂತ್, ಪಿ.ರಮೇಶ್, ಲ. ಡಾ. ಎನ್.ಕೃಷ್ಣೇಗೌಡ, ಎಸ್.ಎಸ್.ಪಾಟೀಲ್, ಸಿ.ಎಸ್.ಚಿಕ್ಕಣ್ಣೇಗೌಡ, ಎಸ್.ಉಮೇಶ್ ಲ. ಸುಬ್ರಹ್ಮಣ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.

## ಮೈಸೂರು ಮುದ್ರಣಾಲಯದ ನಿವೃತ್ತ ಮೇಲ್ವಿಚಾರಕ ಪುರುಷೋತ್ತಮರಿಗೆ ಬೀಳ್ಕೊಡುಗೆ

ಮೈಸೂರು,ಮಾ.23(ಎಂಟಿವೈ)– ಯಾವುದೇ ಕ್ಷೇತ್ರದ ವೃತ್ತಿಯಾದರೂ ಸರಿ ದಕ್ಷತೆಯಿಂದ ಕಾರ್ಯನಿರ್ವಹಿಸಿ, ಹೆಸರು ಉಳಿಸಿಕೊಳ್ಳಬೇಕೆಂದು ಕರ್ನಾಟಕ ವಸತಿ ಶಿಕ್ಷಣ ಶಾಲೆಗಳ ಸಂಘದ ಸಲಹೆಗಾರ, ಪ್ರಗತಿಪರ ಚಿಂತಕ ಡಾ.ಎಸ್. ತುಕಾರಾಂ ಸಲಹೆ ನೀಡಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾ ಭವನದಲ್ಲಿ ಕಲ್ಪತರು ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಮೇಲ್ವಿಚಾರಕ ಪುರುಷೋತ್ತಮ ಅವರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ದಕ್ಷತೆಯಿಂದ ಕೆಲಸ ಮಾಡುವ ನೌಕರರ ಸಂಖ್ಯೆ ಕ್ಷೀಣಿಸುತ್ತಿದೆ. ಆದರೂ, ಕೆಲವರು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿರುವ ನಿದರ್ಶನ ನಮ್ಮ ಮುಂದೆ ಇದೆ. ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಮೇಲ್ವಿಚಾರಕ ಪುರುಷೋತ್ತಮರದ್ದು ವೃತ್ತಿ ಜೀವನದಲ್ಲಿ ಪರಿಪೂರ್ಣತೆ ಇರುವ ವ್ಯಕ್ತಿತ್ವ, ಸಂಯಮ, ಶಿಸ್ತು, ಸಂಬಂಧ ಇಟ್ಟುಕೊಂಡು ಕೆಲಸ ಮಾಡಿದ್ದಾರೆ. ಇಂಥವರಿಂದ ಸಂಸ್ಥೆಗೂ, ವ್ಯಕ್ತಿಗೂ ಗೌರವ ಎಂದು ಅವರು ಹೇಳಿದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾ ಭವನದಲ್ಲಿ ಕಲ್ಪತರು ಚಾರಿಟಬಲ್ ಟ್ರಸ್ಟ್ ವತಿಯಿಂದ ಮಯೋ ನಿವೃತ್ತರಾದ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಮೇಲ್ವಿಚಾರಕ ಪುರುಷೋತ್ತಮ ಅವರನ್ನು ಪತ್ನಿಯೊಂದಿಗೆ ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಹೃದ್ರೋಗ ತಜ್ಞ ಡಾ.ವಿ.ಲಕ್ಷ್ಮೀನಾರಾಯಣ ಮಾತನಾಡಿ, ಪುರುಷೋತ್ತಮ ಮತ್ತು ಗೆಳೆಯರು ಕಲ್ಪತರು ಟ್ರಸ್ಟ್ ಮೂಲಕ ಆದಿವಾಸಿಗಳ ಸೇವೆಗೆ ಮುಂದಾಗಿದ್ದಾರೆ. ಅದು ಆದರ್ಶವಾದುದು. ಮೈಸೂರು ವಿವಿ ಮುದ್ರಣಾಲಯದಲ್ಲಿ ಕರಡು ತಿದ್ದುವವರಾಗಿ ಮುದ್ರಾರಾಕ್ಷಸನನ್ನು ಗೆದ್ದಿದ್ದಾರೆ. ವಿಶಿಷ್ಟವಾಗಿ ಸರಸ್ವತಿಯ ಸೇವೆ ಮಾಡಿ, ಕನ್ನಡ ಸಾರಸ್ವತ ಲೋಕಕ್ಕೆ ಸಾರ್ಥಕ ಸೇವೆ ಸಲ್ಲಿಸಿದ್ದಾರೆ ಎಂದು ಶ್ಲಾಘಿಸಿದರು.

ಹಿರಿಯ ಸಾಹಿತಿ ಪ್ರೊ.ಸಿ. ನಾಗಣ್ಣ ಮಾತನಾಡಿ, ಗುರು– ಶಿಷ್ಯರ ಸಂಬಂಧಕ್ಕೆ ಪುರುಷೋತ್ತಮ ಅತ್ಯುತ್ತಮ ಉದಾಹರಣೆ. ಕರಡು ತಿದ್ದುವ ವಿಷಯದಲ್ಲಿ ಅವರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ ಎಂದರು.

ಹಂಪಿ ಕನ್ನಡ ವಿವಿಯ ಪ್ರಾಧ್ಯಾಪಕ ಡಾ. ಚಿನ್ನಸ್ವಾಮಿ ಸೋಸಲೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ.ಡಿ.ಕೆ.ರಾಜೇಂದ್ರ, ಮೈಸೂರು ವಿವಿ ಮುದ್ರಣಾಲಯ ನಿರ್ದೇಶಕ ಎಸ್.ಸತೀಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಶಾಸ್ತ್ರೀಯ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ನೀಲಗಿರಿ ಎಂ. ತಳವಾರ್, ನರಸಿಂಗ ದೇಸಾಯಿ, ಮಾತನಾಡಿದರು. ಕಲ್ಪತರು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ.ಸುರೇಶ್ ಅಮ್ಮಸಂದ್ರ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಂ, ಟ್ರಸ್ಟಿನ ಪದಾಧಿಕಾರಿಗಳಾದ ಕೆಂಡಗಣ್ಣಯ್ಯ, ಮಹಿಮಾ ಶ್ರೀನಿವಾಸ್, ನವೀನ್, ಲಕ್ಷ್ಮೀಕಾಂತ್, ನಿವೃತ್ತ ನೌಕರರಾದ ಶೇಖರ್, ಮುಖಂಡರಾದ ಎಂಸಿ. ಮಹಾಲಿಂಗು, ಶಿವಸ್ವಾಮಿ, ಎಸ್. ಶಿವಪ್ಪ, ಚಿಕ್ಕಂದಾನಿ ಉಪಸ್ಥಿತರಿದ್ದರು. ಜಾನಪದ ಗಾಯಕ ಅಮ್ಮ ರಾಮಚಂದ್ರ ವಿವಿ ಶತಮಾನೋತ್ಸವದ ಧ್ಯೇಯ ಗೀತೆ ಹಾಡಿದರು. ಡಾ. ಉಮೇಶ್ ಕಾರ್ಯಕ್ರಮ ನಿರೂಪಿಸಿದರು. ಜಗದೀಶ್ ಆರ್. ತುಂಗಾ ಸ್ವಾಗತ, ಪಿ. ಕುಮಾರ್ ವಂದಿಸಿದರು.

# ಮನೆ ನಮ್ದು...! ರಸ್ತೆ-ಚರಂಡಿಗಳೂ ನಮ್ಮವೇ...!!





ಎ.ಪಿ.ಪ್ರಶಾಂತ್‌ಕುಮಾರ್
ಮೊ: 9844859950

ರೀ ಮನೇಲಿ ಕಸ ಹಾಕುವ ಬಕೆಟ್ ತುಂಬಿದೆ. ಹೌದೇನೇ, ಇವತ್ತು ರಾತ್ರಿ ಊಟ ಆದ ಮೇಲೆ, ಆ ಕಸವನ್ನೆಲ್ಲಾ ಒಂದು ಪ್ಲಾಸ್ಟಿಕ್ ಕವರ್‌ಗೆ ಹಾಕೋ, ಹಾಗೆ ಒಂದು ರೌಂಡ್ ವಾಕ್ ಹೋಗಿ ಅಲ್ಲೆ ರಸ್ತೆ ಪಕ್ಕದಲ್ಲಿ ಬಿಸಾಕಿ ಬರೋಣಾ. ವಾಕೂ ಆಗುತ್ತೆ, ನಮ್ಮನೆ ಕಸನೂ ಕ್ಲೀನ್ ಆಗುತ್ತೆ.

ಮುಂದಿನ ವಾರ, ರೀ ಮತ್ತೆ ಕಸದ ಬಕೆಟ್ ತುಂಬಿದೆ. ಆದರೆ ಇವತ್ತು ನಿಮ್ಮ ಜೊತೆ ವಾಕ್ ಬರೋಕೆ ಟೈಮ್ ಇಲ್ಲ, ಮನೇಲಿ ತುಂಬಾ ಕೆಲ್ಸ ಇದೆ. ಡೋಂಟ್ ವರಿ ಕಣೇ ನೀನು ಕಸನಾ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕೊಡು, ನಾನು ಬೈಕ್‌ನಲ್ಲಿ ಹೋಗಿ ಅಲ್ಲೇ ರಸ್ತೆ ಬದಿಯಲ್ಲೇ ಒಲಂಪಿಕ್‌ನಲ್ಲಿ ಭರ್ಜಿ ಎಸೆತದ ತರ ನಿಖರವಾಗಿ ಕಸದ ಕವರ್ ಎಸೆದು ಬರ್ತೀನಿ.

ಮರುದಿನ, ಅದೇ ರಸ್ತೆಯಲ್ಲಿ ಹೋಗುತ್ತಿರಬೇಕಾದರೆ, ಥೂ ಏನ್ ಇದು, ಈ ರಸ್ತೆ ಇಷ್ಟೊಂದು ಗಲೀಜಾಗಿದೆ, ತುಂಬಾ ಕೆಟ್ಟ ವಾಸನೆ ಬರ್ತಿದೆ. ನಗರ ಪಾಲಿಕೆಯವ್ರು ಸರಿಯಾಗಿ ಕೆಲ್ಸ ಮಾಡ್ತಿಲ್ಲ ಅಂತ ಗೊಣಗಾಡುತ್ತಾ ಮುಂದೆ ಹೋಗ್ತಾ ಇರೋದು. ಏನ್ರೀ ನಿನ್ನೆ ಮಾಡಿದ್ದ ಅಡುಗೆ ಸ್ವಲ್ಪ ಮಿಕ್ಕಿದೆ, ತುಂಬಾ ಸ್ಮೆಲ್ ಬರ್ತಿದೆ. ಮನೆ ಹೊರಗೆ ಹೋಗಿ ಬೀದಿ ನಾಯಿಗಳ ಕರೆಯೋಕೆ ನನ್ ಕೈಯಲ್ಲಿ ಆಗಲ್ಲ ಏನ್ ಮಾಡ್ಲಿ?

ವೆರಿ ಸಿಂಪಲ್ ಕಣೇ, ಮಿಕ್ಕಿರೋ, ಹಳಸಿರೋದನೆಲ್ಲಾ ತೆಗೆದುಕೊಂಡು ಹೋಗಿ ಅಲ್ಲೇ ಮನೆ ಮುಂದಿನ ಅಥವಾ ಹಿಂದಿನ ಚರಂಡಿಯಲ್ಲಿ ಹಾಕಿ ಬಾ. ಕೆಲಸ ಮುಗೀತು. ಮನೆ ಘಂ ಅಂತು, ಚರಂಡಿ ಗಬ್ ಆಯ್ತು ಅಲ್ಲವಾ?

ಅಪ್ಪ ನಮ್ಮ ಪಿಂಕಿ ನಾಯಿ ತುಂಬಾ ಕೂಗಾಡ್ತಿದೆ. ಪಾಪ ಏನಾಗಿದೆಯೋ ಏನೋ ನಮ್ಮ ಪಿಂಕಿಗೆ. ಮಗನೇ, ಮಗಳೇ ಪಿಂಕಿಯನ್ನಾ ನಮ್ಮನೆಯಿಂದ ಸ್ವಲ್ಪ ದೂರ ಇರೋ ರಸ್ತೆಗೆ ವಾಕಿಂಗ್ ಕರ್‍ಕೊಂಡು ಹೋಗು. ಪಿಂಕಿ ರೋಡ್ ಪಕ್ಕದಲ್ಲಿ ಅಥವಾ ಅಲ್ಲಿ ಜಾಗ ಇಲ್ಲ ಅಂದ್ರೆ ರೋಡ್ ಮಧ್ಯದಲ್ಲಿ ತನ್ನ ಬಾಧೆಯನ್ನು ತೀರಿಸಿಕೊಂಡು ಅದರ ಹೊಟ್ಟೆ ಕ್ಲೀನ್ ಮಾಡ್ಕೋಳುತ್ತೆ. ಆಮೇಲೆ ಮನೆಗೆ ಕರ್ಕೊಂಡು ಬಾ.

ಈಗ ತಮಗೆ ಏನ್ ಅನಿಸ್ತಿದೆ. ಮುಖದಲ್ಲಿ ಸಣ್ಣ ಬೇಜಾರಿನ, ದೊಡ್ಡ ನಗು ಬರ್ತಿದೆ ಅಲ್ಲವಾ? ಹೇ ಈ ತರ ನಾನು ಒಂದ್ಸಲಾ ಮಾಡಿದ್ದೀನಲ್ಲಾ. ಇತ್ತೀಚೆಗೆ ತುಂಬಾ ಸಲ ಮಾಡಿದ್ದೀನಲ್ಲಾ. ಈ ಸಿಹಿ ಕಹಿ ಘಟನೆಗಳು ನಮ್ಮ ಏರಿಯಾದ, ನಮ್ಮ ನಗರದ ಸೌಂದರ್ಯವನ್ನು ದಿನದಿಂದ ದಿನಕ್ಕೆ ವಿರೂಪಗೊಳಿಸುತ್ತಿರುವುದಕ್ಕೆ ಕಾರಣ ಆಗ್ತಿವೆ ಅಲ್ಲವೇ?

ಮನುಷ್ಯನು ಸಂಘ ಜೀವಿ. ಅವನದ್ದು ಸಾಮಾಜಿಕ ಜೀವನ. ಕಾರಣ ನಾವೆಲ್ಲರೂ ಬದುಕು ಸವೆಸುತ್ತಿರುವುದು ಸಮಾಜದಲ್ಲಿ. ಹಾಗಾದರೆ ಸಮಾಜವೆಂದರೆ ಏನು? ನಮ್ಮ ಮನೆ ಮಾತ್ರವಲ್ಲದೆ, ನಮ್ಮ ಮನೆ ಸುತ್ತಮುತ್ತ ಇರುವ ರಸ್ತೆ, ಚರಂಡಿ, ದೀಪದ ಕಂಬಗಳು, ಅಕ್ಕ ಪಕ್ಕದ ಮನೆಗಳು, ಪಾರ್ಕ್, ಗಿಡ ಮರಗಳು, ಪ್ರಾಣಿ ಪಕ್ಷಿಗಳು, ನೆಲ ಜಲ ವಾಯು ಇತ್ಯಾದಿ. ನಮ್ಮ ಮನೆಯಲ್ಲಿ ನಾವು ನೆಮ್ಮದಿಯಿಂದ ಜೀವನ ನಡೆಸಬೇಕೆಂದರೆ ನಮ್ಮ ಸುತ್ತಮುತ್ತಲಿನ ಪರಿಸರವೂ ಸ್ವಚ್ಛವಾಗಿ, ಸುಂದರವಾಗಿ ಇರಬೇಕಲ್ಲವೇ? ನಮ್ಮ ಮನೆ ಮುಂದಿನ ರಸ್ತೆಯ ಪಕ್ಕದಲ್ಲಿ ಕಸ ತುಂಬಿ ತುಳುಕುತ್ತಿದ್ದರೆ ಅದರಿಂದ ಮನಸ್ಸಿಗೆ ಆಹ್ಲಾದಕರವಾಗುತ್ತದೆಯೇ? ನಮ್ಮ ಮನೆ ಪಕ್ಕದ ಚರಂಡಿಯಿಂದ ಗಬ್ಬು ನಾರುವ ಕೆಟ್ಟ ವಾಸನೆ ಬರುತ್ತಿದ್ದರೆ ಮನೆಯಲ್ಲಿ ಸಂತೋಷದಿಂದ ಇರಲು ಸಾಧ್ಯವೆ?

ತಿಳಿದೋ ತಿಳಿಯದೆಯೋ ಈ ಎಲ್ಲಾ ಕೆಟ್ಟ ಕೊಡುಗೆಗಳನ್ನು ನಾವು ದಿನನಿತ್ಯವೂ ನಮ್ಮನ್ನು ಪೊರೆದು ಪೋಷಿಸುತ್ತಿರುವ ಪ್ರಕೃತಿಗೆ ನೀಡುತ್ತಿರೋದು ಸರಿಯೇ? ಪರಿಸರವೇ ಹಾಳಾಗುತ್ತಿರುವಾಗ ಅದರ ಮೇಲೆ ಅತೀವವಾಗಿ ಅವಲಂಭಿತವಾಗಿರುವ ಮನುಕುಲ ಉಳಿಯಲು ಸಾಧ್ಯವೇ?

ಕೂಡಿ ಬಾಳಿದರೆ ಸ್ವರ್ಗ ಸುಖಃ ಎಂಬ ನಾಣ್ಣುಡಿಯಂತೆ, ಮನುಷ್ಯ ನಿಸರ್ಗಕ್ಕೆ ಪೂರಕವಾಗಿರುವಂತೆ ಬದುಕಬೇಕೇ ವಿನಃ ಮಾರಕವಾಗುವಂತೆ ಅಲ್ಲ. ಕಾರಣ, ಭೂಮಿಯ ಮೇಲಿರುವ ಪ್ರತಿಯೊಂದಕ್ಕೂ ಇಂತಿಷ್ಟೇ ಸಹನೆ, ತಾಳ್ಮೆ ಎಂಬ ಗುಣವಿದೆ. ಆ ಸಹನೆ, ತಾಳ್ಮೆಯ ಕಟ್ಟೆ ಒಡೆದರೆ ಅದರಿಂದಾಗುವ ವಿಕೋಪ ಸಹಿಸಲಸಾಧ್ಯ. ಪರಿಸರಕ್ಕಂತೂ ಮನುಕುಲದ ಮೇಲೆ ಅಪಾರ ಕಾಳಜಿ, ಅತೀವ ಪ್ರೀತಿ ಇದೆ. ಆದರೆ, ನಾವು ಈ ವಿಶ್ವಾಸವನ್ನು ನಮ್ಮ ಒಳ್ಳೆಯ ಕೆಲಸ ಕಾರ್ಯಗಳಿಂದ ಉಳಿಸಿಕೊಳ್ಳಬೇಕು ಅಷ್ಟೇ.

ರಸ್ತೆಯ ಅಕ್ಕ-ಪಕ್ಕ ಕಸ ಹಾಕಿ ಗಲೀಜು ಮಾಡುವ ಅದೇ ರಸ್ತೆಯ ಮೇಲಲ್ಲವೇ ನಮ್ಮ ಕೋಮಲ ಪಾದಗಳು ನಡೆದಾಡುವುದು. ಅದೇ ರಸ್ತೆಯ ಮೇಲಲ್ಲವೇ ಮನೆಯ ಸದಸ್ಯನಂತಿರುವ ನಮ್ಮ ಕಾರು, ಬೈಕು ಇತರೇ ವಾಹನಗಳು ಓಡಾಡುವುದು. ನಮ್ಮ ಮನೆಯ ಒಳಗಡೆ ಅಲ್ಲವಲ್ಲ.

ಅದೇ ರೀತಿ, ನಮ್ಮ ಮನೆಯ ಮುಂದೆ ಹಿಂದಿರುವ ಚರಂಡಿಗಳೇ ತಾನೇ ನಮ್ಮ ಮನೆಯ ಕೊಳೆಯನ್ನು ಹೊತ್ತೊಯ್ಯುವುದು, ನಮ್ಮ ಮನೆಯನ್ನು ಸ್ವಚ್ಛವಾಗಿರುವಂತೆ ನೋಡಿಕೊಳ್ಳುವುದು. ಒಂದು ವೇಳೆ ಚರಂಡಿಯೇ ಇಲ್ಲದಿದ್ದರೆ ನಮ್ಮ ಮನೆಗಳ ಹಾಗೂ ನಮ್ಮಗಳ ಸ್ಥಿತಿ ಊಹಿಸಿಕೊಳ್ಳಿ.

ಹಾಗಾದರೆ ಇದಕ್ಕೆ ಪರಿಹಾರವೇನು? ಪರಿಹಾರ ಅದಾಗಲೇ ನಿಮ್ಮ ನಮ್ಮ ಕೈಯ್ಯಲ್ಲೇ ಇದೆ. ಪ್ರಸ್ತುತ ಜಾರಿಯಲ್ಲಿಯೂ ಇದೆ. ವೆರಿ ಸಿಂಪಲ್. ನಮ್ಮ ಮನೆಯ ಕಸವನ್ನು ಕಸದ ವಾಹನಕ್ಕೆ ಮಾತ್ರವೇ ಹಾಕಬೇಕು. ಪ್ರತೀ ನಿತ್ಯವೂ ಅಥವಾ ವಾರಕ್ಕೆ ಎರಡು, ಮೂರು ಬಾರಿ ಬರುವ ಕಸವನ್ನು ಹೊತ್ತೊಯ್ಯುವ ಆಟೋ, ಟ್ರ್ಯಾಕ್ಟರ್ ಅಥವಾ ಲಾರಿಗಳಲ್ಲಿ ಹಾಕಲು ಮನಸ್ಸು ಮಾಡಿದರೆ ಅಷ್ಟೇ ಸಾಕು. ಅಯ್ಯೋ, ಆ ವಾಹನಗಳು ಬರುವ ಹೊತ್ತಲ್ಲಿ ನಾವ್ಯಾರು ಮನೆಯಲ್ಲಿ ಇರುವುದಿಲ್ಲವಲ್ಲ. ನೋ ಪ್ರಾಬ್ಲಂ. ನಿಮ್ಮ ಮನೆಯ ಕಸದ ಬುಟ್ಟಿಗಳನ್ನು ಮನೆಯ ಹೊರಗೆ ಇಡಿ ಸಾಕು, ಕಸದ ವಾಹನದ ಪೌರ ಕಾರ್ಮಿಕರೇ ನಿಮ್ಮ ಮನೆಯ ಕಸವನ್ನು ತೆಗೆದುಕೊಂಡು ಹೋಗುತ್ತಾರೆ. ಹಸಿ ಕಸ, ಒಣ ಕಸ ಇನ್ನಿತರೆ ತ್ಯಾಜ್ಯವನ್ನು ಬೇರ್ಪಡಿಸಿ ಇಟ್ಟರೆ ತುಂಬಾ ಒಳ್ಳೆಯದು. ಇದು ಪ್ರಜ್ಞಾವಂತ ನಾಗರಿಕರ ಪ್ರಬುದ್ಧ ಗುಣಲಕ್ಷಣ.

ನಂತರ ನಿಮ್ಮ ಮನೆಯ ಕಸ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಹೋಗಿ ಕಸದಿಂದ ರಸವೆಂಬಂತೆ ಕೆಲವೊಂದು ಕಸ ಉತ್ತಮ ಗೊಬ್ಬರವಾಗಿ, ಇನ್ನುಳಿದ ಕಸ ಪುನರ್ ಬಳಕೆಗೆ ಮುಂದಿನ ಹಂತಕ್ಕೆ ಹೋಗುತ್ತದೆ. ಇದರಿಂದ ಪರಿಸರವೂ ಉಳಿಯುತ್ತದೆ, ನಾವು ಉಳಿಯುತ್ತೇವೆ.

ಅದೇ ರೀತಿ ಚರಂಡಿಗಳನ್ನು ಸಹ ನಮ್ಮ ಮನೆಯ ಬಾತ್ ರೂಂನಂತೆಯೇ ನೋಡಿಕೊಳ್ಳಬೇಕಾಗಿದೆ. ಅನವಶ್ಯಕವಾಗಿ ಪ್ಲಾಸ್ಟಿಕ್ ಕವರ್‌ಗಳು, ಬಾಟಲ್‌ಗಳು, ಆಹಾರ ಪದಾರ್ಥಗಳು ಇನ್ನಿತರೇ ಘನ ತ್ಯಾಜ್ಯಗಳನ್ನು ಯಾವುದೇ ಕಾರಣಕ್ಕೂ ಚರಂಡಿಗೆ ಸುರಿಯದಂತೆ ಹಾಗೂ ಸೇರದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಚರಂಡಿಗಳು ಬ್ಲಾಕ್ ಆಗಿ, ಅದರಿಂದ ಆದ ಅನಾಹುತ ಅಪಾಯಗಳು ಎಲ್ಲರ ಕಣ್ಮುಂದಿವೆ. ಮುಖ್ಯವಾಗಿ ಮಳೆಗಾಲದಲ್ಲಿ.

ಆತ್ಮಿಯರೇ, ಮನೆ ಮಾತ್ರ ನಮ್ಮದಲ್ಲ. ನಮ್ಮ ಮನೆ ಸುತ್ತಮುತ್ತಲಿನ ರಸ್ತೆ, ಚರಂಡಿ, ಪಾರ್ಕ್, ವಿದ್ಯುತ್ ಕಂಬಗಳು ಎಲ್ಲವೂ ಸಹ ನಮ್ಮವೇ, ನಮ್ಮ ಸ್ವಂತದ್ದು. ಯಾಕೆಂದರೆ ಆ ಎಲ್ಲವನ್ನು ನಿರ್ಮಿಸಿರುವುದು ನಾವೆಲ್ಲರೂ ಸರ್ಕಾರಕ್ಕೆ ನೀಡುತ್ತಿರುವ ತೆರಿಗೆಯ ಹಣದಿಂದಲೇ. ಪ್ರತೀ ವಸ್ತುಗಳನ್ನು ಕೊಂಡಾಗ ನಾವು ಸರ್ಕಾರಕ್ಕೆ ಇಂತಿಷ್ಟೇ ತೆರಿಗೆಯನ್ನು ನೀಡುತ್ತೇವೆ. ಇದರೊಂದಿಗೆ, ಆದಾಯ ತೆರಿಗೆ, ಆಸ್ತಿ ತೆರಿಗೆ, ಕಂದಾಯ, ವಿವಿಧ ಸುಂಕಗಳು ಮುಂತಾದವು. ಹಾಗಾಗಿ, ನಮ್ಮ ದುಡ್ಡಿನಿಂದಲೇ ಸರ್ಕಾರ ಎಲ್ಲವನ್ನೂ ನಿರ್ಮಿಸುತ್ತಿರುವುದು. ಅಂತಾದ ಮೇಲೆ ನಮ್ಮ ಸ್ವಂತ ಮನೆಯನ್ನು ನೋಡಿಕೊಳ್ಳುವ ರೀತಿಯೇ ರಸ್ತೆ, ಚರಂಡಿ, ಪಾರ್ಕ್ ಎಲ್ಲವನ್ನು ನೋಡಿಕೊಳ್ಳಬೇಕಲ್ಲವೇ? ಕಾಲ ಮಿಂಚಿಲ್ಲ. ಇನ್ನಾದರೂ ಜಾಗೃತರಾಗೋಣ. ಮನೆಯು ನಮ್ದೇ, ರಸ್ತೆ ಚರಂಡಿಯೂ ನಮ್ದೇ.





## ಮಕ್ಕಳ ಚಿತ್ರಕಥೆ

### ಅಪ್ಪಾ, ನನಗೆ ಈ ನಾಯಿ ಮರಿಯನ್ನೇ ಕೊಡಿಸಿ...!

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ಒಂದು ದಿನ ಹತ್ತು ವರ್ಷದ ಬಾಲಕ ತನ್ನ ತಂದೆಗೆ ಒಂದೇ ಸಮನೆ ತನಗೊಂದು ನಾಯಿ ಕೊಡಿಸುವಂತೆ ಹಠ ಮಾಡುತ್ತಿದ್ದ. ಮಗನ ಆಸೆ ತಿರಸ್ಕರಿಸಲು ತಂದೆಗೆ ಮನಸ್ಸಾಗಲಿಲ್ಲ. ತಂದೆ ಮಗನನ್ನು ಪೇಟೆಗೆ ಕರೆದುಕೊಂಡುಹೋದ. ಅಲ್ಲಿ ನಾಯಿ ಅಂಗಡಿ ಸಿಕ್ಕಿತು.




ಅಲ್ಲಿ ನೂರಾರು ಬೇರೆ ಬೇರೆ ತಳಿಯ ಜಾತಿ ನಾಯಿಮರಿಗಳಿದ್ದವು.. ಆದರೆ ಒಂದು ನಾಯಿಮರಿಯನ್ನು ಮಾತ್ರ ಪ್ರತ್ಯೇಕವಾಗಿ ಇಡಲಾಗಿತ್ತು. ಆ ಬಾಲಕ ಆ ನಾಯಿಮರಿ ಬಳಿ ಹೋಗಿ ನಿಂತು ಅದನ್ನು ತದೇಕಚಿತ್ತದಿಂದ ನೋಡುತ್ತಿದ್ದ.




ಆ ಅಂಗಡಿಯ ಮಾಲೀಕ ಸನಿಹ ಬಂದು "ಮಗೂ, ನನ್ನ ಅಂಗಡಿಯಲ್ಲಿ ನೂರಾರು ಒಳ್ಳೆ ನಾಯಿಮರಿಗಳಿವೆ. ಅವೆಲ್ಲವನ್ನೂ ಬಿಟ್ಟು ಕಾಲು ಸರಿಯಿಲ್ಲದ ಈ ನಾಯಿಮರಿಯನ್ನೇಕೆ ನೋಡುತ್ತಿದ್ದೀಯೆ...?" ಎಂದು ಕೇಳಿದ.



"ಯಾಕೋ ಈ ನಾಯಿಮರಿ ನನಗೆ ತುಂಬ ಇಷ್ಟವಾಯಿತು...!" ಎಂದ ಬಾಲಕ. ಅದಕ್ಕೆ ಅಂಗಡಿಯ ಮಾಲೀಕ,"ಈ ನಾಯಿಯ ಒಂದು ಕಾಲು ಹುಟ್ಟಿದಂದಿನಿಂದಲೇ ಸರಿ ಇಲ್ಲ, ಅದು ಎಂದೆಂದಿಗೂ ಸರಿಯಾಗದು...ಸಾಯಿಸಬಾರದೆಂಬ ಕಾರಣಕ್ಕೆ ಅದನ್ನು ಇಲ್ಲಿ ಇಟ್ಟುಕೊಂಡಿದ್ದೇನೆ ಅಷ್ಟೆ...!" ಎಂದ.



ಈ ಮಾತಿನಿಂದ ಬಾಲಕನಿಗೆ ಬಹಳ ಬೇಸರವಾಯಿತು. ತನ್ನ ತಂದೆಯನ್ನು ಕರೆದು, ಈ ನಾಯಿ ಮರಿಯೇ ಬೇಕೆಂದು ಹಠ ಹಿಡಿದ. ತಂದೆಯೂ ಅವನಿಗೆ ಹೇಳುವಷ್ಟು ಹೇಳಿದ. ಆದರೆ ಮಗ ಕೇಳಲಿಲ್ಲ. ಅಂಗಡಿಯ ಮಾಲೀಕನೂ "ಈ ಕುಂಟು ನಾಯಿಮರಿ ಮೇಲೇಕೆ ಇಂತಹ ಪ್ರೀತಿ...? ಬೇರೆಯದನ್ನು ಖರೀದಿಸಬಾರದೇ..?" ಎಂದು ಪರಿಪರಿಯಾಗಿ ಬೇಡಿಕೊಂಡ.



ಆಗ ಆ ಬಾಲಕ ತನ್ನ ಪ್ಯಾಂಟನ್ನು ಮೇಲಕ್ಕೆತ್ತಿ "ಈ ಪುಟ್ಟ ನಾಯಿಮರಿ ಕಾಲು ಹೇಗೋ, ನನ್ನ ಕಾಲೂ ಹಾಗೇ...ಅದು ಎಂತಹ ನೋವು ಸಂಕಟ ಅನುಭವಿಸುತ್ತಿರಬಹುದೋ....ಅಂಥದೇ ನೋವನ್ನು ನಾನು ಸಹ ಅನುಭವಿಸುತ್ತಿದ್ದೇನೆ. ಅದರ ದುಃಖ, ವೇದನೆ ಏನೆಂಬುದು ನನಗೆ ಗೊತ್ತು....ನನಗೆ ಇದಕ್ಕಿಂತ ಉತ್ತಮ ಸಂಗಾತಿ ಬೇರೊಂದು ಇರಲಾರದು...!" ಎಂದ. ಈ ಮಾತನ್ನು ಕೇಳಿ ತಂದೆಗೆ ದುಃಖ ತಡೆದುಕೊಳ್ಳಲಾಗಲಿಲ್ಲ. ಅಂಗಡಿ ಮಾಲೀಕನ ಕಣ್ಣುಗಳೂ ತೇವಗೊಂಡವು.



## ವಾರಭವಿಷ್ಯ

24.03.2024 ರಿಂದ 30.03.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೀನ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ-ಕುಂಭ, ಬುಧ-ಮೇಷ, ಗುರು-ಮೇಷ, ಶುಕ್ರ-ಕುಂಭ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಗುರಿ ಸಾಧಿಸಲು ಗುರು ಬೇಕು. ಗುರು ಬಲ ಇಲ್ಲದೆ ನಲುಗಿರುವ ನಿಮಗೆ ಯುಗಾದಿವರೆಗೆ ಕಾಯಬೇಕಾದ ಅನಿವಾರ್ಯತೆ ಇದೆ. ಕೃಷಿ ಕರ್ಮಗಳು ಉತ್ತಮವಾಗಿ ನಡೆಯುವುದು. ಅನಾಲೋಚಿತ ವಾಗ್ದಾನಗಳನ್ನು ಮಾಡಬೇಡಿ. ವಾರಾಂತ್ಯಕ್ಕೆ ಮನೆಗೆ ಅತಿಥಿ, ಅಭ್ಯಾಗತರ ಆಗಮನ, ಅವರ ಆದರಾತಿಥ್ಯಕ್ಕೆ ಹಣ ವ್ಯಯ ಜೊತೆಗೆ ಉಡುಗೊರೆಗಳಿಗೂ ಹಣ ವ್ಯಯ.

ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ-2

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಬರೀ ಕಷ್ಟ ಪಡುವುದರಿಂದಲೇ ಜಯವನ್ನು ಸಾಧಿಸಲಾಗುವುದಿಲ್ಲ. ದೈವ ಸಹಾಯವೂ ಬೇಕಾಗುತ್ತದೆ. ನಿಯಂತ್ರಣವಿಲ್ಲದ ಖರ್ಚುಗಳಿಂದ ಪರ್ಸ್ ಖಾಲಿಯಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಕುಂಠಿತವಾಗುವುದು. ವಾರದ ಉತ್ತರಾರ್ಧಕ್ಕೆ ಸಾಹಿತ್ಯ ಸಂಗೀತದ ಬಗ್ಗೆ ಒಲವು ಉಂಟಾಗುವುದು. ಸಾಮಾಜಿಕ ಸೇವೆ ಮಾಡಿ ಗೌರವಕ್ಕೆ ಪಾತ್ರರಾಗುವಿರಿ.

ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-6.

### ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸುಸಮಯವಾಗಿದೆ. ಹಿಂದೆ ಮಾಡಿದ್ದ ಹೂಡಿಕೆಗಳು ಲಾಭವನ್ನು ತಂದು ಕೊಡಲಿದೆ. ಅಮೂಲ್ಯ ಸಂಪತ್ತು ಗಳಿಸಲು ಗುರು ಬಲವಿದೆ. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ನಿಮ್ಮ ಉತ್ತಮ ಚಿಂತನೆಗಳಿಂದ ಜನಾನುರಾಗ ಗಳಿಸುವಿರಿ. ಕೃತ್ರಿಮ ಗೆಳೆಯರು ಹಾಗೂ ಅಸೂಯಾಪರರು ನಿಮ್ಮನ್ನು ದುರುಪಯೋಗಪಡಿಸಿಕೊಳ್ಳಬಹುದು.

ಶ್ರೀ ನಾರಾಯಣ ನಾಮಸ್ತುತಿ. ಶುಭ ಸಂಖ್ಯೆ-5

### ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಶುಭ ಫಲಗಳನ್ನು ಅನುಭವಿಸುವಿರಿ. ನಿಮ್ಮ ನಿರಂತರ ಪರಿಶ್ರಮ ಫಲವನ್ನು ನೀಡಲಿದೆ. ವ್ಯಾಪಾರ, ವ್ಯವಹಾರಗಳು ಲಾಭಪ್ರದವಾಗಿ ನಡೆಯುವುದು. ಮಹಿಳಾಮಣಿಯರು ದುಂದುವೆಚ್ಚ ಮಾಡುವರು. ಅಷ್ಟಮ ದೇವನ ಕಾರಣ ನಿಮ್ಮ ಮರ್ಯಾದೆಗೆ ಧಕ್ಕೆ ಉಂಟು ಮಾಡುವ ಕೆಲಸಕ್ಕೆ ಕೈ ಹಾಕದಿರಿ. ವಾರದ ಕಡೆಗೆ ಮಾನಸಿಕ ಅಸ್ಥಿರತೆ ಹಾಗೂ ಆರ್ಥಿಕ ನಷ್ಟ ಉಂಟಾಗಬಹುದು.

ಶ್ರೀ ದುರ್ಗಾ ಪರಮೇಶ್ವರಿ ಸ್ತುತಿ. ಶುಭ ಸಂಖ್ಯೆ-9

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ಗಾಳಿ ಬಂದಾಗ ತೂರಿಕೋ' ಎಂಬ ಗಾದೆ ಮಾತಿದೆ. ಅಂದರೆ ಸಮಯ ಅನುಕೂಲವಿದ್ದಾಗ ಕಾರ್ಯ ಪ್ರವೃತ್ತರಾಗಿ ಎಂದು. ಎಡರು-ತೊಡರುಗಳನ್ನು ಮೀರಿ ನಡೆಯಲು ಗ್ರಹಾನುಕೂಲವಿದೆ. ಹಲವರಿಗೆ ಮನೆಯ ಮುಂದೆ ಹಸಿರು ಚಪ್ಪರ ಹಾಕುವ ಯೋಗವಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಫಲತೆಯನ್ನು ಹೊಂದುವಿರಿ. ಪರೋಪಕಾರ ಬುದ್ಧಿಯಿಂದ ಸಾಮಾಜಿಕವಾಗಿ ಗೌರವಕ್ಕೆ ಪಾತ್ರರಾಗುವಿರಿ. ಪ್ರಯಾಣ ಸಮಯದಲ್ಲಿ ಎಚ್ಚರವಿರಿ.

ಶ್ರೀ ಹನುಮಾನ್ ದರ್ಶನ. ಶುಭ ಸಂಖ್ಯೆ-7

### ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ನೀವಂದುಕೊಂಡ ಕೆಲಸಗಳು ಆರಾಮದಾಯಕವಾಗಿ ನಡೆಯುವುದು. ಹಿರಿಯರ ಭೇಟಿಯಿಂದ ಜ್ಞಾನ ವೃದ್ಧಿಯಾಗುವುದು. ಹೊಸ ಸ್ನೇಹಿತರ ಪರಿಚಯವಾಗುವುದು. ರಾಹು-ಕೇತುಗಳು ಅಶುಭರಿದ್ದು ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಂಡರೆ ಉತ್ತಮ. ನಿಮ್ಮವರೇ ದುಃಖಕ್ಕೆ ಕಾರಣವಾಗಬಹುದು. ಸ್ವೇಚ್ಛಾಚಾರದಿಂದ ತೊಂದರೆಗೆ ಸಿಲುಕುವಿರಿ, ಜಾಗರೂಕರಾಗಿರಿ.

ಶ್ರೀ ಸತ್ಯನಾರಾಯಣ ವ್ರತಕಥೆ ಓದಿ. ಶುಭ ಸಂಖ್ಯೆ-1

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕಷ್ಟ ಅನುಭವಿಸಲು ತಯಾರಾದರೆ, ಸುಖ ತಾನಾಗಿಯೇ ಬರುತ್ತದೆ. ವಿಶ್ವಾಸಪಾತ್ರರ ಮಾರ್ಗದರ್ಶನ ದೊರೆಯುತ್ತದೆ. ಮನೋವಾಂಛಿತ ಕೆಲಸಗಳು ಸಾಕಾರರೂಪಕ್ಕೆ ಬರುವುದು. ದ್ವಿದಳ ಧಾನ್ಯ ಹಾಗೂ ಕಪ್ಪು ಧಾನ್ಯಗಳ ವ್ಯಾಪಾರಗಳು ಉತ್ತಮ ಗತಿಯಲ್ಲಿ ಸಾಗಿ ಧನಲಾಭವಾಗುವುದು. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ ಆಗುವುದು. ದೂರ ಪ್ರಯಾಣ ಸಮಯದಲ್ಲಿ ಜಾಗೃತರಾಗಿರಿ. ಕಳ್ಳಕಾಕರಿಂದ ಅನಾಹುತ ಆದೀತು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-3.

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ, ಯಾವುದೂ ಪ್ರಯೋಜನಕ್ಕೆ ಬರದು. ಹಣಕಾಸಿನ ವ್ಯವಹಾರವನ್ನು ಎಚ್ಚರಿಕೆಯಿಂದ ಮಾಡಿ, ಅನ್ಯಥಾ ನಷ್ಟವನ್ನು ಅನುಭವಿಸಬೇಕಾದೀತು. ಅತ್ಯಾತುರ ಮುಳುವಾಗಬಹುದು. 'ಮಾತೇ ಮುತ್ತು,' ದುಡುಕಿ ಮಾತನಾಡದಿರಿ. ಸಹೋದರರಲ್ಲಿ ಒಮ್ಮತದ ಕೊರತೆಯಿಂದ ಆಸ್ತಿ ವಿವಾದಗಳು ಬಗೆಹರಿಯದು. ವಾರಾಂತ್ಯಕ್ಕೆ ಚಂದ್ರಬಲದಿಂದ ಸ್ವಪ್ರಯತ್ನದಿಂದ ಕಾರ್ಯ ಸಾಧನೆ.

ಶ್ರೀ ಸಂಕಷ್ಟಹರ ಗಣಪತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಣ್ಣ ಕೈಗಾರಿಕಾ ಉದ್ದಿಮೆದಾರರಿಗೂ, ಟ್ರಾವೆಲ್ಸ್ ಸಂಸ್ಥೆಗಳಿಗೂ ವಿಶೇಷ ಧನಲಾಭವಿದೆ. ನ್ಯಾಯವಾದಿಗಳಿಗೆ ದೊಡ್ಡ ಕಕ್ಷಿಗಾರರ ಸಂಪರ್ಕ ನಂಬಿಕಸ್ಥ ಹಿರಿಯ ವ್ಯಕ್ತಿಯಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವುದು. ಹಲವರಿಗೆ ದವಾಖಾನೆಯಿಂದ ಬಿಡುಗಡೆ. ಮಗನಿಗೆ ಹೊಸ ನೌಕರಿ ದೊರೆಯುವ ಸಾಧ್ಯತೆ ಇರುತ್ತದೆ. ರೇಸು, ಜೂಜುಗಳಿಂದ ನಿರಾಸೆಯೇ ಸಿದ್ಧ.

ಶ್ರೀ ಗುರುಸ್ತುತಿ. ಶುಭ ಸಂಖ್ಯೆ-8

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಶುಭ ವಾರ್ತೆಯೊಂದು ಬರುವುದು. ನೂತನ ವಸ್ತ್ರಾಭರಣ, ವಾಹನ ಹೊಂದುವ ಯೋಗವಿದೆ. ವ್ಯಾಪಾರ ವ್ಯವಹಾರಗಳು ಮಂದಗತಿಯಲ್ಲಿ ಸಾಗುವುದು. ಬೇಸಾಯಗಾರರಿಗೆ ಸಂಕಷ್ಟದ ಪರಿಸ್ಥಿತಿ. ಪಶು ಕ್ರಯ-ವಿಕ್ರಯದಿಂದ ಧನ ನಷ್ಟ. ಕರ್ಮಕ್ಕೆ ತಕ್ಕಂತೆ ಫಲ, ಜಾಗ್ರತೆ ತಪ್ಪಿದರೆ ಜಾರುತ್ತೀರಾ. ಸುರಕ್ಷಿತವಾಗಿ ವಾಹನ ಚಲಿಸಿ. ಇತರರೂ ಸುರಕ್ಷಿತವಾಗಿರಲಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2.

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ಮನೋಕಾರಕ ಚಂದ್ರಗ್ರಹದ ದೃಷ್ಟಿಯಿಂದ ಮನೆಯಲ್ಲಿ ಹರುಷ ಉಲ್ಲಾಸಗಳು ಉಂಟಾಗಲಿದೆ. ದೂರ ಪ್ರಯಾಣಗಳಿಂದ ದೇಹಾಯಾಸವಾಗುವುದು. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ನಿರಾಸಕ್ತಿ ಉಂಟಾಗುವುದು. ಮದುವೆ ಮಾತುಗಳು ಸಫಲವಾಗದೆ ನಿರಾಸೆ. ಸಾಲಗಾರರ ಒತ್ತಡ ಇರುತ್ತದೆ. ತುಳಿಯುವವರು ಎಷ್ಟೇ ಜನ ಇದ್ದರೂ ಕಾಪಾಡಲು ಒಬ್ಬ ದೇವರಿದ್ದಾನೆ.

ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-6

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಗ್ರಹಗತಿಗಳು ಅನುಕೂಲವಿದ್ದಾಗ ನಿರ್ಮಲ ಚಿತ್ತರಾಗಿಯೂ, ಶ್ರದ್ಧೆಯಿಂದಲೂ ಮಾಡುವ ಕೆಲಸಗಳು ಫಲಪ್ರದವಾಗುವುದು. ವಿರೋಧಿಗಳ ಉಪಟಳ ಶಮನವಾಗುವುದು. ಬೃಹತ್ ಉದ್ದಿಮೆದಾರರಿಗೆ ವಿದೇಶಿ ಆರ್ಡರ್‌ಗಳು ಲಭ್ಯವಾಗುವುದು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಬಾಳ ಸಂಗಾತಿ ದೊರೆಯುವರು. ಹಿರಿಯರ ಹಿತವಚನದಿಂದ ಒಳಿತಾಗುವುದು. ಪಿತ್ತ ಪ್ರಕೋಪ ಉಲ್ಬಣಿಸಬಹುದು.

ಶ್ರೀ ದತ್ತ ಉಪಾಸನೆ. ಶುಭ ಸಂಖ್ಯೆ-5

ಮೈಸೂರು ಮಿತ್ರ



# ದೇಶದ ಭದ್ರತೆ, ಐಕ್ಯತೆಗೆ ಬಿಜೆಪಿ ಅನಿವಾರ್ಯ

## ಚಾ.ನಗರ ಮೀಸಲು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಅಭಿಪ್ರಾಯ

ತಿ.ನರಸೀಪುರ, ಮಾ.23– ದೇಶದ ಐಕ್ಯತೆಗಾಗಿ ಪ್ರಧಾನಿ ಮೋದಿ ವಿಕಸಿತ ಭಾರತದ ಕಲ್ಪನೆಯಡಿ ರೂಪಿಸಿರುವ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ 2042ರ ವೇಳೆಗೆ ದೇಶವನ್ನು ಸುಭದ್ರ ದೇಶವನ್ನಾಗಿ ಕಟ್ಟುವ ಶಕ್ತಿ ಪಡೆದಿದ್ದಾರೆ ಎಂದು ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ತಿಳಿಸಿದರು.

ಪಟ್ಟಣದ ಜೆಎಸ್ಎಸ್ ಸಭಾ ಭವನದಲ್ಲಿ ಶನಿವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ದೇಶವನ್ನು ಬಿಜೆಪಿ ಪಕ್ಷ ಯಶಸ್ವಿಯಾಗಿ ಮುನ್ನಡೆಸುತ್ತಿದೆ. ವಿಕಸಿತ ಭಾರತ ಕಲ್ಪನೆಯಡಿ ಭಾರತ ವಿಶ್ವ ಗುರುವಾಗುವ ಕಾಲ ಸಮೀಪಿಸುತ್ತಿದ್ದು, ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರನ್ನು 3ನೇ ಬಾರಿ ಪ್ರಧಾನಿ ಮಾಡುವ ಅವಕಾಶ ನಮಗೆ ಒದಗಿ ಬಂದಿದೆ. ದೇಶದ ಭದ್ರತೆ, ಐಕ್ಯತೆ, ದೇಶದ ಸಂರಕ್ಷಣೆಗಾಗಿ ಬಿಜೆಪಿ ಪಕ್ಷ ದೇಶಕ್ಕೆ ಅನಿವಾರ್ಯ ಎಂದರು.

ಲೋಕಸಭಾ ಚುನಾವಣೆ ಧರ್ಮ–ಅಧರ್ಮ ನಡೆಯುತ್ತಿರುವ ಹಾಗೂ ನಮ್ಮತನ ಉಳಿಸಿಕೊಳ್ಳಲು ನಡೆಯುತ್ತಿರುವ ಯುದ್ಧ. 75 ವರ್ಷಗಳಿಂದ ಛಿದ್ರ ಛಿದ್ರವಾಗಿದ್ದ ದೇಶವನ್ನು ಒಗ್ಗೂಡಿಸುವ ಕೆಲಸವನ್ನು ಮೋದಿ ಮಾಡುತ್ತಿದ್ದಾರೆ. ಭಾರತವನ್ನು ಪ್ರಪಂಚದಲ್ಲಿಯೇ ಯಾರೂ ಊಹೆ ಮಾಡದ ರೀತಿ ಮೋದಿ ಅಭಿವೃದ್ಧಿಗೊಳಿಸಲಿದ್ದಾರೆ. ಕೇಂದ್ರ ಸರ್ಕಾರದಿಂದ ಯಾವುದೇ ಕಾಟಾಚಾರದ ಕಾರ್ಯಕ್ರಮ ಜಾರಿಯಾಗಿಲ್ಲ. ಬಡವರಿಗೆ ಏನೇನೋ ಕೊಡುತ್ತೇವೆ ಎಂದು ಆಸೆ ತೋರಿಸಿ ಅವರನ್ನು ಬೀದಿಗೆ ಬಂದು ಕಾಯುವ ಪರಿಸ್ಥಿತಿಗೆ ಜನರನ್ನು ಕೂರಿಸಿಲ್ಲ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು



ತಿ.ನರಸೀಪುರದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಮುಖಂಡರು ಉದ್ಘಾಟಿಸಿದರು.

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ 10 ವರ್ಷಗಳಲ್ಲಿ ನಿಮ್ಮ ಅನ್ನವನ್ನು ನೀವೇ ಸಂಪಾದಿಸಿಕೊಳ್ಳಬೇಕೆಂಬ ಯೋಜನೆಯೊಂದಿಗೆ ಕಾರ್ಯಕ್ರಮ ರೂಪಿಸಿದೆ. ನೀವು ಮತ್ತೊಬ್ಬರ ಹತ್ತಿರ ಭಿಕ್ಷೆ ಬೇಡಿ ಬದುಕಬೇಡಿ. ಸ್ವಾಭಿಮಾನಿಗಳಾಗಿ ಎಂಬ ಪರಿಕಲ್ಪನೆ ಮೋದಿಯವರ ವಿಕಸಿತ ಭಾರತದ ಕನಸಾಗಿದೆ ಎಂದರು.

**ನನಗೊಂದು ಅವಕಾಶ ಕೊಡಿ:** ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನನಗೆ ಆಶೀರ್ವಾದ ಮಾಡಿದೆ. 1999ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕೊಳ್ಳೇಗಾಲದಿಂದ ಸ್ಪರ್ಧಿಸಿದ್ದೆ ಎಂದ ಅವರು, 31 ವರ್ಷಗಳಿಂದ ರಾಜಕಾರಣದಲ್ಲಿದ್ದು, ಯಾವುದೇ ಭ್ರಷ್ಟಾಚಾರದಲ್ಲಿ ಭಾಗಿಯಾಗಿಲ್ಲ. 17 ವರ್ಷ ರಾಜಶೇಖರ ಮೂರ್ತಿ ಅವರೊಂದಿಗೆ ರಾಜಕೀಯ ಮಾಡಿದ್ದೇನೆ. ಅಲ್ಲದೇ ಕಾರ್ಯಕರ್ತರನ್ನು ಬೆಳೆಸಿದ್ದೇನೆ. ಯಾರಿಗೂ ಮೋಸ ಮಾಡಿಲ್ಲ. ಯಾರಿಗೂ ಕೆಡುಕು ಬಯಸಿಲ್ಲ. ಇತ್ತೀಚೆಗೆ ನನ್ನನ್ನು ಆಮಿಷಕ್ಕೆ ಬಲಿಯಾಗುತ್ತಾನೆ ಎಂದು ಸುಳ್ಳು ಸುದ್ದಿ ಹರಡಲಾಗಿತ್ತು. ಆದರೆ ಪ್ರಾಣ ಹೋದರೂ ಆ ಕೆಲಸ ಮಾಡಲ್ಲ. ಧರ್ಮದ ದಾರಿಯಲ್ಲಿ ನಡೆಯುತ್ತೇನೆ. ಹಾಗಾಗಿ ಪಕ್ಷ ನನಗೆ ಕೊಟ್ಟಿರುವ ಅವಕಾಶ ಸದುಪಯೋಗಪಡಿಸಿಕೊಳ್ಳಲು, ನಿಮ್ಮೆಲ್ಲರ ಸೇವೆ ಮಾಡಲು ನನಗೊಂದು ಅವಕಾಶ ಮಾಡಿಕೊಡಿ, ನಿಮ್ಮ ಮನೆ ಮಗನಂತೆ ಕಾರ್ಯ ನಿರ್ವಹಿಸುತ್ತೇನೆ ಎಂದು ಮನವಿ ಮಾಡಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ದೇಶದಲ್ಲಿ ಉತ್ತಮ ಹಾಗೂ ಭ್ರಷ್ಟಾಚಾರ ರಹಿತ ಆಡಳಿತ ನಡೆಸಿದ ಪ್ರಧಾನಿ ಮೋದಿ ಮತ್ತೊಮ್ಮೆ ದೇಶದ ಪ್ರಧಾನಿಯಾಗಲು ಈ ಚುನಾವಣೆ ಮಹತ್ವದ್ದಾಗಿದೆ ಎಂದರು.

ಈ ವೇಳೆ ಬಿಜೆಪಿ ಮುಖಂಡ ಡಾ.ರೇವಣ್ಣ, ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್, ನಿಕಟಪೂರ್ವ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪ್ರಭಾರಿ ಸುರೇಶ್ ಬಾಬು, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್, ಕಾರ್ಯದರ್ಶಿಗಳಾದ ಎನ್.ಎಂ.ರಾಮಚಂದ್ರ, ಹೆಳವರಹುಂಡಿ ಸಿದ್ದಪ್ಪ, ಗೂಳಿ ಮಹೇಶ್, ಡಾ.ಮಲ್ಲಿಕಾರ್ಜುನಸ್ವಾಮಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಾಮ್ರಾಟ್ ಸುಂದರೇಶನ್, ಸೋಸಲೆ ಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಪುರಸಭಾ ಸದಸ್ಯ ಕಿರಣ್, ಮಾಜಿ ಸದಸ್ಯ ಎನ್.ಲೋಕೇಶ್, ಸಂಚಾಲಕ ಕರೋಹಟ್ಟಿ ಬಸವರಾಜು, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ದಾಸಯ್ಯ, ಡಾ. ಶಿವರಾಂ, ಮುಖಂಡರಾದ ಕುಮಾರ್, ಸಿದ್ದರಾಜು, ಶಿವಕುಮಾರ್, ವೆಂಕಟೇಶ್, ಅನಿಲ್ ಕುಮಾರ್, ಶಿವು, ಬಸವರಾಜು, ಆಡಿಟರ್ ಮಂಜುನಾಥ್ ಮತ್ತಿತರರಿದ್ದರು.

**ಜನಪರ ಕಾಳಜಿ ಇಲ್ಲದ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ**

ಜನಪರ ಕಾಳಜಿ ಇಲ್ಲದ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿಗೆ ಏಕೆ ಮತ ಹಾಕಬೇಕೆಂಬುದನ್ನು ಪ್ರತಿಯೊಬ್ಬರೂ ಯೋಚಿಸಬೇಕು. ನಮ್ಮ ಪಕ್ಷದ ಅಭ್ಯರ್ಥಿ ಬೆಳಗ್ಗೆ 4 ಗಂಟೆಗೆ ಎದ್ದು ಕಾರ್ಯಕರ್ತರು, ಮತದಾರರು, ದೇವಸ್ಥಾನ ಹಾಗೂ ಮಠ ಮಾನ್ಯಗಳಿಗೆ ಭೇಟಿ ನೀಡಿದರೆ, ಕಾಂಗ್ರೆಸ್ ಅಭ್ಯರ್ಥಿ ರಾತ್ರಿ ಮಲಗಿ ಮಧ್ಯಾಹ್ನ 12 ಗಂಟೆಗೆ ಎದ್ದರೆ ಯಾವ ಜನಪರ ಕೆಲಸ ಮಾಡಲು ಸಾಧ್ಯ ಎಂದು ಕಾಂಗ್ರೆಸ್ ಪಕ್ಷದ ಸಂಭಾವ್ಯ ಅಭ್ಯರ್ಥಿ ಸುನೀಲ್ ಬೋಸ್ ಹೆಸರೇಳದೇ ವ್ಯಂಗ್ಯವಾಡಿದ ಅವರು ಇದನ್ನು ಪ್ರಜ್ಞಾವಂತ ಮತದಾರರು ಗಂಭೀರವಾಗಿ ಯೋಚಿಸಿ ಮತ ಚಲಾಯಿಸಬೇಕು.

– **ಎನ್.ಮಹೇಶ್,** ಮಾಜಿ ಸಚಿವ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಊರು ಪೇರು ಭೈರವಕೋನಾ (ತೆ) | 4 ಪ್ರದರ್ಶನಗಳು, |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಕರಟಕ ಧಮನಕ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಸೈತಾನ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಭೀಮ (ತೆ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಜಾಕಿ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಪ್ರೇಮುಲು (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಬ್ಲಿಂಕ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ದಿಲ್ ಕುಷ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಊರು ಪೇರು ಭೈರವಕೋನಾ (ತೆ) | 4 ಪ್ರದರ್ಶನಗಳು |
| **ಪ್ರಭಾ** | |
| ಶಾಖಾಹಾರಿ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ಕುಂಗ್ ಫು ಪಾಂಡ 4(3ಡಿ) (ಇಂ): ಬೆ.11ಕ್ಕೆ, ಸಂ.4ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ಕರಟಕ ದಮನಕ (ಕ): ಮ.1ಕ್ಕೆ, ಓಂ ಭೀಮ್ ಬುಶ್ (ತೆ): ರಾ.10ಕ್ಕೆ. |
| ಸ್ಕ್ರೀನ್ 2 | ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.30ಕ್ಕೆ, ರಾ.7.20ಕ್ಕೆ, ದಿಲ್‌ಖುಷ್ (ಕ): ಮ.1.25ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.10ಕ್ಕೆ, ಅಂಚಕಲ್ಲಕೊಕ್ಕನ್ (ಮ): ರಾ.10ಕ್ಕೆ |
| ಸ್ಕ್ರೀನ್ 3 | ತೂತು ಕಾಸು (ಕ): ಬೆ.10.45ಕ್ಕೆ, ಲೈನ್‌ಮನ್ (ಕ): ಮ.1.30ಕ್ಕೆ, ಯೋಧ (ಹಿಂ): ಸಂ.4.15ಕ್ಕೆ, ಜಾಕಿ (ಕ): ರಾ.7.05ಕ್ಕೆ, ರಜಾಕರ್ ಸೈಲೆಂಟ್ ಜಿನೋಸೈಡ್ ಆಫ್ ಹೈದ್ರಾಬಾದ್ (ತೆ): ರಾ.9.55ಕ್ಕೆ. |
| ಸ್ಕ್ರೀನ್ 4 | ಜಾಕಿ (ಕ): ಬೆ.10.30ಕ್ಕೆ, ರೆಬಲ್ (ತ): ಮ.1.20ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಸಂ.4.10ಕ್ಕೆ, ರಾ.7.30ಕ್ಕೆ. |

### ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಮಡಗಾಂವ್ ಎಕ್ಸ್‌ಪ್ರೆಸ್ (ಹಿಂ): ಮ.12.15ಕ್ಕೆ, ಸಂ.6.15ಕ್ಕೆ, ರಾ.9.20ಕ್ಕೆ, ಸೈತಾನ್ (ಹಿಂ): ಮ.3.20ಕ್ಕೆ |
| ಸ್ಕ್ರೀನ್ 2 | ಜಾಕಿ (ಕ): ಮ.12.55ಕ್ಕೆ, ರಾ.7.15ಕ್ಕೆ, ಕರಟಕ ದಮನಕ (ಕ): ಸಂ.4ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ. |
| ಸ್ಕ್ರೀನ್ 3 | ಮಂಜುಮ್ಮೆಲ್ ಬಾಯ್ಸ್ (ಮ): ಬೆ.10ಕ್ಕೆ, ರಾ.7ಕ್ಕೆ, ಓಂ ಭೀಮ್ ಬುಶ್ (ತೆ): ಮ.1ಕ್ಕೆ, ಯೋಧ (ಹಿಂ): ಸಂ.4.05ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ರಾ.10ಕ್ಕೆ |
| ಸ್ಕ್ರೀನ್ 4 | ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.10ಕ್ಕೆ, ಮ.3.55ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.1.40ಕ್ಕೆ, ರಾ.7.35ಕ್ಕೆ, ರಾ.9.50ಕ್ಕೆ. |

### ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ. |
| ಸ್ಕ್ರೀನ್ 3 | ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

**ಸೂಚನೆ:** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಮಾಜಿ ಶಾಸಕ ಹೆಚ್‌ಪಿಎಂ ಭೇಟಿಯಾದ ಲಕ್ಷ್ಮಣ

## ಲೋಕಸಭಾ ಚುನಾವಣೆಯಲ್ಲಿ ಬೆಂಬಲಿಸುವಂತೆ ಮನವಿ



ಹುಣಸೂರು, ಮಾ.23– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನಿವಾಸಕ್ಕೆ ಭೇಟಿ ನೀಡಿ, ಅವರನ್ನು ಸನ್ಮಾನಿಸಿ ಲೋಕಸಭಾ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಕ್ಷೇತ್ರವಾದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಕಾಂಗ್ರೆಸ್ ಪಕ್ಷಕ್ಕೆ ಪ್ರತಿಷ್ಠೆಯ ಕ್ಷೇತ್ರವಾಗಿದೆ. ಆದ್ದರಿಂದ ಶತಾಯಗತಾಯ ಕ್ಷೇತ್ರದಲ್ಲಿ ಪಕ್ಷ ಗೆಲುವು ಸಾಧಿಸಲೇಬೇಕು. ನಮ್ಮ ಎದುರಾಳಿ ಯಾರೇ ಆದರೂ ಚುನಾವಣೆಯಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರು ನಾನೇ ಅಭ್ಯರ್ಥಿ ಎಂದು ಭಾವಿಸಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಮತದಾರರಿಗೆ ತಿಳಿಸುವ ಮೂಲಕ ಪಕ್ಷದ ಗೆಲುವಿಗೆ ಶ್ರಮಿಸಬೇಕು ಎಂದರು. ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಸೇರಿದಂತೆ ಇತರರಿದ್ದರು.

# ಸಕ್ಕರೆ ಕಾರ್ಖಾನೆಗೆ ಭೂಮಿ ನೀಡಿ, ಕಾಯಂ ಉದ್ಯೋಗಕ್ಕೆ ಹೋರಾಟ ನಡೆಸುತ್ತಿದ್ದ ವೃದ್ಧೆ ಸಾವು

ನಂಜನಗೂಡು, ಮಾ.23– ತಾಲೂಕಿನ ಅಳಗಂಚಿ ಗ್ರಾಮದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಎದುರು ಭೂಮಿ ಕಳೆದುಕೊಂಡ ರೈತರು ಕಾಯಂ ಉದ್ಯೋಗ ನೀಡುವಂತೆ ನಡೆಸುತ್ತಿರುವ ಹೋರಾಟದಲ್ಲಿ ಭಾಗಿಯಾಗಿದ್ದ ವಯೋವೃದ್ಧ ಮಹಿಳೆ ನಿಂಗಮ್ಮ (72) ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಬಸವರಾಜು ಸುದ್ದಿಗಾರರೊಂದಿಗೆ ಮಾತನಾಡಿ, 32 ವರ್ಷಗಳ ಹಿಂದೆ ಕಾರ್ಖಾನೆ ನಿರ್ಮಾಣಕ್ಕಾಗಿ ಅಳಗಂಚಿ ಗ್ರಾಮದ ನಿಂಗಮ್ಮ ಕುಟುಂಬ ಜಮೀನು ನೀಡಿದ್ದು, ಕಾರ್ಖಾನೆ ಆಡಳಿತ ಮಂಡಳಿ ಕುಟುಂಬದ ಸದಸ್ಯರೊಬ್ಬರಿಗೆ ಕಾಯಂ ಕೆಲಸ ನೀಡುವ ಭರವಸೆ ನೀಡಿತ್ತು. ನಿಂಗಮ್ಮನವರ ಮೊಮ್ಮಗ ಮಹದೇವಸ್ವಾಮಿಗೆ ಹೊರಗುತ್ತಿಗೆ ಕಾರ್ಮಿಕನಾಗಿ ಉದ್ಯೋಗ ನೀಡಿದ್ದ ಆಡಳಿತ ಮಂಡಳಿ ಕಳೆದ 10 ವರ್ಷಗಳಿಂದ ಯಾವುದೇ ಕನಿಷ್ಠ ಸೌಲಭ್ಯ ನೀಡದೆ ಕೆಲಸ ಮಾಡಿಸಿಕೊಳ್ಳುತ್ತಿತ್ತು. ಭೂಮಿ ಕಳೆದುಕೊಂಡ ರೈತರು ಸೇರಿದಂತೆ ತಮ್ಮ ಮೊಮ್ಮಗನಿಗೆ ಕಾಯಂ ಉದ್ಯೋಗ ನೀಡುವಂತೆ



ಒತ್ತಾಯಿಸಿ ನಿಂಗಮ್ಮ ಕಳೆದ 42 ದಿನಗಳಿಂದ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. 72 ವರ್ಷದ ಹಿರಿಯ ಜೀವ ಬಿಸಿಲಿನ ತೀವ್ರತೆ ತಾಳಲಾಗದೇ ಮಾ.20 ರಂದು ಅಸ್ವಸ್ಥಗೊಂಡಿದ್ದರಿಂದ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದರು.

ಇದೇ ವೇಳೆ ಮೃತ ನಿಂಗಮ್ಮನ ಶವವನ್ನು ಕಾರ್ಖಾನೆ ಮುಂಭಾಗ ಇಟ್ಟು ಪರಿಹಾರಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲು ಸಜ್ಜಾಗಿದ್ದ ರೈತ ಸಂಘದ ಮುಖಂಡರನ್ನು ಸಮಾಧಾನಪಡಿಸಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಹಾಗೂ ಡಿವೈಎಸ್‌ಪಿ ರಘು, ತಾಲೂಕು ಆಡಳಿತದಿಂದ 50 ಸಾವಿರ ಪರಿಹಾರ ನೀಡಿ, ಶವಸಂಸ್ಕಾರ ಮಾಡುವಂತೆ ಮನವೊಲಿಸಿದರು. ಶನಿವಾರ ಸಂಜೆ ಗ್ರಾಮದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

# ಸ್ಮಶಾನ ನೀಡದಿದ್ದರೆ ಲೋಕಸಭಾ ಚುನಾವಣೆ ಬಹಿಷ್ಕಾರ

## ದೊಂಬರ ಕಾಲೋನಿ ನಿವಾಸಿಗಳ ತೀರ್ಮಾನ



ಹುಣಸೂರು, ಮಾ.23– ಶವ ಸಂಸ್ಕಾರಕ್ಕೆ ಸ್ಮಶಾನ ನೀಡದಿದ್ದರೆ ಮುಂಬರುವ ಲೋಕಸಭಾ ಚುನಾವಣೆ ಬಹಿಷ್ಕರಿಸುವುದಾಗಿ ತಾಲೂಕಿನ ದೊಂಬರ ಕಾಲೋನಿ ನಿವಾಸಿಗಳು ತೀರ್ಮಾನಿಸಿದ್ದಾರೆ.

ಶನಿವಾರ ತಾಲೂಕಿನ ಮರದೂರು ಗ್ರಾಪಂ ವ್ಯಾಪ್ತಿಯ ದೊಂಬರ ಕಾಲೋನಿ ನಿವಾಸಿ ರಾಜು ಅವರ ಪುತ್ರಿ ಪಲ್ಲವಿ(28) ಸಾವನ್ನಪ್ಪಿದ್ದರು. ಆದರೆ ಶವ ಸಂಸ್ಕಾರಕ್ಕೆ ಸ್ಥಳವಿಲ್ಲದೇ ಪರದಾಡುವಂತಾಯಿತು.

ಈ ವೇಳೆ ಸ್ಥಳಕ್ಕಾಗಮಿಸಿದ ಸತ್ಯ ಎಂಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಮಾತನಾಡಿ, ಕಳೆದ 35 ವರ್ಷಗಳಿಂದ ದೊಂಬರ ಕಾಲೋನಿ ನಿವಾಸಿಗಳು ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದರು. ನಿವೇಶನ ನೀಡುವಂತೆ ಹಲವು ಬಾರಿ ಪ್ರತಿಭಟನೆ ಮಾಡಿದ ನಂತರ ಸರ್ಕಾರದಿಂದ ನಿವೇಶನ ಹಂಚಿಕೆ ಮಾಡಲಾಗಿತ್ತು. ಆದರೆ ಇದುವರೆಗೂ ಅಲೆಮಾರಿ ಅಭಿವೃದ್ಧಿ ಕೋಶದಿಂದ ಆಶ್ರಯ ಮನೆಗಳ ಹಂಚಿಕೆಯಾಗಿಲ್ಲ. ಹಾಗೂ ಗ್ರಾಮ ಮೂಲ ಸೌಲಭ್ಯದಿಂದ ವಂಚಿತವಾಗಿದೆ. ಈ ಹಿಂದಿನ ಶಾಸಕರ ನಿರ್ಲಕ್ಷ್ಯದಿಂದ ಗ್ರಾಮ ಅಭಿವೃದ್ಧಿ ಕಾಣಲಿಲ್ಲ. ಸ್ಮಶಾನ ಸಹ ಗ್ರಾಮದಲ್ಲಿ ಇಲ್ಲ. ಇಂದು ಈ ಯುವತಿಯ ಶವ ಸಂಸ್ಕಾರ ಮಾಡಲು ಕುಟುಂಬ ಪರದಾಡಿದೆ ಎಂದರು.

ಮುಂಬರುವ ದಿನಗಳಲ್ಲಿ ತಾಲೂಕು ಆಡಳಿತ ಶವ ಸಂಸ್ಕಾರಕ್ಕೆ ಸ್ಮಶಾನ ಕಲ್ಪಿಸದಿದ್ದರೆ ಲೋಕಸಭಾ ಚುನಾವಣೆ ಬಹಿಷ್ಕರಿಸುತ್ತೇವೆ ಎಂದರು.

ಇದೇ ವೇಳೆ ಪಕ್ಕದ ಗ್ರಾಮದ ನಿವಾಸಿ ಗೌತಮ್ ತಮ್ಮ ಜಾಗದಲ್ಲಿ ಶವಸಂಸ್ಕಾರ ನಡೆಸಲು ಅನುವು ಮಾಡಿಕೊಟ್ಟರು. ಈ ವೇಳೆ ಗ್ರಾಮಸ್ಥರು ಗೌತಮ್ ಅವರಿಗೆ ಧನ್ಯವಾದ ತಿಳಿಸಿದರು. ಗ್ರಾಮದ ಶಿವರಾಜು, ಗೌತಮ್, ಕೃಷ್ಣ, ಶಿವು, ನಾಗರಾಜು, ರಾಜು, ರುಕ್ಮಿಣಿ, ಗಾಯಿತ್ರಿ ಹಾಗೂ ಕಾಲೋನಿಯ ಮೂವತ್ತಕ್ಕೂ ಹೆಚ್ಚು ಜನರಿದ್ದರು.

# ಈರುಳ್ಳಿ ರಫ್ತು ನಿಷೇಧ ವಿಸ್ತರಿಸಿದ ಕೇಂದ್ರ

ನವದೆಹಲಿ, ಮಾ.23– ದೇಶೀಯ ಲಭ್ಯತೆಯನ್ನು ಹೆಚ್ಚಿಸಲು ಮತ್ತು ಅದರ ಬೆಲೆಗಳನ್ನು ನಿಯಂತ್ರಣದಲ್ಲಿಡಲು ಕೇಂದ್ರ ಸರ್ಕಾರ ಮುಂದಿನ ಆದೇಶದವರೆಗೆ ಈರುಳ್ಳಿ ಮೇಲಿನ ರಫ್ತು ನಿಷೇಧವನ್ನು ಶನಿವಾರ ವಿಸ್ತರಿಸಿದೆ. ಮೊದಲು ಈ ವರ್ಷ ಮಾರ್ಚ್ 31ರವರೆಗೆ ಈರುಳ್ಳಿ ರಫ್ತು ನಿಷೇಧಿಸಲಾಗಿತ್ತು.

ಈರುಳ್ಳಿ ಮೇಲಿನ ರಫ್ತು ನಿಷೇಧವನ್ನು ಮುಂದಿನ ಆದೇಶದವರೆಗೆ ವಿಸ್ತರಿಸಲಾಗಿದೆ ಎಂದು ವಿದೇಶಿ ವ್ಯಾಪಾರ ನಿರ್ದೇಶನಾಲಯ(ಡಿಜಿಎಫ್‌ಟಿ) ಮಾರ್ಚ್ 22 ರ ಅಧಿಸೂಚನೆಯಲ್ಲಿ ತಿಳಿಸಿದೆ. DGFT ರಫ್ತು ಮತ್ತು ಆಮದು–ಸಂಬಂಧಿತ ಸಮಸ್ಯೆಗಳೊಂದಿಗೆ ವ್ಯವಹರಿಸುವ ಸಚಿವಾಲಯದ ಒಂದು ಅಂಗವಾಗಿದೆ. ಕೇಂದ್ರ ಸರ್ಕಾರ ಡಿಸೆಂಬರ್ 8, 2023 ರಂದು ಈರುಳ್ಳಿ ರಫ್ತು ನಿಷೇಧಿಸಿತು.

# ನಾಗರಹೊಳೆಯಲ್ಲಿ ಹುಲಿ ಕಳೇಬರ ಪತ್ತೆ

ಹುಣಸೂರು, ಮಾ.23– ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವನ್ಯಜೀವಿ ವಲಯದ ಗಣಂಗೂರು ಶಾಖೆಯ ಗಸ್ತಿನ ತಾವರೆಕೆರೆ ಅರಣ್ಯ ಪ್ರದೇಶದಲ್ಲಿ ಸುಮಾರು 13 ವರ್ಷದ ಹೆಣ್ಣು ಹುಲಿ ಕಳೇಬರ ಪತ್ತೆಯಾಗಿದೆ.

ಶನಿವಾರ ಬೆಳಗ್ಗೆ ಅರಣ್ಯ ಸಿಬ್ಬಂದಿ ಬೀಟ್‌ನಲ್ಲಿದ್ದ ವೇಳೆ ಹುಲಿ ಕಳೇಬರ ಪತ್ತೆಯಾಗಿದೆ. ತಕ್ಷಣ ಈ ವಿಚಾರವನ್ನು ಮೇಲಧಿಕಾರಿಗಳಿಗೆ ತಿಳಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ದಯಾನಂದ್, ಹರ್ಷ ಕುಮಾರ್, ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಚಿಕ್ಕ ನರಗುಂದ, ಪಶು ವೈದ್ಯಾಧಿಕಾರಿ



ಗಳಾದ ರಮೇಶ್, ಭವಿಷ್ಯ ಕುಮಾರ್ ಹಾಗೂ ರಾಷ್ಟ್ರೀಯ ಹುಲಿ ಪ್ರಾಧಿಕಾರದ ನಾಮ ನಿರ್ದೇಶನ ಸದಸ್ಯರಾದ ಬೋಸ್ ಮಾದಪ್ಪ, ತಮ್ಮಯ್ಯ, ಗ್ರಾಪಂ ಸದಸ್ಯ ನವೀನ್, ಅರಣ್ಯಾಧಿಕಾರಿ ದೇವರಾಜು ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು.



ಹೆಚ್.ಡಿ.ಕೋಟೆ ತಾಲೂಕಿನ ಜಿನ್ನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಂಪಾಪುರ ಠಾಣೆ ಪೊಲೀಸ್ ಸಿಬ್ಬಂದಿ ಕಲಿಕೋಪಕರಣಗಳನ್ನು ವಿತರಿಸಿದರು. ಈ ವೇಳೆ ಮುಖ್ಯ ಶಿಕ್ಷಕಿ ಉಮಾ, ಪೊಲೀಸ್ ಸಿಬ್ಬಂದಿಗಳಾದ ಅಭಿಲಾಷ್, ಮಹೇಶ್, ಸುರೇಶ್, ಸಹಾಯಕರಾದ ಚಲುವರಾಜ್, ವರದಿಗಾರ ಪ್ರಶಾಂತ್, ಶಾಲೆ ಸಿಬ್ಬಂದಿ ವರ್ಗ ಹಾಜರಿದ್ದರು.

# ನದಿಗೆ ತ್ಯಾಜ್ಯ ಬಿಸಾಡುವವರ ವಿರುದ್ಧ ಸೂಕ್ತ ಕ್ರಮ

## ಪುರಸಭೆ ಮುಖ್ಯಾಧಿಕಾರಿ ಸುರೇಶ್ ಎಚ್ಚರಿಕೆ

ಹೆಚ್.ಡಿ.ಕೋಟೆ, ಮಾ.23– ತಾರಕ ನದಿಗೆ ತ್ಯಾಜ್ಯ ಬಿಸಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ತಾರಕ ನದಿಯಲ್ಲಿ ಪೌರ ಕಾರ್ಮಿಕರು ಕೋಳಿ, ಮೀನಿನ ತ್ಯಾಜ್ಯ ತೆರವುಗೊಳಿಸುತ್ತಿದ್ದ ವೇಳೆ ಮಾತನಾಡಿದ ಅವರು, ಪಟ್ಟಣ ವ್ಯಾಪ್ತಿಯ ಮೀನು, ಕೋಳಿ ಮಾಂಸದ ಅಂಗಡಿ ಮಾಲೀಕರು ಈ ಹಿಂದೆ ಪುರಸಭೆಯಲ್ಲಿ ಪರವಾನಗಿ ಪಡೆದು ಮಾಂಸ ಮಾರಾಟ ಮಾಡುತ್ತಿದ್ದರು. ಹೀಗಾಗಿ ನಾವು ಪುರಸಭೆ ವಾಹನಗಳನ್ನು ಅಂಗಡಿ ಬಳಿ ಕಳುಹಿಸಿ ತ್ಯಾಜ್ಯ ಸಂಗ್ರಹಿಸುತ್ತಿದ್ದೇವು. ಆದರೆ ಇದೀಗ ಅಂಗಡಿ ಮಾಲೀಕರು ಪರವಾನಗಿ ಪಡೆಯದ ಕಾರಣ ವಾಹನಗಳು ಅಂಗಡಿ ಬಳಿ ತೆರಳಿ ತ್ಯಾಜ್ಯ ಸಂಗ್ರಹಿಸುತ್ತಿಲ್ಲ. ಬದಲಿಗೆ ಮಾಂಸದ ಅಂಗಡಿಯಲ್ಲಿ ಸಂಗ್ರಹವಾಗುವ ತ್ಯಾಜ್ಯಗಳನ್ನು ಸಾರ್ವಜನಿಕ ಸ್ಥಳದಲ್ಲಿ ಬಿಸಾಡದೆ



ವಡ್ಡರಗುಡಿ ಬಳಿಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ತೆಗೆದುಕೊಂಡು ಹೋಗುವಂತೆ ಮಾಲೀಕರಿಗೆ ಸೂಚಿಸಿದ್ದೇವು. ಆದರೆ ಅಂಗಡಿ ಮಾಲೀಕರು ಅದನ್ನು ಪಾಲಿಸದೇ ತಮ್ಮ ಮಾಂಸದ ಅಂಗಡಿಯಲ್ಲಿ ಶೇಖರಣೆಯಾಗುವ ತ್ಯಾಜ್ಯವನ್ನು ತಾರಕ ನದಿಗೆ ಬಿಸಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಇಂದು ಪೌರಕಾರ್ಮಿಕರು ಪುರಸಭಾಧಿಕಾರಿಗಳ ನೇತೃತ್ವದಲ್ಲಿ ನದಿಯಲ್ಲಿ ಬಿದ್ದಿರುವ ತ್ಯಾಜ್ಯ ತೆರವು ಕಾರ್ಯದಲ್ಲಿ ತೊಡಗಿದ್ದಾರೆ ಎಂದರು.

ಈ ತಿಂಗಳ ಅಂತ್ಯದೊಳಗೆ ಮೀನು, ಕೋಳಿ ಸೇರಿದಂತೆ ಇನ್ನಿತರ ಮಾಂಸ ಮಾರಾಟಗಾರರು ಉದ್ಯಮ ಪರವಾನಗಿ ತೆಗೆದುಕೊಳ್ಳದಿದ್ದರೆ ಅಂಗಡಿಗಳನ್ನು ಬಂದ್ ಮಾಡಿಸಲಾಗುವುದು. ಅಲ್ಲದೇ ನದಿಗೆ ತ್ಯಾಜ್ಯ ಬಿಸಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸ್ವಚ್ಛತಾ ಕಾರ್ಯದಲ್ಲಿ ಪರಿಸರ ಅಭಿಯಂತರ ರಕ್ಷಿತ್, ಆರೋಗ್ಯ ನಿರೀಕ್ಷಕ ಹರೀಶ್, ಸ್ವಚ್ಛತೆ ಮೇಲ್ವಿಚಾರಕರಾದ ಸುಬ್ರಹ್ಮಣ್ಯ, ಗಣೇಶ್, ಶ್ರೀರಂಗ ಹಾಗೂ ಸಿಬ್ಬಂದಿಗಳಾದ ಮಂಜು, ಬಣ್ಣಾರಿ, ವಿರಾಜ್, ಕುಮಾರ್, ಗಣೇಶ್, ವೆಂಕಟೇಶ್, ನಂಜಯ್ಯ ಸುಮಾರು 15ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಪಟ್ಟಣದ ಹೃದಯ ಭಾಗದಲ್ಲಿರುವ ತಾರಕ ನದಿಗೆ ಹಲವು ದಿನಗಳಿಂದ ಕೋಳಿ, ಮೀನು ಸೇರಿದಂತೆ ಇನ್ನಿತರ ತ್ಯಾಜ್ಯಗಳನ್ನು ಮೂಟೆ ಕಟ್ಟಿ ಬಿಸಾಡುತ್ತಿದ್ದಾರೆ. ಇದರಿಂದ ಪರಿಸರ ಹಾಳಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇರುತ್ತದೆ. ತಾರಕ ನದಿ ನೀರು ಮುಂದೆ ಕಬಿನಿ ನದಿಗೆ ಸೇರಲಿದ್ದು, ಮೈಸೂರು, ಬೆಂಗಳೂರು ಸೇರಿದಂತೆ ಇತರ ಪ್ರದೇಶಗಳಲ್ಲಿ ಈ ನೀರನ್ನು ಉಪಯೋಗಿಸುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ. ಹೀಗಾಗಿ ಸಂಬಂಧಪಟ್ಟ ಪುರಸಭಾ ಅಧಿಕಾರಿಗಳು, ಕಬಿನಿ ಕಾರ್ಯಪಾಲಕ ಅಭಿಯಂತರರು, ತಾರಕ ಸಹಾಯಕ ಕಾರ್ಯಪಾಲಕ ಅಭಿಯಂತರರು ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು.

– **ಕನ್ನಡ ಪ್ರಮೋದ್,** ತಾಲೂಕು ಕಸಾಪ ಅಧ್ಯಕ್ಷ.

## ಅರ್ಚಕ ಸ್ವಾಮಿ ನಿಧನ



ಬೆಟ್ಟದಪುರ, ಮಾ.23– ಗ್ರಾಮದ ವೀರಶೈವ ಲಿಂಗಾಯತ ಸಮಾಜದ ಮುಖಂಡ ಹಾಗೂ ಪವಾಡ ಬಸವೇಶ್ವರ ದೇವಾಲಯದ ಅರ್ಚಕ ಸ್ವಾಮಿ (50) ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಸೈಯದ್ ಅಫ್ಜಲ್



ಪಿರಿಯಾಪಟ್ಟಣ, ಮಾ.23– ತಾಲೂಕಿನ ಮಾಲಂಗಿ ಗ್ರಾಪಂ ಸದಸ್ಯ, ಅಂಕನಹಳ್ಳಿಕೊಪ್ಪಲು ಗ್ರಾಮದ ನಿವಾಸಿ ಸೈಯದ್ ಅಫ್ಜಲ್(52) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಮಸೀದಿಯಲ್ಲಿ ರಾತ್ರಿ 10 ಗಂಟೆಗೆ ನಮಾಜ್ ನಂತರ ಈದ್ಗಾ ಮೈದಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.23–ಮಾ.24ರಂದು ಬೆಳಗ್ಗೆ 10ರಿಂದ ಸಂಜೆ 5.30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ರಾಮಾನುಜ ರಸ್ತೆ 1ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್ ಗೇಟ್, ತಾವರೆಕೆರೆ, ಜಾಕಿ ಕ್ವಾಟರ್ಸ್, ರೇಸ್ ಕೋರ್ಸ್ ಹಿಂಭಾಗ, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತಮುತ್ತ, ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಬಿ.ಎನ್.ರಸ್ತೆ, ಚಾಮುಂಡಿಬೆಟ್ಟ, ಸಿದ್ದಾರ್ಥನಗರ, ಕುರುಬಾರಹಳ್ಳಿ, ಜೆಸಿನಗರ, ಕೆಸಿ ನಗರ, ಜೆಎಸ್‌ಎಸ್ ಆಯುರ್ವೇದಿಕ್ ಸುತ್ತ–ಮುತ್ತ, ಅರಮನೆ ಸುತ್ತಮುತ್ತ, ಶ್ರೀ ಹರ್ಷ ರಸ್ತೆ, ಸಂಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತ, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

## ಇಂದು ಯದುವೀರ್ ಕಚೇರಿ ಉದ್ಘಾಟನೆ

ಮೈಸೂರು, ಮಾ.23(ಎಸ್‌ಪಿಎನ್)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ನೂತನ ಕಚೇರಿಯನ್ನು ಕುವೆಂಪುನಗರದಲ್ಲಿ ಭಾನುವಾರ(ಮಾ.24) ಬೆಳಗ್ಗೆ 11.30ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಅವರ ಆಪ್ತ ಕಾರ್ಯದರ್ಶಿ ಕೆ.ರಘು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಚೇರಿ ವಿಳಾಸ: ಮನೆ ನಂ.4, ಗಗನಚುಂಬಿ ಜೋಡಿರಸ್ತೆ, ಕುವೆಂಪುನಗರ, ಮೈಸೂರು ಇಲ್ಲಿನ ನೆಲ ಮಹಡಿಯಲ್ಲಿ ಸಾರ್ವಜನಿಕರ ಸಂಪರ್ಕಕ್ಕಾಗಿ ತೆರೆಯಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**SITE FOR SALE**
30x40 Site for Sale in Brindavan Extension, Mysore And Concept Construction for Sale. Very good location
for details call: +91 8317309278

**ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ**



**ಶ್ರೀ ಸಿ. ಚಂದ್ರಶೇಖರ್‌ರವರು**
ಇವರು ದಿನಾಂಕ 13.03.2024ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾಗಿ ದಿನಾಂಕ 24.03.2024ನೇ ಭಾನುವಾರ ಬೆಳಗ್ಗೆ 10.00 ಗಂಟೆಗೆ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಸೂರ್ಕಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು: ಶ್ರೀಮತಿ ಸರ್ವಮಂಗಳ ಮತ್ತು ಮಕ್ಕಳು ಮೃತರ ಸಹೋದರರು ಹಾಗೂ ಕುಟುಂಬವರ್ಗದವರು
ಭೋಜನ: ಮಧ್ಯಾಹ್ನ 12.30 ಗಂಟೆಗೆ

**ಶ್ರೀಮತಿ ಲೀಲಾ ಶ್ರೀ ಹೆಚ್ ಚನ್ನಯ್ಯ ಕಲ್ಯಾಣ ಮಂಟಪ**
ವಾಲ್ಮೀಕಿ ರಸ್ತೆ, ವಿನಾಯಕನಗರ (ಪಡುವಾರಹಳ್ಳಿ)
4 ಸಿಲಿಂಡರ್, ಕ್ಲೀನಿಂಗ್, ಅಡಿಗೆ ಪಾತ್ರೆಗಳು ಎಲ್ಲಾ ಸೇರಿ 1,20,000/- ರೂ ಗಳು.
ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಖಾಲಿ ಇದೆ. (ಸಸ್ಯಾಹಾರ ಮಾತ್ರ)
ಸಂಪರ್ಕಿಸಿ: 8073929354 / 6362421885




ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up
MYSURU
9611177599

**FOR SALE**
- Sankalpa Central Park Yadavagiri 2 BHK Flat for sale
- 40x60 Site for Sale at Huyilalu Layout know as Nithyaananda Sagar, Layout Mysore

9481940921

**ತಕ್ಷಣ ಬೇಕಾಗಿದ್ದಾರೆ**
ITI/Diploma Mechanical Maintenance Department
ಕನಿಷ್ಠ 2 ವರ್ಷಗಳ ಅನುಭವ ಹೊಂದಿರಬೇಕು,
ಸ್ಥಳ : ತಾಂಡ್ಯ ಕೈಗಾರಿಕಾ ಪ್ರದೇಶ.
ಸಂಬಳ: 20000/- ದಿಂದ 30000/-.
ESI &PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
7337691919

**SITE FOR SALE**
30x40 East facing Site for Sale 80 feet Road Kanakadasa Nagar, Dattagalli
9880281757

**30x40 East Face Site @ Rs. 54 Lakhs**
Premio Phase 1, Ready to Construction, Adjacent to VTU Campus, Next to Lal Bahadur Shastri Nagar
Call: 9538583377

**DTCP SITES FOR SALE**
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

**Aquaguard & Kent Sales and Service**
Service Charge: 300/-
9901200444

**ಶ್ರೀ ಭಗವಾನ್ ಸಿಲ್ಕ್ಸ್ ಮ್ಯಾಚಿಂಗ್ ಸೆಂಟರ್**
ನಮ್ಮಲ್ಲಿ ರೆಡಿಮೇಡ್ ಬ್ಲೌಸ್
ಡಿಸೈನರ್ ಬ್ಲೌಸ್
ಪಾರ್ಟಿವೇರ್ ಬ್ಲೌಸ್
ಶೇಪ್‌ವೇರ್ ಮತ್ತು
ಮೇಟಿರಿಯಲ್‌ಗಳು
ದೊರೆಯುತ್ತದೆ
ಕೆ.ಆರ್. ಸರ್ಕಲ್, ಮೈಸೂರು

**WANTED**
Teachers fluent in English for an ENGLISH MEDIUM CHRISTIAN HIGH SCHOOL in Mandya for the next academic year 2024-25
B.Sc, B.Ed (Mathematics)
B.Sc, B.Ed (CBZ)
Salaries Rs. 25000/- Plus PF
Contact : Principal
6360801993
6360011505

**FOR SALE**
Site including House
1) 20x30 - 29,30,000/-
2) 30x40 - 58,60,000/-
Bank Loan available
B.M.I.C Approved
3km from Sathagalli Ring Road, Mysore
9141614633

**ಹಸಿರು ನಮ್ಮ ಉಸಿರು**

**PUBLIC NOTICE**

Our client is interested to purchase immovable property Measuring 9,956 square feet (as per UPOR measuring 9,765.12 square feet) bearing plot number 14, situated at 2nd Main Road, Yadavgiri, Mysore, together with a residential house comprising of ground floor measuring 3730 Sq Ft., and first floor measuring 3730 Sq Ft., (collectively, the "Schedule Property") from (i) Mr A Bharath Biddappa, (ii) Mr AB Mandanna, and (iii) Mr Mohan Kumar Belliappa Parvangada (collectively, the "Owners"). The Owners have represented that they are the joint and absolute owners of the Schedule Property having absolute, clear, marketable, right, title and interest therein and that there are no other person/s having any right or claim over the Schedule Property apart from them. The Owners have further represented that they have not mortgaged, created any lien or encumbered the Schedule Property or part thereof in any manner and that the Owners have not entered into any other agreement of sale/development agreement / memorandum of understanding/arrangement etc., with any person/s with regard to the Schedule Property. Any person/s having objection/s or claims shall with documentary evidence lodge their objections/claims within fifteen (15) days from the date of this notice with the undersigned, failing which, our client shall proceed with the above-mentioned transaction.

**DESCRIPTION OF THE SCHEDULE PROPERTY**

All that piece and parcel of corner plot No.14, measuring 9,956 square feet (as per UPOR measuring 9,765.12 square feet) situated on the 2nd Main Road, Yadavgiri, Mysore, together with a residential house comprising of ground floor measuring 3730 Sq Ft., and first floor measuring 3730 Sq Ft., and bounded as follows :

East : Second Main Road;
West : Temple Compound Wall;
North : Northern portion of site bearing No. 170/1; and
South : Road.

**Ms. Savitha K.G., Partner**
Poovayya & Co., Advocates and Solicitors
The Estate, Level Four, 121 Dickenson Road,
Bengaluru - 560 042

Place: Mysore Date: 23.03.2024

**ಮೈಸೂರು ಮಿತ್ರ ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಪ್ರೀ–ಸ್ಕೂಲ್ ಟೀಚರ್ಸ್
ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಪ್ರತಿಷ್ಠಿತ ಶಾಲೆಗೆ ಅಭ್ಯರ್ಥಿಗಳು ಪ್ರಿ–ಸ್ಕೂಲ್‌ನಲ್ಲಿ ಕನಿಷ್ಠ 2 ವರ್ಷಗಳ ಅನುಭವವನ್ನು ಹೊಂದಿರಬೇಕು ಮತ್ತು ಮಾಂಟೆಸ್ಸರಿ ತರಬೇತಿಯಲ್ಲಿ ಪದವಿ / ಡಿಪ್ಲೊಮಾ/ಪ್ರಮಾಣೀಕರಣವನ್ನು ಹೊಂದಿರಬೇಕು.
Mob: 9663866668



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷರಾದ ಮಾಜಿ ಸಚಿವರು, ಹಾಗೂ ಶಾಸಕರು **ತನ್ವೀರ್ ಸೇಠ್** ರವರಿಗೆ ಅಭಿನಂದನೆಗಳು
ಶುಭಕೋರುವವರು:– **ಪಿ.ರಾಜು**
ಅಶೋಕಪುರಂ
ಕೆಪಿಸಿಸಿ ಸದಸ್ಯರು / ಸಂಯೋಜಕರು

**S R K GRANDEUR CONVENTION CENTRE**
AUSPICIOUS WEDDING DATES AVAILABLE
April 25 - 26
May 11 - 12 & 19 - 20
June 12 - 13
On Hunsur Road, Next to Aishwarya Petrol Bunk
Call : 70199 37249

MUDA Approved
**SITES FOR SALE**
@ KBL Silicon City
30x40, 40x60 & 50x80
Behind Infosys, BEML Factory Main Road, Bastipura.
6364342244, 9686833300

**TO-LET**
Independent 2 BHK readily available on rent with all facilities at Martikyathnalli gate on Gaddige Main Road (Near new petrol bunk).
Genuine persons may contact:
Call : 97317 69347 / 99029 34365

**2 BHK HOME INTERIORS**
Starting @ ₹2.5 Lacs*
Home Space Mart TM
TALK TO OUR DESIGN TEAM
9108923123

**ANAND BROTHERS FAMILY STORE**
BUY 3 GET 1 OFFER AVAILABLE
BUY 1 GET 1 FREE ON 10+ INSTA ACCOUNT SHARES
FOR UGADI AND RAMZAAN
SAREES, DRESS, KURTIES, JEANS TOPS WESTREN WARES, KIDS WARE, MENS WARES ONLINE AND OFFLINE
ALL FAMILY SHOPPING AND WANTED 1000 + SALES GIRLS AND BOYS FOR SALES JOB GANDHI SQUARE, MYSORE
9606565552 - 7406788889

**ನಿಸರ್ಗ ಇಕೋ ಪ್ಯಾರಡೈಸ್**
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
HP HYLAND PROPERTIES · DTCP APPROVAL
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50 | 40x60 | 50x80
ಆಧುನಿಕ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
95133 01854
90713 86615

**ಪಿಎಚ್.ಡಿ ಪದವಿ ಪ್ರಧಾನ**
**ಶ್ರೀ ಬಸವರಾಜು ಎಚ್ ಆರ್**



ಹಾಸನದ ಬಸವರಾಜು ಎಚ್.ಆರ್. ಅವರು ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಮಂಡಿಸಿದ ಮಹಾ ಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ಪ್ರಧಾನ ಮಾಡಿದೆ.
"ಎಕ್ಸ್‌ಪರಿಮೆಂಟಲ್ ಇನ್ವೆಸ್ಟಿಗೇಷನ್ಸ್ ಆನ್ ಮೆಶಿನಬಿಲಿಟಿ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಟೈಟಾನಿಯಂ ಬೇಸ್ಡ್ ಅಲ್ಲಾಯ್ಸ್ ಯೂಸಿಂಗ್ ವಯರ್ ಎಲೆಕ್ಟ್ರಿಕಲ್ ಡಿಸ್ಚಾರ್ಜ್ ಮಶಿನಿಂಗ್"
ಈ ವಿಷಯದಲ್ಲಿ ಇವರು ಮಹಾಪ್ರಬಂಧ ಮಂಡಿಸಿದ್ದರು.
ಜಿಇಸಿ ಕಾಲೇಜಿನ ಡಾ. ಮಂಜುನಾಥ್ ಎಸ್ ಶ್ರೀಮಂದನವರ್ ಮತ್ತು ಎಮ್ ಎಸ್ ಆರ್ ಯುಎಎಸ್ ಕಾಲೇಜಿನ ಡಾ. ಸುರೇಶ್ ಆರ್ ಮಾರ್ಗದರ್ಶನ ನೀಡಿದ್ದರು

**ಮೈಸೂರು ಮಿತ್ರ**
**ವಾರ್ಷಿಕೋತ್ಸವ ವಿಶೇಷ ಸಂಚಿಕೆ**

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

**ಪ್ರಧಾನ ಕಛೇರಿ**
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695


**ಕೊಡಗು** – ಪ್ರಸಾದ್, ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871
**ಹುಣಸೂರು** – ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626
**ಮಂಡ್ಯ** – ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325
**ಶ್ರೀರಂಗಪಟ್ಟಣ** – ಬಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
**ಯಳಂದೂರು** – ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191
**ಚಾಮರಾಜನಗರ** – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657
**ಟಿ. ನರಸೀಪುರ** – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
**ಗುಂಡ್ಲುಪೇಟೆ** – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426
**ಕೆ.ಆರ್. ನಗರ** – ಕೆ.ಬಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ಬಿ.ಬಿ.ರಸ್ತೆ, ಕೆ.ಆರ್. ನಗರ. 9448021368
**ಮಳವಳ್ಳಿ** – ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
**ಕೊಳ್ಳೇಗಾಲ** – ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರಳಿಕೇರಿ ಬೀದಿ, ಕೊಳ್ಳೇಗಾಲ 9916621007
**ಹಾಸನ** – ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175
**ಕುಶಾಲನಗರ** – ರಘು, ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401
**ಜಯಪುರ** – ಬಿಳಿಗಿರಿ, ಜಯಪುರ 9945479288
**ಪಿರಿಯಾಪಟ್ಟಣ** – ವೀರೇಶ್, ಪಿರಿಯಾಪಟ್ಟಣ 8660057128
**ವಿರಾಜಪೇಟೆ** – ಮಂಜುನಾಥ, ವಿರಾಜಪೇಟೆ 9900949353
**ಕೆ.ಆರ್.ಪೇಟೆ** – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438
**ಹೆಚ್.ಡಿ.ಕೋಟೆ** – ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452
**ಕೆ.ಎಂ.ದೊಡ್ಡಿ** – ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
**ನಂಜನಗೂಡು** – ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226
**ಹುಣಸೂರು** – ಹೆಚ್.ಆರ್. ಕೃಷ್ಣಕುಮಾರ್, ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093
**ಕೊಳ್ಳೇಗಾಲ** – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858



**NOT GETTING YOUR STAR OF MYSORE & ಮೈಸೂರು ಮಿತ್ರ**
Call: 98452-96447 / 99003-82840

**Summer Paradise @ IDEAL JAWA ROTARY SCHOOL**
- SHOOTING & ARCHERY
- PUBLIC SPEAKING
- FASHION SHOW / KARATE
- ADVENTURE & FIELD CAMP
- AND MORE

For Registration Call 6366543707



www.ijrs.in
HURRY UP!

**WANTED**
Applications are invited for the following posts

| Subject | Qualification |
|---|---|
| KG Teachers | NST & Montessori Training with Exp. |
| Primary Class Teachers | B'Ed with Experience for all Subjects |
| Dance Teachers | Eligible Candidate (Preferred) |
| Lady PE Instructor | Eligible Candidates with Experience |
| Social/Science/Hindi/English Teachers | B'Ed with Exp. for all Subjects |

Please apply to frontdesk@ijrs.in on or before **25th March 2024**
Application to be addressed to: The Hon. Secretary,
**Ideal Jawa Rotary School**, JLB, Road Mysuru.
Sd/- Hon. Secretary

|| वंदे श्री ऋषभं वीरं ||
**CHIEF GUEST**



**KARTHIK MAHESH**
Indian Actor,
Big Boss Kannada Season 10 WINNER

**PRADEEP**
Actor, Cricketer

OPEN FOR ALL REGISTER NOW
IIFL JITO AHIMSA RUN FOR PEACE FOR NON VIOLENCE
• ONE • ONE
PURPOSE RUN
RUN TOGETHER FOR AHIMSA
31ST MARCH ON SUNDAY 2024
RUN DISTANCE: 10 KM, 5 KM, 3 KM
Time: 5:30 am
Venue : Kote Sri Anjaneya Swamy Temple Mysore Palace North Gate, Mysore

Exciting Cash Prizes

| 10KM | 5KM | 3KM |
|---|---|---|
| 1st - 10,000/ | 1st - 7,000/ | 1st - 5,000/ |
| 2nd - 7,000/ | 2nd - 5,000/ | 2nd - 3,000/ |
| 3rd - 5,000/ | 3rd - 3,000/ | 3rd - 2,000/ |

PREVIOUS EDITION RECORDS: RECORD HOLDER · OFFICIAL ATTEMPT

Silver Sponsor: JAIN BUILD MART PVT. LTD.
In Association with: ARNOLD FITNESS, manipalhospitals, Chirag events
Food Sponsor: Smt Mohani Devi, Chaganrajji mutha, Mysore sales corporation
Cash Prize & Medal Sponsor: SHUBHAM
Cap Sponsor: High · ROTARY MYSORE
Digital Partner · Sports Partner: DECATHLON
जियो और जीने दो
Sri Ram MultiMedia Designer Mob:99644 49997
Contact Details: +91 99165 44413, 90369 09044

JITO MYSORE CHAPTER: Kantilal. S Jain - Chairman; Goutam Salecha - Chief Secretary
JITO LADIES WING MYSORE: Mona Bhatewra - Chairperson; Rajani Dagaliya - Chief Secretary; Sapna Gandhi - Convenor; Saritha Baghmar - Co-Convenor
JITO MYSORE YOUTH WING: Puneet Srisrimaal - Chairman; Anmol Srisrimaal - Chief Secretary
KKG ZONE: Ashokji salecha - Chairperson kkg | Dilipji jain - Chief secretary kkg | Chandraguptji kataria - Zone convener